ನಂದಿಬೆಟ್ಟ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಅರ್ಪಿಸುತ್ತಿರುವ ನಿಬಂಧ)

ಸಂಶೋಧಕಿ

ಮುನಿರತ್ನಮ್ಮ ಕೆ.ಎಚ್.

ಮಾರ್ಗದರ್ಶಕರು

ಡಾ. ಸಿ.ಮಹದೇವ

ಪ್ರಾಧ್ಯಾಪಕರು

ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ನಂದಿಬೆಟ್ಟ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಅರ್ಪಿಸುತ್ತಿರುವ ನಿಬಂಧ)

ಸಂಶೋಧಕಿ
ಮುನಿರತ್ನಮ್ಮ ಕೆ.ಎಚ್.

ಮಾರ್ಗದರ್ಶಕರು
ಡಾ. ಸಿ.ಮಹದೇವ
ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ಸಂಶೋಧಕರ ಪ್ರಮಾಣ ಪತ್ರ

ನಂದಿಬೆಟ್ಟ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಎಂಬ ಸಂಪ್ರಬಂಧವನ್ನು ಡಾ.ಸಿ.ಮಹದೇವ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Munirathnamma K H

ಮುನಿರತ್ನಮ್ಮ ಕೆ.ಎಚ್.
ಸಂಶೋಧಕಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 14/10/09
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

ನಂದಿಬೆಟ್ಟ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಮುನಿರತ್ನಮ್ಮ ಕೆ.ಎಚ್. ಅವರು ನನ್ನ ಮಾರ್ಗದರ್ಶನ ದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಸಿ.ಮಹದೇವ
ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 14-10-09
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ೧

ಪ್ರಸ್ತಾವನೆ

೧

ಪ್ರಸ್ತಾವನೆ

ಒಂದು ನಾಡಿನ ಚರಿತ್ರೆ ಎಂದರೆ ಅಲ್ಲಿನ ಜನರ ಸಮಷ್ಠಿಯ ಚರಿತ್ರೆ. ಅಂದರೆ ಅಲ್ಲಿನ ಜನರ ಜೀವನ, ಸಿದ್ಧಾಂತಗಳು ಆ ನಾಡಿನ ಐತಿಹಾಸಿಕ ಸ್ಮಾರಕಗಳು, ಇತಿಹಾಸ ಅವರ ಬದುಕಿನ ಮೌಲ್ಯಗಳನ್ನು ಪರಿಚಯಿಸುತ್ತದೆ. ಒಂದು ಐತಿಹಾಸಿಕ ಪ್ರದೇಶದ ಅಧ್ಯಯನವನ್ನು ಆ ನಾಡಿನ ಜನರ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ಚರಿತ್ರೆಯನ್ನು ಆ ಪ್ರದೇಶದಲ್ಲಿ ದೊರೆಯುವಂತಹ ಐತಿಹಾಸಿಕ ಸ್ಮಾರಕಗಳು, ಕಲೆ ಮತ್ತು ವಾಸ್ತುಶಿಲ್ಪವನ್ನು ಹಾಗೂ ಅಲ್ಲಿನ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಯಲು ಸಹಾಯಕವಾಗುತ್ತದೆ. ಪ್ರತಿಯೊಂದು ಪ್ರದೇಶವು ತನ್ನದೇ ಆದ ಇತಿಹಾಸವನ್ನು ಹೊಂದಿರುತ್ತದೆ. ಇತ್ತೀಚಿನ ದಿನಗಳಲ್ಲಿ ಸೂಕ್ಷ್ಮ ಅಧ್ಯಯನಕ್ಕೆ ಮಹತ್ವ ದೊರೆತು ಹಲವು ದೃಷ್ಟಿಕೋನದಲ್ಲಿ ಅಧ್ಯಯನಗಳು ನಡೆಯುತ್ತಿವೆ.

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ತನ್ನದೇ ಆದ ಮಹತ್ವದ ಸ್ಥಾನವನ್ನು ಹೊಂದಿದೆ. ವಿಶ್ವವಿಖ್ಯಾತ ನಂದಿಗಿರಿಧಾಮ, ಖ್ಯಾತ ಇಂಜಿನಿಯರ್ ಸರ್.ಎಂ.ವಿಶ್ವೇಶ್ವರಯ್ಯ ನವರ ಹುಟ್ಟೂರಾದ ಮುದ್ದೇನಹಳ್ಳಿ, ನಂದಿ, ಪಾಪಾಗ್ನಿಮಠ, ಚನ್ನಕೇಶವ ದೇವಾಲಯ, ರಂಗಸ್ಥಳದ ರಂಗನಾಥ ದೇವಾಲಯ, ಕಣಿವೆ ಬಸವಣ್ಣ, ಕಾಶಿ ಈಶ್ವರ ದೇವಾಲಯಗಳು, ೧೮೬೦ರ ಹಿಂದೆಯೇ ನಿರ್ಮಿಸಿದ್ದ ಕ್ಯಾಥೊಲಿಕ್ ಚರ್ಚ್, ಆದಿಚುಂಚನಗಿರಿಯ ಶಾಖಮಠ, ಪ್ರಸಿದ್ಧ ಶಿಕ್ಷಣ ಸಂಸ್ಥೆಗಳು ಜೊತೆಗೆ ತಾಲ್ಲೂಕು ಕೇಂದ್ರಗಳಲ್ಲಿಯೂ ಹಲವಾರು ಪ್ರಸಿದ್ಧ ಪ್ರವಾಸಿ ತಾಣಗಳಾದ ರಾಷ್ಟ್ರೀಯತೆಯ ಪ್ರತೀಕವಾದ ಭಾರತದ ಭೂಪಟವನ್ನು ಹೋಲುವ ಗುಡಿಬಂಡೆಯ ಅಮಾನಿಭೈರ ಸಾಗರ ಕೆರೆ, ಬಾಗೇಪಲ್ಲಿಯ ಗುಮ್ಮನಾಯಕನ ಕೋಟೆ, ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದೇ ಹೆಸರಾದ ಗೌರಿಬಿದನೂರಿನ ವಿಧುರಾಶ್ವತ್ಥ ಮುಂತಾದವುಗಳನ್ನು ತನ್ನೊಡಲಲ್ಲಿಟ್ಟುಕೊಂಡಿದೆ.

ಈ ಪ್ರದೇಶದಲ್ಲಿ ಪ್ರಾಚೀನ ಮಾನವನ ವಸತಿ ನೆಲೆಗಳಿವೆ. ಪ್ರಾಚೀನ ಕಾಲದಿಂದಲೂ ಅನೇಕ ರಾಜಮನೆತನಗಳು, ಸಾಮಂತರು ಹಾಗೂ ಪಾಳೆಯಗಾರರು ಆಡಳಿತ ನಡೆಸಿರುವ ಉಲ್ಲೇಖಗಳಿವೆ. ಅವರಲ್ಲಿ ಪಲ್ಲವರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರು

ಒಡೆಯರು, ಹೈದರ್, ಟಿಪ್ಪು ಸುಲ್ತಾನ ಮತ್ತು ಚಿಕ್ಕಬಳ್ಳಾಪುರದ ಪಾಳೆಯಗಾರರು ಹಾಗೂ ಆವತಿ ಪಾಳೆಯಗಾರರು ಪ್ರಮುಖರಾಗಿದ್ದಾರೆ. ಒಂದು ಪ್ರದೇಶದ ಐತಿಹಾಸಿಕ ಮಹತ್ವವನ್ನು ಅಲ್ಲಿ ದೊರೆಯುವ ಪುರಾತತ್ವ ಅವಶೇಷಗಳಿಂದ ತಿಳಯಬಹುದಾಗಿದೆ. ಜೊತೆಗೆ ಅಲ್ಲಿನ ಮೌಖಿಕ ಆಕರಗಳು ಸಹ ಪ್ರಮುಖವಾಗಿದೆ. ಈ ಜಿಲ್ಲೆಯು ೬ ತಾಲೂಕುಗಳನ್ನು ಹಾಗೂ ೨೧೦ ಗ್ರಾಮಗಳನ್ನು ಮತ್ತು ಪಟ್ಟಣಗಳನ್ನು ಹೊಂದಿದೆ. ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡಿರುವ ನಂದಿಬೆಟ್ಟವು ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಸಿದ್ಧಗಿರಿಧಾಮ ಮತ್ತು ಐತಿಹಾಸಿಕ ಸ್ಥಳ. ಬೆಂಗಳೂರಿನಿಂದ ೫೦ ಕಿ.ಮೀ. ದೂರದಲ್ಲಿ ಇದೆ. ಈ ಸ್ಥಳವು ಅನೇಕ ಐತಿಹಾಸಿಕ ಅವಶೇಷಗಳಿಂದಾಗಿ ಪ್ರಸಿದ್ಧಿ ಪಡೆದಿದೆ. ಸಮುದ್ರ ಮಟ್ಟದಿಂದ ೧.೪೭೮ ಮೀ. ಎತ್ತರವಿರುವ ಬೆಟ್ಟ ಆಶ್ರೇಣಿಯ ಅತಿದೊಡ್ಡ ಬೆಟ್ಟವಾಗಿದೆ.

ನಂದಿಕ್ಷೇತ್ರವು ಪೌರಾಣಿಕವಾಗಿಯೂ ಚಾರಿತ್ರಿಕವಾಗಿಯೂ ವಿಶೇಷ ಮಹತ್ವವನ್ನು ಪಡೆದಿದ್ದು, ಸಂದರ್ಶಿಸಲು ದೇಶವಿದೇಶಗಳಿಂದಲೂ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಕನ್ನಡ ಸಾಹಿತ್ಯ ಧಾರ್ಮಿಕ ಮತ್ತು ಶಿಲ್ಪಕ್ಷೇತ್ರಗಳಲ್ಲಿ ನಂದಿಯು ತನ್ನದೇ ಆದ ಉಜ್ವಲವಾದ ಇತಿಹಾಸವನ್ನು ಪಡೆದುಕೊಂಡಿದೆ. ಬೆಟ್ಟದ ಮೇಲಿನ ಯೋಗನಂದೀಶ್ವರ ದೇವಾಲಯ ಮತ್ತು ಬೆಟ್ಟದ ತಪ್ಪಲಿನಲ್ಲಿರುವ ಭೋಗನಂಧೀಶ್ವರ ಹಾಗೂ ಅರುಣಾಚಲೇಶ್ವರ ಜೋಡಿ ದೇವಾಲಯಗಳ ಶಿಲ್ಪ ಕಲೆಯು ಕಲಾ ಅಧ್ಯಯನಕಾರರನ್ನು ಹಾಗೂ ಪ್ರವಾಸಿಗರನ್ನು ಸೆಳೆಯುತ್ತದೆ. ನಂದಿಬೆಟ್ಟವನ್ನು ನಂದಿದುರ್ಗ, ನಂದಿಗಿರಿ, ಕುಷ್ಮಾಂಡಗಿರಿ ಎಂಬ ಹೆಸರುಗಳಿಂದ ಸಂಬೋಧಿಸಲಾಗುತ್ತದೆ. ಈ ಪ್ರದೇಶವು ಪಲ್ಲವರ ಕಾಲದಿಂದ ಪಾಳೆಯಗಾರರ ಕಾಲದವರೆಗೂ ಆಳ್ವಿಕೆ ಒಳಪಟ್ಟಿದ್ದು ಆಯಾ ಕಾಲದ ಗುರುತುಗಳನ್ನು ವಿಭಿನ್ನ ಬಗೆಯ ದೇವಾಲಯಗಳು, ಸ್ಮಾರಕಗಳು, ಶಿಲ್ಪಗಳು, ವಾಸ್ತುಶಿಲ್ಪ, ಶೈವ, ವೈಷ್ಣವ, ಜೈನ ಮುಂತಾದ ಪರಂಪರೆಗಳ ಗುರುತುಗಳನ್ನು ಉಳಿಸಿಕೊಂಡು ಬಂದಿದೆ.

ಹೀಗೆ ಚಾರಿತ್ರಿಕವಾಗಿ ಮಹತ್ವ ಪಡೆದ ನಂದಿಬೆಟ್ಟದ ಪರಿಸರವನ್ನು ಪ್ರಸ್ತುತ ಎಂ.ಫಿಲ್. ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಉದ್ದೇಶ

ಸಂಶೋಧಕರು ಒಂದು ವಿಷಯದ ಬಗ್ಗೆ ಅಧ್ಯಯನ ಕೈಗೊಳ್ಳುವ ಮೊದಲು ಯಾವ ಉದ್ದೇಶವನ್ನಿಟ್ಟುಕೊಂಡು ಆ ವಿಷಯವನ್ನು ಆಯ್ದುಕೊಂಡಿದ್ದೇನೆ ಎನ್ನುವುದು ಮುಖ್ಯ. ಅಧ್ಯಯನದ ವಿಷಯಕ್ಕೆ ಸಂಬಂಧಪಟ್ಟಂತೆ ಇಲ್ಲಿಯವರೆಗೆ ನಡೆದಿರುವ ಕೆಲಸ ಏನೆಂಬುದನ್ನು ತಿಳಿದುಕೊಂಡು ನಂತರ ಉಳಿದ ಯಾವ ಕೆಲಸವನ್ನು ಇಲ್ಲಿ ಮಾಡಲಾಗುತ್ತದೆ ಎಂದು ತಿಳಿಯಪಡಿಸಲಾಗುತ್ತದೆ. ಅಂದಗೆ ಹೊಸತನ್ನು ಹೇಳುವುದರ ಮೂಲಕ ಸಂಪ್ರಬಂಧವನ್ನು ಕಟ್ಟಿಕೊಡುವ ಕೆಲಸ ಮಾಡಲಾಗುತ್ತದೆ.

ಪ್ರಸ್ತುತ ನಂದಿಬೆಟ್ಟ ಕುರಿತಂತೆ ವೃತ್ತಪತ್ರಿಕೆಗಳಲ್ಲಿ ಹಲವು ಬಿಡಿ ವಿವರಗಳು ಹಾಗೂ ಸಣ್ಣ ಕೃತಿಗಳು ಪ್ರಕಟವಾಗಿವೆ. ದೇವಾಲಯ ಮತ್ತು ಇತರ ಅವಶೇಷಗಳನ್ನು ಕುರಿತು ಡಾ.ಎಂ.ಎಚ್. ಕೃಷ್ಣಮೂರ್ತಿ, ಗೋಪಾಲಗೌಡ ಕಲ್ಪಮಂಜಲಿ ಮೊದಲಾದವರು ಲೇಖನಗಳನ್ನು ಪ್ರಕಟಿಸಿದ್ದಾರೆ. ಇದರ ಜೊತೆಗೆ "ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಕೋಲಾರ ಜಿಲ್ಲೆ" ಸಂಪಾದಕರು ಎಚ್.ಚಿತ್ರರಂಜನ್, "ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ" ಸಂಪಾದಕರು ಡಾ. ಆರ್.ಗೋಪಾಲ್, ಹಯವದನ ರಾವ್ ರವರ ಮೈಸೂರು ಗ್ಯಾಸೆಟಿಯರ್, ಮೈಸೂರು ಅರ್ಕ್ಯಾಯಾಜಿಕಲ್ ರಿಪೋರ್ಟ್ ೧೯೩೨ ಎಂ.ಎಚ್.ಕೃಷ್ಣ Western Gange of Talikded by-Ramesh. ಕೋಲಾರ ಜಿಲ್ಲೆಯ ಗಂಗರ ದೇವಾಲಯಗಳು, ಡಾ. ದೇವರಕೊಂಡಾ ರೆಡ್ಡಿ, ಇತಿಹಾಸ ಸಂಪುಟ ದರ್ಶನ, ಬೆಂಗಳೂರು ಜಿಲ್ಲೆಯ ಶಾಸನ, ಸಂಪುಟ ೯, ಕನ್ನಡ ವಿಷಯ ವಿಶ್ವಕೋಶ, ಇವುಗಳಲ್ಲದೆ ಇನ್ನೂ ಅನೇಕ ಪ್ರಬಂಧಗಳು ಮತ್ತು ಲೇಖನಗಳು ಪ್ರಕಟಗೊಂಡಿದ್ದು ಅವುಗಳಲ್ಲಿ ನಂದಿಬೆಟ್ಟ ಪರಿಸರದ ಬಗ್ಗೆ ಮಾಹಿತಿ ಸಿಗುತ್ತದೆ. ಇವು ನಂದಿಬೆಟ್ಟದ ಇತಿಹಾಸ ಮತ್ತು ಪುರಾತತ್ವವನ್ನು ಕುರಿತಂತೆ ಭಾಗಶಃ ಅಧ್ಯಯನಗಳಾಗಿವೆ. ಹಾಗಾಗಿ ಸಮಗ್ರ ಹಾಗೂ ಸೂಕ್ಷ್ಮ ನೆಲೆಯಲ್ಲಿ ಅಧ್ಯಯನಕ್ಕೆ ನಡೆದಿರುವುದು ಅತ್ಯಂತ ಕಡಿಮೆ ಎಂದು ಹೇಳಬಹುದು.

ನಂದಿಬೆಟ್ಟ ಪಂಚನದಿಗಳ ಉಗಮಸ್ಥಾನವಾಗಿರುವುದರಿಂದ ಪ್ರಾಗಿತಿಹಾಸ ಕಾಲದ ಮಾನವನ ಇರುವಿಕೆಗೆ ಪೂರಕವಾಗಿ ರಾಜಘಟ್ಟದಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು ಹಾಗೂ ಬೌದ್ಧಧರ್ಮಗ ಕುರುಹುಗಳು ದೊರಕಿವೆ. ಈ ಪ್ರದೇಶದಲ್ಲಿ ಪುರಾತತ್ವ ಅನ್ವೇಷಣೆ ಕೈಗೊಂಡಲ್ಲಿ ಇನ್ನೂ ಹೆಚ್ಚಿನ ನೆಲೆಗಳು ದೊರಕುವ ಸಾಧ್ಯತೆಗಳಿವೆ. ಅದೇ ರೀತಿಯಾಗಿ ನಂದಿಬೆಟ್ಟದಿಂದ ಸುಮಾರು ೩ ಕಿ.ಮೀ. ದೂರದಲ್ಲಿರುವ ಯಲುವಳ್ಳಿಯಲ್ಲಿಯೂ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಸಮಾಧಿಗಳು ಸಿಗುವ ಸಾಧ್ಯತೆಗಳು ಬಹಳವಾಗಿದ್ದು, ಉತ್ಖನನ ಕಾರ್ಯ ನಡೆಸಿದರೆ ಸಾಕಷ್ಟು ವಿಷಯಗಳನ್ನು ತಿಳಿಯಬಹುದಾಗಿದೆ. ನಂದಿಬೆಟ್ಟ ಪರಿಸರದಲ್ಲಿ ವಿವಿಧ ರಾಜರ ಕಾಲದಲ್ಲಿ ನಿರ್ಮಿಸಲ್ಪಟ್ಟ ದೇವಾಲಯಗಳು ಕಲೆ, ವಾಸ್ತುಶಿಲ್ಪ, ಕೋಟೆ, ಸ್ಮಾರಕಗಳು ಕುರಿತಾದ ಅಂಶಗಳನ್ನು ಸಹ ವಿವೇಚಿಸಲಾಗಿದೆ ಕರ್ನಾಟದ ಪ್ರವಾಸಿ ತಾಣಗಳಲ್ಲಿ ನಂದಿಬೆಟ್ಟವು ಒಂದಾಗಿದೆ.

ಒಟ್ಟಾರೆ ಕರ್ನಾಟಕದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಕ್ಷೇತ್ರಗಳಲ್ಲಿ ಉಪೇಕ್ಷೆಗೆ ಒಳಗಾಗಿರುವ ಈ ಪರಿಸರವನ್ನು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಅಧ್ಯಯನಗಳಿಗೆ ಒಳಪಡಿಸುವ ಮೂಲಕ ಇಲ್ಲಿನ ಚರಿತ್ರೆಯನ್ನು ಕಟ್ಟಿಕೊಡುವ ಹಾಗೂ ಪುರಾತತ್ವ ಹಿನ್ನೆಲೆಯಲ್ಲಿ ಚಾರಿತ್ರಿಕ ಸಂದರ್ಭದಲ್ಲಿ ನಿರ್ಮಾಣವಾದ ಎಲ್ಲಾ ಬಗೆಯ ಸ್ಮಾರಕಗಳನ್ನು ಕುರಿತು ಅಧ್ಯಯನ ಮಾಡುವ ಮುಖ್ಯ ಉದ್ದೇಶವನ್ನಿಟ್ಟುಕೊಂಡು ಪ್ರಸ್ತುತ ಕಾರ್ಯವನ್ನು ಕೈಗೊಳ್ಳಲಾಗಿದೆ.

ವ್ಯಾಪ್ತಿ

ಒಂದು ನಿರ್ದಿಷ್ಟ ಹಾಗೂ ಉದ್ದೇಶ ಪೂರಿತ ಸಂಶೋಧನೆ ಯಶಸ್ವಿಯಾಗಲು ವ್ಯಾಪ್ತಿಯು ತುಂಬಾ ಸಹಕಾರಿಯಾಗಿದೆ. ನಂದಿಬೆಟ್ಟದ ಇತಿಹಾಸ ಮತ್ತು ಪುರಾತತ್ವವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದ್ದು, ಅದರ ವ್ಯಾಪ್ತಿಯನ್ನು ಭೌಗೋಳಿಕ ಮತ್ತು ಕಾಲಾವಧಿಯ ದೃಷ್ಟಿಯಿಂದ ನಿರ್ಧಿಷ್ಟಪಡಿಸಲಾಗಿದೆ. ಈ ಪ್ರದೇಶದ ಸುತ್ತಮುತ್ತಲಿನ ಕೆಲವು ಮುಖ್ಯ ಗ್ರಾಮಗಳಾದ ಸುಲ್ತಾನ ಪೇಟೆ, ಕುಡುವರ್ತಿ, ಯಲುವಳ್ಳಿ, ಮುದ್ದೇನಳ್ಳಿ ಅಂಗಟ್ಟ, ಕುಪ್ಪಳ್ಳಿ, ಕೆಳವಾರ, ಕಣಿವೆಪುರ, ಇರೇನಹಳ್ಳಿ, ನಂದಿಗ್ರಾಮ ಕಳವಾರಹಳ್ಳಿ ರಂಗಸ್ಥಳ, ಗೋಪಿನಾಥ ಬೆಟ್ಟವನ್ನೊಳಗೊಂಡ ವ್ಯಾಪ್ತಿಯಲ್ಲಿನ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕರ್ನಾಟಕದಲ್ಲಿ ಆಳ್ವಿಕೆ ಮಾಡಿದ ರಾಜಮನೆತನಗಳಾದ ಪಲ್ಲವರಿಂದ ಮೊದಲುಗೊಂಡ ಮೈಸೂರಿನ ಒಡೆಯರ ಕಾಲಾವಧಿವರೆಗಿನ ಅಡಳಿತಾವಧಿಯ ಕೊನೆಯ ಕಾಲಘಟ್ಟಕ್ಕೆ ಸೀಮಿತಗೊಳಿಸಲಾಗಿದೆ. ಪ್ರಾಗಿತಿಹಾಸ ನೆಲೆಗಳು ಮತ್ತು ಅವುಗಳ ವಿವರ, ಸಾಂಸ್ಕೃತಿಕ ಸಂಬಂದಗಳ ಮಹತ್ವ, ಪುರಾತತ್ವ ಮುಲಾಧಾರಗಳಾದ ದೇವಾಲಯಗಳು, ಮೂರ್ತಿಶಿಲ್ಪ, ಶಾಸನಗಳು, ಕೋಟೆಗಳು, ಬಾವಿಗಳು, ನೀರಿನ ತಾಣಗಳು, ಕಟ್ಟಡ ಅವಶೇಷಗಳು ಈ ಅಧ್ಯಯನ ವ್ಯಾಪ್ತಿಯಲ್ಲಿ ಬರುತ್ತವೆ. ಇತಿಹಾಸ ಕಾಲಘಟ್ಟವು ಶಾಸನಗಳ ವಿವರಗಳು ಹಾಗೂ ಪರಿಸರದಲ್ಲಿ ಕಂಡುಬರುವ ಎಲ್ಲಾ ಬಗೆಯ ಅವಶೇಷಗಳನ್ನು ವಿವರಿಸುವ ಮತ್ತು ಅದನ್ನು ಮರುರೂಪಿಸುವ ಪ್ರಯತ್ನ ಮಾಡಲಾಗುವುದು ಈ ಹಿಂದೆ ನೆಡದಿರುವ ಅಧ್ಯಯನಗಳನ್ನು ಗಮನದಲ್ಲಿಟ್ಟುಕೊಂಡು ಅಂತರ್ ಶಿಸ್ತಿಯ ನೆಲೆಯಲ್ಲಿ ಶೋಧಿಸುವ ಸಂಯೋಜಿಸುವ ನಿಟ್ಟಿನಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ವಿಧಾನ

ಪ್ರಸ್ತುತ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳನ್ನು ಗಮನದಲ್ಲಿಟ್ಟುಕೊಂಡು ನಂದಿಬೆಟ್ಟ ಪರಿಸರದ ಇತಿಹಾಸ ಮತ್ತು ಪುರಾತತ್ವ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮವಾರು ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಈ ವಿಷಯ ಅಧ್ಯಯನ ವ್ಯಾಪ್ತಿಗೆ ಬರುವ ಪ್ರದೇಶಕ್ಕೆ ನೇರವಾಗಿ ಭೇಟಿ ನೀಡಿ ಅಲ್ಲಿ ದೊರೆಯುವ ಸಂಪನ್ಮೂಲಗಳನ್ನು ಖುದ್ದಾಗಿ ವೀಕ್ಷಿಸಿ ಮತ್ತು ಅಲ್ಲಿನ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ವಿಷಯವನ್ನು ಕ್ರೂಢೀಕರಿಸಲಾಗುತ್ತದೆ. ಮುಖ್ಯವಾಗಿ ಪ್ರಾಗಿತಿಹಾಸ ಕಾಲದ ಅವಶೇಷಗಳ ಪ್ರಕಟಿತ ಶಾಸನ, ದೇವಾಲಯ, ಮೂರ್ತಿಶಿಲ್ಪ ಮುಂತಾದ ಪ್ರಮುಖ ಆಕರಗಳ ವಿವರಗಳನ್ನು ಹಾಗೂ ಸಂಬಂಧಿಸಿದ ಸ್ಮಾರಕಗಳು, ಛಾಯಾಚಿತ್ರ ಮತ್ತು ನಕ್ಷೆಗಳನ್ನು ಮಾಡಿಕೊಳ್ಳಲಾಗುವುದು ಗ್ರಂಥಾಲಯ, ವಿವಿಧ ಸಂಘ-ಸಂಸ್ಥೆಗಳು, ಪ್ರಕಟಿತ ಕೃತಿಗಳು,

ಲೇಖನಗಳು, ಸರ್ಕಾರಿ ಸಂಚಿಕೆಯಲ್ಲಿ ದೊರೆಯುವ ಆಧಾರಗಳನ್ನು ಮತ್ತು ಸಂಶೋಧನಾ ಲೇಖನಗಳನ್ನು, ಪಿಎಚ್.ಡಿ ಮಹಾಪ್ರಬಂಧಗಳನ್ನು ಆಧರಿಸಿ ಅವಶ್ಯ ವಿಷಯವನ್ನು ಪರಿಶೀಲಿಸಿ ಸಂಶೋಧನೆಗೆ ತಗೆದುಕೊಳ್ಳಲಾಗುವುದು ಜೊತೆಗೆ ಮೌಖಿಕ ಆಕರಗಳನ್ನು ಸ್ಥಳೀಯರಿಂದ ಸಂಗ್ರಹಿಸಿಕೊಳ್ಳಲಾಗುವುದು ನಂತರದಲ್ಲಿ ಅಧ್ಯಯನಗಳಿಗೆ ಅನುಗುಣವಾಗಿ ಆಕರಗಳನ್ನು ವರ್ಗೀಕರಿಸಿಕೊಂಡು ಮಾಹಿತಿಯನ್ನು ವಿಮರ್ಶಿಸಿ ವಿಶ್ಲೇಷಿಸಿ ಸಂಯೋಜಿಸಿಕೊಂಡು ನಿಬಂಧನ ಬರಹವನ್ನು ಪೂರ್ಣಗೊಳಿಸುವ ಉದ್ದೇಶವಿಟ್ಟುಕೊಂಡಿದ್ದೇನೆ.

ಅಧ್ಯಾಯ ೨

ಭೌಗೋಳಿಕತೆ ಮತ್ತು ಪ್ರಾಗಿತಿಹಾಸ

೨

ಭೌಗೋಳಿಕತೆ ಮತ್ತು ಪ್ರಾಗಿತಿಹಾಸ

ಯಾವುದೇ ಒಂದು ಪ್ರದೇಶದ ಅಧ್ಯಯನ ಕೈಗೊಳ್ಳುವ ಮೊದಲು ಅಪ್ರದೇಶದ ಭೌಗೋಳಿಕ ಪರಿಸ್ಥಿತಿಗಳನ್ನು ತಿಳಿಯುವುದು ಅಗತ್ಯವಾಗಿದೆ. ಮಾನವ ಜೀವನ ಕ್ರಮ ಮತ್ತು ಇತಿಹಾಸ ಅಲ್ಲಿನ ಭೌಗೋಳೀಕ ಲಕ್ಷಣಗಳನ್ನು ಅವಲಂಬಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಆ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಯಲು ಭೌಗೋಳಿಕ ಅಂಶಗಳು ಸಹಕಾರಿಯಾಗಿವೆ. ಮಾನವನು ನೆಲೆನಿಲ್ಲಲು ಆ ಪ್ರದೇಶದಲ್ಲಿ ಹುಟ್ಟಿ ಹರಿಯುವ ನದಿಗಳು, ನದಿಬಯಲು, ತೀರ ಪ್ರದೇಶ, ಪರ್ವತಶ್ರೇಣಿ, ಪ್ರಾಣಿ ಸಂಪತ್ತು, ಖನಿಜ ಸಂಪತ್ತು, ಅರಣ್ಯ ಸಂಪತ್ತು, ಹವಾಗುಣ, ಉಷ್ಣಾಂಶ, ರೇಖಾಂಶ, ಅಕ್ಷಾಂಶ, ಮಣ್ಣಿನ ರಚನೆ ಮುಂತಾದ ಅಂಶಗಳು ಕಾರಣವಾಗಿವೆ. ಆದ್ದರಿಂದ ಒಂದು ದೇಶದ ಅಥವಾ ಪ್ರದೇಶದ ಅಥವಾ ಜನಾಂಗದ ಇತಿಹಾಸ ಅರಿಯಲು ಭೌಗೋಳಿಕ ತಿಳುವಳಿಕೆ ಅವಶ್ಯಕ.

ಕೋಲಾರ ಜಿಲ್ಲೆಯಂತೆಯೇ ಚಿಕ್ಕಬಳ್ಳಾಪುರ ಗಡಿ ಜಿಲ್ಲೆಯಾಗಿದ್ದು ಆಂಧ್ರಪ್ರದೇಶದ ಗಡಿಯನ್ನು ಜಿಲ್ಲೆಯುದ್ದಕ್ಕೂ ಹೊಂದಿದೆ. ಕನ್ನಡ, ತೆಲಗು, ಉರ್ದುಭಾಷಿಕರ ಸಂಖ್ಯೆ ಹೆಚ್ಚಾಗಿಯೇ ಇದೆ. ಜಿಲ್ಲೆಯು ಬೆಟ್ಟ ಸರಣಿಯನ್ನು ಹೊಂದಿದ್ದು, ನಂದಿಬೆಟ್ಟ ಎಂದು ಕರೆಯಲಾಗುವ ನಂದಿ ಗಿರಿಧಾಮವನ್ನು ಹೊಂದಿರುವ, ನಂದಿದುರ್ಗಶ್ರೇಣಿಯು ಈ ಪೈಕಿ ಅತಿ ಎತ್ತರದ ಬಿಂಧುವಾಗಿದೆ. ಕಲ್ಲುಬಂಡೆಗಳಿಂದ ಆವೃತ್ತವಾದ ಮತ್ತು ಅತ್ಯಲ್ಪ ಸಸ್ಯವರ್ಗವನ್ನು ಹೊಂದಿರುವ ಈ ಪರಿಸರದಲ್ಲಿ ಬೆಟ್ಟಗುಡ್ಡಗಳು ಸಾಕಷ್ಟಿವೆ. ದೇಶೀಯ ಸಸ್ಯಸಂಪತ್ತನ್ನು ಇಲ್ಲಿ ಕಾಣಬಹುದಾಗಿದೆ.

ಈ ಪ್ರದೇಶದಲ್ಲಿ ಪ್ರಾಚೀನ ಮಾನವನ ವಸತಿ ನೆಲೆಗಳಿವೆ. ಪ್ರಾಚೀನ ಕಾಲದಿಂದಲೂ ಅನೇಕ ರಾಜಮನೆತನಗಳು, ಸಾಮಂತರು ಹಾಗೂ ಪಾಳೇಗಾರರು ಆಡಳಿತ ನಡೆಸಿರುವ ಉಲ್ಲೇಖಗಳಿವೆ. ಅವರಲ್ಲಿ ಪಲ್ಲವರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರು ಒಡೆಯರು, ಟಿಪ್ಪುಸುಲ್ತಾನ ಮತ್ತು ಅವತಿ ಪಾಳೆಯಗಾರರು ಪ್ರಮುಖರಾಗಿದ್ದಾರೆ. ಒಂದು ಪ್ರದೇಶದ ಐತಿಹಾಸಿಕ ಮಹತ್ವವನ್ನು ಅಲ್ಲಿ ದೊರೆಯುವ ಪುರಾತತ್ವ ಅವಶೇಷಗಳಿಂದ ತಿಳಿಯಬಹುದಾಗಿದೆ.

ಜೊತೆಗೆ ಅಲ್ಲಿನ ಮೌಖಿಕ ಆಕರಗಳು ಸಹ ಪ್ರಮುಖವಾಗಿದೆ. ಈ ಜಿಲ್ಲೆಯು ಮತ್ತು ತಾಲ್ಲೂಕುಗಳಾದ ಚಿಕ್ಕಬಳ್ಳಾಪುರ, ಗುಡಿಬಂಡೆ, ಬಾಗೇಪಲ್ಲಿ, ಚಿಂತಾಮಣಿ, ಗೌರಿಬಿದನೂರು, ಶಿಡ್ಲಘಟ್ಟ ಹಾಗೂ ೨೧೦ ಗ್ರಾಮಗಳನ್ನು ಮತ್ತು ಪಟ್ಟಣಗಳನ್ನು ಹೊಂದಿದೆ.

ಈ ಅಧ್ಯಾಯನವು ನಂದಿಬೆಟ್ಟ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಒಳಗೊಂಡಿದೆ. ಇಲ್ಲಿನ ಆರ್ಥಿಕ ಬದುಕನ್ನು ರೂಪಿಸುವಲ್ಲಿ ಇತಿಹಾಸದುದ್ದಕ್ಕೂ ನಿರ್ಣಾಯಕ ಪಾತ್ರವನ್ನು ವಹಿಸುತ್ತಾ ಬಂದಿರುವ ಜಿಲ್ಲೆಯ ಹೆಚ್ಚಿನ ನದಿಗಳ ಉಗಮಸ್ಥಾನ ನಂದಿಬೆಟ್ಟವಾಗಿದ್ದು ನಂದಿಗಿರಿ ಶ್ರೇಣಿಗಳಲ್ಲಿ ಕ್ರಮವಾಗಿ ಜನಿಸುವ ಪಾಲಾರ್ , ಉತ್ತರ ಪಿನಾಕಿನಿ ಅಥವಾ ಪೆನ್ನಾರ್ , ಅರ್ಕಾವತಿ, ಚಿತ್ರಾವತಿ, ದಕ್ಷಿಣ ಪಿನಾಕಿನಿ, ಪಾಪಾಘ್ನಿ ನದಿಗಳು ೫ ದಿಕ್ಕುಗಳಲ್ಲೂ ಪ್ರವಹಿಸುತ್ತವೆ. ಆದ್ದರಿಂದ ಇದು ಜಿಲ್ಲೆಯ ಜಲನಿಕ್ಷೇಪ ತಾಣವಾಗಿ ಬಹುಹಿಂದಿನಿಂದಲೂ ಮಹತ್ವ ಪಡೆದಿದೆ.

ನಂದಿದುರ್ಗ ಸಮುದ್ರ ಮಟ್ಟದಿಂದ ೧,೪೭೦ ಮೀ ಎತ್ತರದಲ್ಲಿದೆ. ವಾರ್ಷಿಕ ಸರಾಸರಿ ೭೩೦.೫ ಮಿ.ಮೀ. ಮಳೆಯಾಗುತ್ತದೆ. ನೈಋತ್ಯ ಮಾರುತಗಳಿಂದ ಶೇ.೬೯ ರಷ್ಟು ಮಳೆಯಾಗುತ್ತದೆ. ನಂದಿದುರ್ಗದಲ್ಲಿ ಸೆಪ್ಟೆಂಬರ್ ತಿಂಗಳಿಗೆ ಹೋಲಿಸಿದಲ್ಲಿ ಅಕ್ಟೋಬರ್ ತಿಂಗಳಲ್ಲಿ ಹೆಚ್ಚು ಮಳೆಯಾಗುತ್ತದೆ. ತಂಪಾದ ಹವೆ, ಸುತ್ತಲ ಬೇಸಿಗೆಯು ತಂಗುದಾಣವಾಗಿ ಜನಪ್ರಿಯವಾಗಿದೆ. ಇಲ್ಲಿನ ಅತಿಗರಿಷ್ಠ ಮತ್ತು ಕನಿಷ್ಠ ಉಷ್ಣಾಂಶ ಕ್ರಮವಾಗಿ ಬೇಸಿಗೆಯಲ್ಲಿ ೨೯ ಸೆ-೨೩ ಸೆ. ಮತ್ತು ಚಳಿಗಾಲದಲ್ಲಿ ೨೧ಸೆ-೧೧ಸೆ ಇರುತ್ತದೆ. ಈ ಬೆಟ್ಟದ ನೈಋತ್ಯ ಪಾರ್ಶ್ವವನ್ನು 'ಟಿಪ್ಪುಡ್ರಾಪ್' ಇದ್ದು ಟಿಪ್ಪುಸುಲ್ತಾನನ ಕಾಲದಲ್ಲಿ ಶಿಕ್ಷೆಗೆ ಗುರಿಯಾದ ಕೈದಿಗಳನ್ನು ಇಲ್ಲಿಂದ ತಳ್ಳಿ ಸಾಯಿಸುತ್ತಿದ್ದರು. ನಂದಿಬೆಟ್ಟದಲ್ಲಿರುವ ಅತ್ಯಂತ ಆಳವಾದ ಪ್ರಪಾತ ಇದಾಗಿದೆ. ಇದರ ಉತ್ತರಕ್ಕೆ 'ಹೈದರ್ ಡ್ರಾಪ್' ಎಂದು ಕರೆಯುವ ಮತ್ತೊಂದು ಪ್ರಪಾತವಿದೆ.

ನೈಸರ್ಗಿಕವಾಗಿ ದೊರೆಯುವ ಸಸ್ಯಸಂಪತ್ತು ವಿಪುಲವಾಗಿದ್ದು ಪ್ರಮುಖವಾಗಿ ಕಂಡುಬರುವ ಮರಗಳೆಂದರೆ ಕರಿಜಾಲಿ, ದಿಂಡಿಗ, ಜಗಳಗಂಟಿ, ತುಪ್ರ, ಬೇವು, ಹಲಸು, ಕಕ್ಕೆ, ನೇರಳೆ, ಹೊಂಗೆ, ಇಚಿ, ದೇವದಾರ, ನೀಲಗಿರಿ, ಹುಣಸೆ, ಅರಳೆ, ಅಂಟವಾಳು, ಸೀತಾಫಲ, ಕಾರೆ, ಅಲರಿ, ಕಾರೆ, ಆಲ, ಮುಂತಾದವುಗಳಾಗಿವೆ. ಕಾಡು ಹೂಗಳಾದ ದೇವಕಣಿಗಲೆ, ಪಾದರಿ, ಪ್ರೀತಿಮಲ್ಲಿಗೆ, ಗಂಟಾಪುಷ್ಪಗಳು, ಬೆಟ್ಟದ ಸಾಲುಗಳಲ್ಲಿ ಚದುರಿದಂತೆ ಕಂಡುಬರುತ್ತವೆ. ತೋಟಗಾರಿಕೆ ಇಲಾಖೆಯನ್ನು ಇಲ್ಲಿ ಸ್ಥಾಪಿಸುವುದರ ಮೂಲಕ ಔಷಧಿ ಗುಣವುಳ್ಳ ಸಸ್ಯಗಳನ್ನು ಹೇರಳವಾಗಿ ಬೆಳೆಯಲಾಗುತ್ತಿದೆ. ಬಿಳಿದಾಸವಾಳ, ಅಡುಸೋಗೆ, ಒಂದಲಗ, ಸದಾಪುಷ್ಪ, Coffea arabica, Cassiamimosides, Bauhiniatomentosa, Bauhiniapurpurea, calatropisgigiantea, ಇವುಗಳನ್ನು ರೋಗದ ನಿವಾರಕ ಔಷಧಿಗಳ ತಯಾರಿಕೆಯಲ್ಲಿ ಬಳಸುವ ಸಸ್ಯಗಳನ್ನು ನೋಡಬಹುದಾಗಿದೆ. ಮಾಂಸಾಹಾರಿ ಪ್ರಾಣಿಗಳಾದ ನರಿ, ತೋಳ, ಜೊಂಪು

ತೋಳ, ಕತ್ತೆ ಕಿರುಬ, ಅಪರೂಪಕ್ಕೊಮ್ಮೆ ಚಿರತೆಯು ಕಾಣಿಸಿಕೊಳ್ಳುತ್ತದೆ. ಅದೇ ರೀತಿ ಸಸ್ಯಹಾರಿಗಳಾದ ಕರಡಿ, ಕಾಡುಹಂದಿ, ಮುಳ್ಳು ಹಂದಿ, ದೊಡ್ಡಜಿಂಕೆ, ಮುಂಗುಸಿ, ಉಡ, ಮೊಲ, ವಿಷಜಂತುಗಳಾದ ನಾಗರ, ಗೋಧಿನಾಗರ, ರಕ್ತಪಂಜರ, ಕೊಂಚಶಿಲ್ಲಾ ಮುಂತಾದವು ಕಂಡುಬರುತ್ತದೆ.

ನಂದಿಬೆಟ್ಟಕ್ಕೆ ಹೊಂದಿಕೊಂಡಂತೆ ಇರುವ ಇತರ ದುರ್ಗಗಳೆಂದರೆ ವಾಯವ್ಯ ದಿಕ್ಕಿನಲ್ಲಿರುವ ನಂದಿದುರ್ಗದ ಬೆಟ್ಟಗಳು ಮತ್ತು ಅವುಗಳ ಮುಂದುವರೆದ ಭಾಗಗಳು ನದಿಗಳ ಪ್ರಮುಖ ಉಗಮಸ್ಥಾನಗಳಾಗಿವೆ. ಬೆಂಗಳೂರು ನಗರದಿಂದ ಉತ್ತರಕ್ಕೆ ೫೦ ಕೆ.ಮೀ. ದೂರದಲ್ಲಿರುವ ನಂದಿದುರ್ಗ ೧.೪೭೯ ಮೀ. ಎತ್ತರವಾಗಿದೆ. ಚಿಕ್ಕಬಳ್ಳಾಪುರದ ಆಗ್ನೇಯಕ್ಕೆ ೮ ಕಿ.ಮೀ. ದೂರದಲ್ಲಿರುವ ಚೆನ್ನರಾಯ ಬೆಟ್ಟ, ೧.೪೫೧ ಮೀ. ನಂದಿದುರ್ಗ ಉತ್ತರಕ್ಕೆ ೮ ಕಿ.ಮೀ ದೂರದಲ್ಲಿರುವ ಸ್ಕಂದಗಿರಿ ೧.೪೪೭ ಮೀ. ನಂದಿದುರ್ಗದ ಆಗ್ನೇಯ ದಿಕ್ಕಿನಲ್ಲಿರುವ ಬ್ರಹ್ಮಗಿರಿ ೧.೪೯೧ ಮೀ. ಎತ್ತರವಾಗಿದೆ. ಇವು ನಂದಿದುರ್ಗ ಶ್ರೇಣಿಯ ಕೆಲವು ಮುಖ್ಯ ಶಿಖರಗಳಾಗಿವೆ.

ಚಿಕ್ಕಬಳ್ಳಾಪುರ ತಾಲೂಕಿನ ಒಟ್ಟು ವಿಸ್ತೀರ್ಣ ೬೪೪ ಚ.ಕಿ.ಮೀ. ಹೊಂದಿದ್ದು ಜನಸಂಖ್ಯೆಯು ೨೦೦೧ರ ಜನಗಣತಿಯ ಪ್ರಕಾರ ೧,೯೧,೧೨೨ ಇದ್ದು ಇದರಲ್ಲಿ ಪುರುಷರು ೯೭,೨೩೯ ಮಹಿಳೆಯರು ೯೩.೮೮೩ ಇರುವವರು. ಇಲ್ಲಿಯ ಸಾಕ್ಷರತೆಯ ಪ್ರಮಾಣ ೨೦೦೧ರ ಪ್ರಕಾರ ಒಟ್ಟು ೬೩.೧೪ ಇದರಲ್ಲಿ ಪುರುಷರ ಸಾಕ್ಷರತೆಯು ೭೩.೧೪, ಮಹಿಳೆಯರು ೫೨.೮ ರಷ್ಟಿದ್ದಾರೆ. ಚಿಕ್ಕಬಳ್ಳಾಪುರವು ಇತ್ತೀಚೆಗೆ ಹೊಸ ಜಿಲ್ಲೆಯಾಗಿ ರೂಪುಗೊಂಡಿದ್ದು, ಆಡಳಿತಾತ್ಮಕ ದೃಷ್ಟಿಯಿಂದ ೬ ತಾಲ್ಲೂಕುಗಳನ್ನಾಗಿ ವಿಭಾಗಿಸಲಾಗಿದೆ. ಚಿಕ್ಕಬಳ್ಳಾಪುರ, ಗುಡಿಬಂಡೆ, ಗೌರಿಬಿದನೂರು, ಶಿಡ್ಲಘಟ್ಟ, ಚಿಂತಾಮಣಿ ಮತ್ತು ಬಾಗೇಪಲ್ಲಿ, ಚಿಕ್ಕಬಳ್ಳಾಪುರವು ಅಕ್ಷಾಂಶ ೭೭:೩೩ ರಿಂದ ೭೭:೫೦ ರೇಖಾಂಶ ೧೩.:೨೦ ರಿಂದ ೧೩:೩೯ ಹೊಂದಿದ್ದು ೩ ಹೋಬಳಿ ೨೧೦ ಗ್ರಾಮಗಳು ಮತ್ತು ಒಂದು ನಗರ ಸಭೆಯನ್ನು ಹೊಂದಿದೆ.

ಈ ಪ್ರದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣ ೮.೨೨.೩೦೦ ಹೆಕ್ಟೇರುಗಳಾಗಿದ್ದು ಅದರಲ್ಲಿ ಅರಣ್ಯ ಪ್ರದೇಶವು ೧.೦೩.೯೪೧ ಹೆಕ್ಟೇರುಗಳಾಗಿದೆ. ಇದು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣದ ೧೨.೬೪ ರಷ್ಟಿದೆ. ಬಹುತೇಕ ಎಲೆ ಉದುರುವ ಕಾಡ ಹಾಗು ಕುರುಚಲುಗಿಡಗಳಿಂದ ಆವೃತವಾಗಿದೆ. ಆದ್ದರಿಂದ ಇಲ್ಲಿನ ಗುಡ್ಡಗಾಡು ಪ್ರದೇಶದ ಹವಾಗುಣ ಮತ್ತು ಮಣ್ಣಿನ ಗುಣದಿಂದಾಗಿ ಒಣ ಎಲೆಯುದುರುವ ಅಥವಾ ಕುರುಚಲು ಮತ್ತು ಮುಳ್ಳುಗಿಡಗಳಿರುವ ಅರಣ್ಯಗಳನ್ನು ಕಾಣಬಹುದು. ಮರಗಳು ಕುಬ್ಜವಾಗಿದ್ದು ಮೇಲ್ಛಾವಣಿಯಂತೆ ಹರಡಿರುತ್ತದೆ. ಉರುವಲು ಮತ್ತು ಇದ್ದಲಿನ ಬಳಕೆಗಾಗಿ ಹಾಗೂ ಇಟ್ಟಿಗೆ ಸುಡುವ ಫ್ಯಾಕ್ಟರಿಗಳು ಅರಣ್ಯಗಳನ್ನು ಆಶ್ರಯಿಸುವುದರಿಂದ ರಕ್ಷಿತ ಅರಣ್ಯ ಪ್ರದೇಶದಲ್ಲಿ ಮರಗಳು ಅತಿ ವಿರಳವಾಗಿದ್ದು ಅರಣ್ಯಗಳ ಲಕ್ಷಣಗಳನ್ನು ಕಳೆದುಕೊಂಡಿವೆ. ಅರಣ್ಯ ಪ್ರದೇಶ ಗುಡ್ಡಗಾಡು ವಲಯಕ್ಕೆ ಸೀಮಿತವಾಗಿದ್ದು, ಗುಡ್ಡಗಳ ನಡುವಿನ ಕಣಿವೆ ಪ್ರದೇಶವನ್ನು ಒತ್ತುವರಿ

ಮಾಡಿ ಕೃಷಿ ಭೂಮಿಯನ್ನಾಗಿ ಮಾರ್ಪಡಿಸಲಾಗಿದೆ. ಇದಕ್ಕೆ ವ್ಯತಿರಿಕ್ತವಾದಂತೆ ಗುಡ್ಡಗಾಡು ಪ್ರದೇಶದ ಮಣ್ಣು ನೊರಜುಕಲ್ಲು ಮಿಶ್ರಿತ ಭೂಮಿಯಿಂದ ಕೂಡಿದ್ದು ಉತ್ತಮ ಅರಣ್ಯಮರಗಳ ಬೆಳವಣಿಗೆಗೆ ಮಾರಕವಾಗಿದೆ.

ನಂದಿದುರ್ಗ ಬೆಟ್ಟಗಳ ಬಳಿಯ ಅರಣ್ಯದಲ್ಲಿ ಕರಡಿಗಳು ಮತ್ತು ಚಿರತೆಗಳು ಕಂಡುಬರುತ್ತವೆ. ಕೃಷ್ಣಮೃಗ ಮತ್ತು ಜಿಂಕೆಗಳು ವಿರಳವಾಗಿದ್ದು ಮರಗಳನ್ನು ಹೊಂದಿರುವ ಪ್ರದೇಶಗಳಲ್ಲಿ ಕಾಣಸಿಗುತ್ತದೆ. ಬೆಟ್ಟಗಳ ಇಳಿಜಾರು ಪ್ರದೇಶ ಮತ್ತು ಕಣಿವೆಗಳಲ್ಲಿ ಸರೀಸೃಪಗಳು ಕಂಡುಬರುತ್ತವೆ. ಅವುಗಳಲ್ಲಿ ನಾಗರಹಾವು ಹೆಚ್ಚಿನ ಪ್ರಮಾಣದಲ್ಲಿವೆ. ಈ ಭಾಗದಲ್ಲಿ ಕಂಡುಬರುವ ಮಣ್ಣನ್ನು

ಅ. ಕೆಂಪು ಮಣ್ಣು ಆ. ಕೆಂಪು ಗೋಡುಮಣ್ಣು ಮತ್ತು ಇ. ಜಂಬಿಟ್ಟಿಗೆ ಮಣ್ಣು ಎಂದು ೩ ಗುಂಪುಗಳಾಗಿ ವಿಂಗಡಿಸಬಹುದು. ಕೆಲವು ಪ್ರದೇಶದಲ್ಲಿ ಕಪ್ಪುಮಣ್ಣು ಸಹ ಕಂಡುಬರುತ್ತದೆ. ನಂದಿಬೆಟ್ಟ ಪರಿಸರದಲ್ಲಿ ಹೆಚ್ಚಾಗಿ ಕೆಂಪುಮಣ್ಣು ಕಂಡುಬರುತ್ತದೆ. ರಾಗಿ, ಭತ್ತ, ಕಬ್ಬು, ಜೋಳ, ಕಬ್ಬು, ರೇಷ್ಮೆ, ದ್ರಾಕ್ಷಿ, ಟೊಮೋಟೊ, ಸಜ್ಜೆ, ದ್ವಿದಳಧಾನ್ಯ, ನೆಲಗಡಲೆ, ಆಲೂಗೆಡ್ಡೆ, ತಂಬಾಕು ಮುಂತಾದ ಆಹಾರ ಮತ್ತು ವಾಣಿಜ್ಯ ಬೆಳೆಗಳಿಗೆ ಪ್ರಸಿದ್ಧಿಯಾಗಿದೆ.

ಈ ಪರಿಸರದಲ್ಲಿ ಕಂಡುಬರುವ ಸಸ್ಯಗಳನ್ನು ಪ್ರಮುಖವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ನೆಲಮಟ್ಟದಿಂದ ಸುಮಾರು ೩ ಅಡಿಗಳವರೆಗೆ ಬೆಳೆಯುವ ಪೊದರುಗಳು, ಎತ್ತರವಾಗಿ ಬೆಳೆದು ಡಿಸೆಂಬರ್ ತಿಂಗಳಲ್ಲಿ ಎಲೆ ಉದುರಿ ಯುಗಾದಿಯ ವೇಳೆಗೆ ಚಿಗುರುವ ಗಿಡಗಳು ಮತ್ತು ಹಾಲು ತುಂಬಿರುವ ಎಲೆಗಳಿಲ್ಲದ ಗಿಡಗಳು, ತಿನ್ನಲು ಉಪಯೋಗಿಸುವ ಫಲಗಳನ್ನು ಬಿಡುವ ಸಸ್ಯಗಳು ಮತ್ತು ಕಾಡುಗಿಡಗಳು. ಮೊದಲನೆ ವರ್ಗಕ್ಕೆ ಕಕ್ಕೆ, ತಂಗಡಿ, ನೆಲಬಂದರಿ, ಕಾರೆಕಾಯಿ, ಮೊದಲಾದ ಗಿಡಗಳು ಬರುತ್ತವೆ. ಎರಡನೇ ವರ್ಗದ ಜಾತಿಗೆ ಸೇರಿದ ಬೇವು, ಅಡವಿಹಲಸು, ಜಾಲಿ, ಚಿಗರೆ, ಜಂಬೆ, ಹಿಪ್ಪೆ, ಹೊನ್ನೆ, ಅಂಕೋಲೆ, ಹುಣಸೆ, ಮರವಲೆ, ದೇವದಾರು, ಆಲದಮರ, ನೀಲಗಿರಿ ಹೊಂಗೆ ಮೊದಲಾದವು ಕಂಡುಬರುತ್ತವೆ. ಬೆಟ್ಟದ ಸಾಲುಗಳಲ್ಲಿ ಅನೇಕ ಗಿಡಮೂಲಿಕೆ ಸಸ್ಯಗಳಿದ್ದು ಅವುಗಳಲ್ಲಿ ಪ್ರಧಾನವಾದವುಗಳೆಂದರೆ ಆಡುಸೋಗೆ, ಅಂಟವಾಳು, ಅಕಾಶಗರುಡ, ಈಶ್ವರಿ, ಚಕ್ರಾಣಿ, ಮೊದಲಾದವು ಮೂರನೇ ವರ್ಗಕ್ಕೆ ಸೇರಿದ ಹಾಗೂ ಪರಿಸರದಲ್ಲಿ ಸಾಮಾನ್ಯವಾಗಿ ಕಂಡುಬರುವ ಹಾಲು ತುಂಬಿದ ಮುಳ್ಳುಗಳಿಂದ ಕೂಡಿದ ಸಸ್ಯಗಳಾಗಿವೆ. ಇವುಗಳಲ್ಲಿ ಬಂದಕಳ್ಳಿ, ಪಾಪಸುಕಳ್ಳಿ, ತೋಟದ ಕಳ್ಳಿಗಿಡಗಳನ್ನು ಕಾಣಬಹುದು. ಅವುಗಳು ವರ್ಷದ ಎಲ್ಲಾ ಕಾಲದಲ್ಲೂ ಹಸಿರಾಗಿರುತ್ತವೆ. ನಾಲ್ಕನೇ ವರ್ಗಕ್ಕೆ ಸೇರಿದ ಸೀತಾಫಲ, ದೇವದಾರು ಹಣ್ಣು, ಅಂಟುವಾಳದ ಕಾಯಿ, ಅರಳೆಕಾಯಿ, ನೇರಳೆಹಣ್ಣು, ಕಾರೆ ಕಾಯಿ, ಅತ್ತಿಹಣ್ಣು ಕಂಡುಬರುತ್ತವೆ.

ನಂದಿಬೆಟ್ಟದ ಸುತ್ತಮುತ್ತಲಿನ ಪರಿಸರ ಕಲ್ಲುಬಂಡೆಗಳಿಂದ ಕೂಡಿದ ಬಯಲುಸೀಮೆ, ಇಲ್ಲಿ ಪ್ರಮುಖ ಜಲಸಂಪನ್ಮೂಲವೆಂದರೆ ಕೆರೆಗಳು, ಬಾವಿಗಳು, ಕೊಳವೆ ಬಾವಿಗಳನ್ನು ಅವಲಂಭಿಸಿದೆ. ಪ್ರಾಚೀನ ಕಾಲದಿಂದ ಕೆರೆಗಳು ನೀರಾವರಿ ಆಸರೆಯಾಗಿ ಮುಖ್ಯ ಪಾತ್ರವಹಿಸುತ್ತವೆ. ನಂದಿಬೆಟ್ಟದಲ್ಲಿ ಹುಟ್ಟಿಹರಿಯುವ ನದಿಗಳು ಮಳೆಗಾಲದಲ್ಲಿ ಮಳೆಯಿಂದ ತುಂಬಿ ಹರಿಯುತ್ತವೆ. ಬೇಸಗೆಯಲ್ಲಿ ಮಳೆಯಿಲ್ಲದೆ ಒಣಗುತ್ತವೆ. ಈ ಪ್ರದೇಶದ ಸುತ್ತಮುತ್ತ ಹೆಚ್ಚಾಗಿ ತೋಟದ ತರಕಾರಿ ಬೆಳೆಗಳನ್ನು ಕಾಣುತ್ತೇವೆ. ಆದ ಕಾರಣ ವರ್ಷಪೂರ್ತಿ ನೀರಿನ ಅಗತ್ಯತೆ ಇದೆ. ರೈತರು ವ್ಯವಸಾಯಕ್ಕೆ ಬಾವಿಯನ್ನೇ ನಂಬಿಕೊಂಡಿದ್ದರೂ ಇತ್ತೀಚಿನ ವರ್ಷಗಳಲ್ಲಿ ಕೊಳವೆ ಬಾವಿಗಳಿಂದಾಗಿ ಅಂತರ್ಜಲ ಮಟ್ಟ ಇಳಿಮುಖವಾಗಿದೆ. ಕೆಲವೇ ಕೆಲವು ರೈತರು ಮಾತ್ರ ಬಾವಿಗಳ ನೀರಿನಿಂದ ವ್ಯವಸಾಯ ಮಾಡುತ್ತಿದ್ದಾರೆ. ಕೆರೆಗಳೇ ಇಲ್ಲಿನ ಜನರ ಪ್ರಮುಖ ಜಲಸಂಪನ್ಮೂಲ ತಾಣಗಳಾಗಿವೆ. ಇಲ್ಲಿಯ ಜನರ ಪ್ರಮುಖ ಉದ್ಯೋಗ ವ್ಯವಸಾಯವಾಗಿದ್ದು ಹೆಚ್ಚಾಗಿ ಮಳೆಯನ್ನಾಧರಿಸಿ ಬೇಸಾಯ ಮಾಡುತ್ತಾರೆ. ಕಡಿಮೆ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಹೊಂದಿದ್ದು ಕೆರೆಗಳು ತುಂಬಿದಾಗ, ಬಾವಿಗಳಿಂದ ಹಾಗೂ ಕೊಳವೆ ಬಾವಿಗಳ ಸಹಾಯದಿಂದ ನೀರಾವರಿ ಬೇಸಾಯ ಮಾಡಿದರೂ, ಹೆಚ್ಚಾಗಿ ಮಳೆಯನ್ನಾಧರಿಸಿ ಒಣ(ಖುಷ್ಕಿ) ಬೇಸಾಯವನ್ನು ಮಾಡುತ್ತಾರೆ.

ಈ ಪರಿಸರದಲ್ಲಿ ಬೆಟ್ಟಗುಡ್ಡಗಳು ಬಹಳವಾಗಿರುವುದರಿಂದ ಕಟ್ಟಡ ನಿರ್ಮಾಣಕ್ಕೆ ಅವಶ್ಯಕವಾಗಿರುವ ಕಲ್ಲುಗಳು ದೊರೆಯುತ್ತವೆ. ಅಗ್ನಿಶಿಲೆಯ ಕ್ಲೋಸ್‌ಪೇಟೆ, ಗ್ರಾನೈಟ್ ಶಿಲೆಗಳ ಗುಂಪಿಗೆ ಸೇರಿದ ಕುರಂದು ರೀತಿಯ ಶಿಲಾಪದರಗಳಷ್ಟೇ, ಇವುಗಳನ್ನು ಮನೆಕಟ್ಟಡಗಳನ್ನು ಕಟ್ಟಲು ಬಳಸುತ್ತಾರೆ. ಈ ಪ್ರದೇಶಗಳಲ್ಲಿರುವ ಕೆಲವು ಉರುಟು ಬಂಡೆಗಳಲ್ಲಿ ಖನಿಜಗಳು ಶೇಖರಿಸಲ್ಪಟ್ಟಿರುವುದು ಕಂಡುಬರುತ್ತದೆ. ಹಾಗೂ ಪೆಟ್ಯಾಸಿಯಾಫೆಲ್ಡ್ ಸ್ಪಾರ್ ಇರುವ ಪೆಗ್ಮಟೈಟ್ ಸಿರಗಳು ಜಿಲ್ಲೆಯ ತೊಂಡೇಭಾವಿ ಮತ್ತು ಕಾಮಸಮುದ್ರದ ಬಳಿ ಇರುವುದಾಗಿ ತಿಳಿದುಬಂದಿದೆ. ಗ್ರಾಫೈಟ್ ಸೂಕ್ಷ್ಮಕಣಗಳ ಕರಿಬೂದಿ ಬಣ್ಣದ ಗ್ರಾಫೈಟ್ ನಿಂದೂಡಗೂಡಿರುತ್ತದೆ. ಗ್ರಾಫೈಟ್ ನಿಕ್ಷೇಪದಲ್ಲಿ ೧೨ ಭಾಗದಷ್ಟು ಇಂಗಾಲವಿರುತ್ತದೆ. ಈ ನಿಕ್ಷೇಪಗಳು ಉದ್ದವಾಗಿ ಮಸೂರಾಕೃತಿಯಲ್ಲಿವೆ. ಫಿಲ್ಲಿಟಿಕ್ ಪದರ ಶಿಲೆ ಮತ್ತು ಫೆರುಜಿನಸ್ ಕ್ವಾಟ್ಸೈಟ್‌ಗಳ ರೂಪದಲ್ಲಿ ಸ್ಥಳೀಯ ಗ್ರಾನೈಟ್ ಶಿಲಾವರ್ಗದಿಂದ ಕೂಡಿದೆ. ಕುರಂದದ ಕೆಲವು ಬಿಡಿ ನಿಕ್ಷೇಪಗಳು ಈ ಪ್ರದೇಶದ ಕೆಲವು ಭಾಗಗಳಲ್ಲಿ ಕಂಡುಬಂದಿವೆ. ಇವುಗಳಲ್ಲಿ ಕುರಂದವು ಸ್ಥಳೀಯ ಕಣಶಿಲಾಹರವಿನಲ್ಲಿ ಮಸೂರಾಕೃತಿಯಲ್ಲಿಯೂ, ಚಿಕ್ಕ ಚಿಕ್ಕ ಪಟ್ಟಿಗಳಂತೆಯೂ ಹಾಗೂ ಅಭ್ರಕ-ಕಾರ್ಡಿಯರೈಟ್ ಸಿಲ್ಲಿಮನೈಟ್ ಪದರ ಶಿಲಾಭಾಗಗಳಲ್ಲಿ ದೊಡ್ಡ ಗಾತ್ರದ ಹರಳುಗಳಾಗಿಯೂ ಹರಡಿರುವುದು ತಿಳಿದುಬಂದಿದೆ. ಕಾಮಸಮುದ್ರಗಳ ಸಮೀಪದಲ್ಲಿ ಸಿಲ್ಲಿಮನೈಟ್ ಕಾರ್ಡಿಯರೈಟ್ ನೊಂದಿಗೆ ಕುರಂದ ಸಹಿತ ಅಥವಾ ಕುರಂದ ರಹಿತ ಕಯನೈಟ್ ನಿಕ್ಷೇಪಗಳು ಕಂಡುಬಂದಿವೆ. ಒಟ್ಟಾರೆ

ಈ ಖನಿಜ ನಿಕ್ಷೇಪಗಳು ಜಿಲ್ಲೆಯ ಆರ್ಥಿಕ ಕ್ಷೇತ್ರದ ಮೇಲೆ ಮಹತ್ತರವಾದ ಪ್ರಭಾವ ಮತ್ತು ಲಾಭ ತರಬಹುದಾದ ಖನಿಜಗಳು ಇಲ್ಲಿ ದೊರೆಯುತ್ತವೆ.

ಪ್ರಾಗಿತಿಹಾಸ

ಯಾವುದೇ ಒಂದು ಪ್ರದೇಶದ ಅಥವಾ ಭೂಭಾಗದ ಐತಿಹಾಸಿಕ ಮಹತ್ವವನ್ನು ಆ ಪ್ರದೇಶದಲ್ಲಿ ದೊರೆಯುವ ಹಲವಾರು ಅವಶೇಷಗಳಿಂದ ತಿಳಿಯಬಹುದಾಗಿದೆ. ಇಂತಹ ಅವಶೇಷಗಳು ಇತಿಹಾಸವನ್ನು ರಚಿಸಲು ಸಹಾಯಕವಾಗಿದೆ. ಕರ್ನಾಟಕವು ಭೌಗೋಳಿಕವಾಗಿಯೂ ಸಾಂಸ್ಕೃತಿಕವಾಗಿಯೂ ಆಯಕಟ್ಟಿನ ಭಾಗದಲ್ಲಿದ್ದುದರಿಂದ ಅಲ್ಲದೆ ಉತ್ತಮ ಪರಿಸರ ಹೊಂದಿರುವುದರಿಂದಾಗಿ ಅತೀ ಪ್ರಾಚೀನ ಕಾಲದಿಂದಲೂ ಮಾನವನ ಜೀವನೋಪಾಯದ ಚಟುವಟಿಕೆಗಳಿಗೆ ಮತ್ತು ಸಂಸ್ಕೃತಿಯ ತೀವ್ರಪ್ರಗತಿಗೆ ಬಹಳ ಅನುಕೂಲವಾಗಿದೆ. ಇತಿಹಾಸವನ್ನು ಪ್ರಾಗಿತಿಹಾಸ ಮತ್ತು ಇತಿಹಾಸ ಕಾಲ ಎಂಬುದಾಗಿ ವಿಭಗಿಸಲಾಗಿದೆ. ಪ್ರಾಗಿತಿಹಾಸ ಕಾಲದ ಮಾನವನಿಗೆ ಅಕ್ಷರದ ಅಥವಾ ಓದುಬರಹದ ಜ್ಞಾನವಿರಲಿಲ್ಲ, ಸ್ವೇಚ್ಛಾ ಜೀವಿಯಾಗಿ ತನ್ನ ಮನಬಂದಂತೆ ಅಲೆಮಾರಿ ಜೀವನ ಸಾಗಿಸುತ್ತಿದ್ದನು. ತನ್ನ ಆಹಾರವನ್ನು ಬೇಟೆಯಾಡಿ ಪಡೆದು ಕೊಳ್ಳುತ್ತಿದ್ದನು. ಪ್ರಾರಂಭದಲ್ಲಿ ಬೇಟೆಯಾಡಲು ಎಲುಬು ಮತ್ತು ಕಟ್ಟಿಗೆಯಿಂದ ತಯಾರಿಸಿದ ಉಪಕರಣಗಳನ್ನು ಉಪಯೋಗಿಸಿದ್ದರಿಂದ ಕಾಲಕ್ರಮೇಣ ಅವು ಹಾಳಾಗಿವೆ ನಂತರ ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದನು. ಇಂತಹ ಉಪಕರಣಗಳನ್ನು ತಯಾರಿಸಿಕೊಳ್ಳಲು ಕಲ್ಲಿನ ಮಾದರಿಗಳ ಆಯ್ಕೆ ಅವುಗಳ ಆಕಾರ ವಿಧಾನ, ಬಳಸಿದ ತಾಂತ್ರಿಕತೆ ಬಹುಮುಖ್ಯ ಪಾತ್ರವಹಿಸಿ; ಮಾನವನ ಜೀವನ ವಿಕಾಸದ ಬದಲಾವಣೆಗಳನ್ನು ತಿಳಿಯಲು ಸಹಾಯಕವಾಗಿದೆ. ಕಲ್ಲಿನ ಬಳಕೆಯಿಂದಾಗಿ ಈ ಹಂತ ಅಥವಾ ಯುಗವನ್ನು 'ಶಿಲಾಯುಗ ಸಂಸ್ಕೃತಿ' ಎಂದು ಹೆಸರಿಸಲಾಯಿತು. ಬೆಳವಣಿಗೆಯನ್ನು ರೂಡಿಸಿಕೊಂಡ ಮಾನವ ಶಿಲೆಯಿಂದ ಲೋಹಕ್ಕೆ ಬದಲಾವಣೆ ಹೊಂದಿ ಸುಸಂಸ್ಕೃತ ಶೈಲಿಯನ್ನು ರೂಪಿಸಿಕೊಂಡು ಅನಾಗರೀಕತೆಯಿಂದ ನಾಗರಿಕತೆಯ ಕಡೆ ಹೆಜ್ಜೆ ಹಾಕಿದ.

ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಭಾರತ ಹಾಗೂ ಕರ್ನಾಟಕದ ಬೇರೆ ಬೇರೆ ಪ್ರಾಚೀನ ಸಂಸ್ಕೃತಿಗಳ ನೆಲೆಗಳ ಕುರಿತು ದೇಶಿಯ ಹಾಗೂ ವಿದೇಶಿಯ ಸಂಶೋಧಕರು ಸಂಶೋಧನೆ ಕೈಗೊಂಡು ಹೊಸ ನೆಲೆಗಳನ್ನು ಬೆಳಕಿಗೆ ತಂದಿದ್ದಾರೆ. ಕ್ರಿ.ಶ.೧೮೪೨ರಲ್ಲಿ ಪ್ರಿಮ್‌ರೋಸ್ ಪ್ರಾಗೈತಿಹಾಸದ ಅಧ್ಯಯನ ಕುರಿತಂತೆ ರಾಯಚೂರು ಜಿಲ್ಲೆಯ ಲಿಂಗಸೂಗೂರು ಪ್ರದೇಶದಲ್ಲಿ ಆಕಸ್ಮಿಕವಾಗಿ ಸಂಶೋಧಿಸಿದ ಶಿಲೋಪಕರಣಗಳಿಂದ ಆರಂಭವಾಗಿ ಮುಂದೆ ರಾಬರ್ಟ್‌ಬ್ರೂಸ್ ಫೂಟ್, ಕರ್ನಲ್ ಮೆಕೆಂಜಿಯವರು ಪ್ರಾಗೈತಿಹಾಸಿಕ ನೆಲೆಗಳ ಸಂಶೋಧನೆಯಲ್ಲಿ ಗಣನೀಯ ಸಾಧನೆ ಮಾಡಿದರು. ಇದುವರೆಗೆ ಕರ್ನಾಟಕದಲ್ಲಿ ಸುಮಾರು ೨೫೧೭ ನೆಲೆಗಳನ್ನು ಗುರುತಿಸಿದ್ದು, ಇಂದಿಗೂ ಸಹ ನಿರಂತರವಾಗಿ ಹೊಸ ಹೊಸ ಶಿಲಾಯುಗದ ನೆಲೆಗಳು ಕಂಡುಬರುತ್ತವೆ. ಈವರೆಗೂ ಮಧ್ಯ ಹಳೇಯುಗದ ೨೨, ಅಂತ್ಯ ಹಳೇ

ಶಿಲಾಯುಗದ ಸಂಸ್ಕೃತಿಯ ೫೦, ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ೬೬, ನೂತನ ಶಿಲಾಯುಗದ ಸಂಸ್ಕೃತಿಯ ೩೧, ಶಿಲಾ-ತಾಮ್ರ ಯುಗದ ೭, ಬೃಹತ್ ಶಿಲಾಯುಗ ಸಂಸ್ಕೃತಿಯ ೩೮, ಇತಿಹಾಸ ಆರಂಭ ಕಾಲದ ೧೯ ನೆಲೆಗಳು ಕಂಡುಬಂದಿವೆ. ಇವುಗಳಲ್ಲಿ ವಿವಿಧ ಹಂತದಲ್ಲಿ ಬೇರೆ ಬೇರೆ ಮಾದರಿಯ ಆಯುದೋಪಕರಣಗಳು ದೊರೆತಿವೆ. ನಂದಿಬೆಟ್ಟ ಪರಿಸರ ಭೌಗೋಳಿಕವಾಗಿ ಬೆಟ್ಟಗುಡ್ಡಗಳಿಂದ ಆವೃತ್ತವಾಗಿದ್ದು, ಇಲ್ಲಿನ ಭೂಭಾಗದ ಮಾನವ ಚಟುವಟಿಕೆಯನ್ನು ಇತಿಹಾಸ ಪೂರ್ವ ಕಾಲಕ್ಕೆ ಗುರುತಿಸಬಹುದಾಗಿದೆ. ನೂತನ ಶಿಲಾಯುಗ ಸಂಸ್ಕೃತಿಯು ಮಾನವನ ಸಾಂಸ್ಕೃತಿಕ ವಿಕಾಸದಲ್ಲಿ ಅತ್ಯಂತ ಮಹತ್ವದ ಘಟ್ಟ ಇದಾಗಿದ್ದು, ಅಲೆಮಾರಿ ಹಂತದಿಂದ ಒಂದೆಡೆ ನೆಲೆಯೂರುವ ಬದುಕಿನತ್ತ ಮುಂದಾದ ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ಜನ ಜಿಲ್ಲೆಯ ದಕ್ಷಿಣ ಭಾಗದಲ್ಲಿ ವಿರಳವಾಗಿ ನೆಲೆಗೊಂಡಿದ್ದ ಅಂಶ ಇದರಿಂದ ವ್ಯಕ್ತವಾಗುತ್ತದೆಯಾದರೂ ಈ ಸಂಸ್ಕೃತಿಗೆ ಸೇರಿದ ಮಾನವ ಮಾಲೂರು ತಾಲೂಕಿನ ಬನ್ನಹಳ್ಳಿ, ಜಡಿಗೆನಹಳ್ಳಿಯು ದಕ್ಷಿಣ ಭಾರತದಲ್ಲೇ ಅತಿ ದೊಡ್ಡವಸತಿ ನೆಲೆಯಾಗಿತ್ತೆಂಬ ಅಂಶ ತಿಳಿದುಬರುತ್ತದೆ. ಅದೇ ರೀತಿ ಚಿಂತಾಮಣಿ ತಾಲೂಕಿನ ಸಂತೆಕಲ್ಲಹಳ್ಳಿಯ ಬೂದಿಕಟ್ಟು ಪ್ರದೇಶದಲ್ಲಿ ದೊಡ್ಡಗ್ರಾಮದ ಶಿಲಾಕೊಡಲಿ, ಉಬ್ಬುಕಲ್ಲು ಮುಂತಾದ ಅವಶೇಷಗಳು ದೊರೆತಿವೆ. ಬೃಹತ್ ಶಿಲಾಯುಗದ ಸಂಸ್ಕೃತಿಯ ಕಾಲವು ಮಾನವನ ಜೀವನದಲ್ಲಿ ಒಂದು ಪ್ರಮುಖ ಘಟ್ಟವಾಗಿದೆ. ಈ ಜನರ ಸಂಸ್ಕೃತಿಯ ಕುರುಹುಗಳನ್ನು ದಕ್ಷಿಣ ಭಾರತದ ತುಂಬೆಲ್ಲಾ ಕಾಣಬಹುದು. ಬಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮಾನವ ವಿವಿಧ ಬಗೆಯ ಸಮಾಧಿಗಳನ್ನು ನಿರ್ಮಿಸುವಲ್ಲಿ ಬೃಹತ್ ಗಾತ್ರದ ಕಲ್ಲು ಚಪ್ಪಡಿಗಳನ್ನು ಬಳಸುತ್ತಿದ್ದುದರಿಂದ ಇದಕ್ಕೆ 'ಬೃಹತ್ ಶಿಲಾಯುಗ ಸಂಸ್ಕೃತಿ' ಎಂಬ ಹೆಸರುಬಂದಿಗೆ ಎಂದೂ ಕರೆಯಲಾಗುತ್ತದೆ. ಈ ಸಂಸ್ಕೃತಿಯ ಜನರ ವಾಸಸ್ಥಳವನ್ನು ವಸತಿ ನೆಲೆಗಳೆಂದೂ ಶವಸಂಸ್ಕಾರದ ತಾಣಗಳನ್ನು ಗೋರಿ ಅಥವಾ ಸಮಾಧಿ ನೆಲೆಗಳೆಂದೂ ಗುರುತಿಸಲಾಗಿದೆ. ಈ ಸಂಸ್ಕೃತಿಗೆ ಸೇರಿದ ಜನರ ವಸತಿ ನೆಲೆಗಳಿಗಿಂತ ಸಮಾಧಿನೆಲೆ ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗಿರುವುದು ಮತ್ತೊಂದು ವೈಶಿಷ್ಟ್ಯವಾಗಿದೆ. ಕಪ್ಪು ಕೆಂಪುವರ್ಣದ ಮಡಕೆಗಳ ಬಳಕೆ ಈ ಸಂಸ್ಕೃತಿಯ ಪ್ರಮುಖ ಲಕ್ಷಣವಾಗಿದೆ. ಜಿಲ್ಲೆಯಲ್ಲಿ ಸುಮಾರು ೩೪ ವಸತಿ ನೆಲೆ ಹಾಗೂ ೧೬೨ ಗೋರಿ ಅಥವಾ ಸಮಾಧಿ ನೆಲೆಗಳು ಪತ್ತೆಯಾಗಿವೆ. ಚಿಂತಾಮಣಿ, ಗುಡಿಬಂಡೆ, ಗೌರಿಬಿದನೂರು ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ತಾಲ್ಲೂಕುಗಳಲ್ಲೂ ಕಂಡುಬರುತ್ತವೆ. ಗೌರಿಬಿದನೂರು ತಾಲೂಕಿನ ಬೀರಮಂಗಲ ವಸತಿನೆಲೆಯನ್ನು ರಾಬರ್ಟ್‌ಬ್ರೂಸ್ ಫೂಟ್ ಅವರು ೧೯೧೬ರಷ್ಟು ಹಿಂದೆಯೇ ಬೆಳಕಿಗೆ ತರುವಲ್ಲಿ ಯಶಸ್ವಿಯಾಗಿದ್ದರು. ಚಿಂತಾಮಣಿ ತಾಲೂಕಿನ ಕೈವಾರ ಹಾಗೂ ಮುರಗಮಲ್ಲಾ ಶಿಡ್ಲಘಟ್ಟ ತಾಲೂಕಿನ ಕೊಂಡರಾಜನಹಳ್ಳಿಯಲ್ಲೂ ಈ ಸಂಸ್ಕೃತಿಗೆ ಸಂಬಂಧಿಸಿದ ವಸತಿ ನೆಲೆಗಳು ಪತ್ತೆಯಾಗಿವೆ. ಸತ್ತವರ ಅಂತ್ಯಸಂಸ್ಕಾರವನ್ನು ವಿಧಿವತ್ತಾಗಿ ಮಾಡುತ್ತಿದ್ದ ಅವರು, ಶವಸಂಸ್ಕಾರ ಪದ್ಧತಿಯಲ್ಲಿ ಅನುಸರಿಸುತ್ತಿದ್ದ ಶಿಲಾವೃತ್ತ, ಕಲ್ಲುಗುಪ್ಪೆ, ಶಿವಗುಣಿ, ಶವಸಂಪುಟ, ಮೃತ್ಪಾತ್ರೆ, ನಿಲುಸುಗಲ್ಲು, ಹಾದಿಕೋಣೆ, ಕಿಂಡಿಕೋಣೆ, ಕಲ್ಗೋರಿ ಮುಂತಾದ ಮಾದರಿಯ

ಸಮಾಧಿಗಳನ್ನು ಉದಾರಿಸಬಹುದಾಗಿದ್ದು, ಇವುಗಳ ಅಧ್ಯಯನದಿಂದ ಆ ಜನರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕನ್ನು ಗ್ರಹಿಸಬಹುದು. ಸತ್ತವರ ಅಂತ್ಯಸಂಸ್ಕಾರವನ್ನು ಅದ್ದೂರಿಯಾಗಿ ನೆರವೇರಿಸುತ್ತಿದ್ದ ಆ ಜನರ ಧಾರ್ಮಿಕ ನಂಬಿಕೆಗಳನ್ನು ಪ್ರತಿಬಿಂಬಿಸುವ ಪ್ರತೀಕವಾಗಿವೆ.

ಈ ಸಂಸ್ಕೃತಿಗೆ ಸೇರಿದ ನೆಲೆಗಳಲ್ಲಿ ರಾಜಘಟ್ಟವೂ ಒಂದಾಗಿದೆ. ದೊಡ್ಡಬಳ್ಳಾಪುರದಿಂದ ನಂದಿಗೆ ಹೋಗುವ ಮಾರ್ಗಮಧ್ಯದಲ್ಲಿದೆ. ತಾಲ್ಲೂಕಿನಿಂದ ೮ ಕಿ.ಮೀ. ಈಶಾನ್ಯಕ್ಕೆ ಇರುವ ಒಂದು ಸಣ್ಣ ಗ್ರಾಮ. ರಾಜಘಟ್ಟ ಒಂದು ಐತಿಹಾಸಿಕ ನೆಲೆ, ಇಲ್ಲಿನ ಪ್ರಾಚ್ಯವಸ್ತು ಕುರುಹುಗಳು ರಾಜಘಟ್ಟದ ಸಂಸ್ಕೃತಿಯನ್ನು ಕ್ರಿ.ಸ್ತ.ಪೂರ್ವದ ಶತಮಾನಗಳಿಗೆ ಕೊಂಡೊಯ್ಯುತ್ತದೆ. ಈ ಶತಮಾನಗಳಿಗೆ ಸೇರಿಸ ಬಹುದಾದ ಬೃಹತ್ ಶಿಲಾಯುಗ ಸಂಸ್ಕೃತಿಯ ಅನೇಕ ಸಮಾಧಿಗಳು ಇಲ್ಲಿ ಕಂಡುಬಂದಿವೆ. ರಾಜಘಟ್ಟದ ಬಳಿ ಯಾವುದೇ ನದಿ ಅಥವಾ ತೊರೆಗಳಿಲ್ಲ. ಬದಲಾಗಿ ಊರಿನ ಪಕ್ಕದಲ್ಲೇ ಒಂದು ದೊಡ್ಡದಾದ ಕೆರೆ ಇದೆ. ಈ ಕೆರೆ ಪ್ರಾಯಶಃ ಅಲ್ಲಿನ ಜನವಸತಿಗೆ ಪ್ರಾಚೀನ ಕಾಲದಿಂದಲೂ ನೀರಿನ ಆಸರೆಯನ್ನು ಒದಗಿಸಿರಬೇಕೆಂದು ತಿಳಿಯಬಹುದು. ಈ ಗ್ರಾಮದ ಆಗ್ನೇಯಕ್ಕೆ ವಿಶಾಲವಾದ ಕೃಷಿ ಭೂಮಿ ಇದೆ. ಈ ಭೂಮಿಯ ಸ್ವಲ್ಪ ಭಾಗವನ್ನು ಅಲ್ಲಿಯ ಜನರು ಬೂದಿಗುಂಡಿ ಪ್ರದೇಶವೆಂದು ಕರೆಯುತ್ತಾರೆ. ಈ ಪ್ರದೇಶ ಸುಮಾರು ೧೦೦ ಎಕರೆ ಭೂ ವಿಸ್ತೀರ್ಣವನ್ನು ಹೊಂದಿದ್ದು, ಸುಮಾರು ೮ ರಿಂದ ೧೦ ಅಡಿಯವರೆಗಿನ ಭೂಮಿ ಬೂದಿಮಿಶ್ರಿತ ಮಣ್ಣಿನಿಂದ ತುಂಬಿದಂತಹ ಪ್ರದೇಶ. ಬೂದಿ ಮಿಶ್ರಿತ ಮಣ್ಣು ಜನವಸತಿ ನಿವೇಶನದ ಒಂದು ಕುರುಹು. ಕೆಂಪು ಮತ್ತು ಕಪ್ಪು ಬಣ್ಣದ ಮಡಕೆಗಳು, ಕೆಂಪು ಬಣ್ಣದ ಮಡಕೆಗಳು, ಚಿತ್ರ ತಮಟಿಕೆಗಳು ಗಾಜಿನ, ಕಲ್ಲಿನ ಮಣಿಗಳು ಮುಂತಾದವು ಈ ಅವಶೇಷಗಳಲ್ಲಿ ವಿಶೇಷವಾದ ವಸ್ತುಗಳು ಇವೆಲ್ಲವೂ ಕರ್ನಾಟಕದ ಆದಿಚಾರಿತ್ರಿಕ ಕಾಲದ ನೆಲೆಗಳಲ್ಲಿ ದೊರಕಿರುವ ಅವಶೇಷಗಳಿಗೆ ಸರಿಸಮಾನವಾಗಿರುವುದರಿಂದ ಇಲ್ಲಿಯೂ ಆ ಕಾಲದ ಸಂಸ್ಕೃತಿ ನೆಲೆಸಿತ್ತೆಂದು ಹೇಳಬಹುದು. ಆದರೆ ರಾಜಕೀಯವಾಗಿ ಯಾವ ಬಣ ಈ ಪ್ರದೇಶದಲ್ಲಿ ಆಳುತ್ತಿದ್ದಿತೆಂಬುದಕ್ಕೆ ಯಾವುದೇ ನಿಖರವಾದ ಮಾಹಿತಿ ಇಲ್ಲ. ಆದಿ ಚಾರಿತ್ರಿಕ ಕಾಲಕ್ಕೆ ಸೇರಿಸಬಹುದಾದ ಇಟ್ಟಿಗೆಯ ಕಟ್ಟಡದ ಅವಶೇಷಗಳು ಸಹ ಬೂದಿಗುಂಡಿ ಪ್ರದೇಶದಲ್ಲಿ ಕಂಡುಬಂದಿದೆ. ಇಲ್ಲಿ ಬಳಸಿರುವ ಇಟ್ಟಿಗೆಗಳು ಕರ್ನಾಟಕದಲ್ಲಿ ಶಾತವಾಹನರ ಮತ್ತು ಗಂಗರ ಕಾಲದ ಕಟ್ಟಡಗಳಲ್ಲಿ ಬಳಸಿರುವ ಇಟ್ಟಿಗೆಗಳ ಆಕೃತಿಗೆ ಮತ್ತು ಗಾತ್ರಕ್ಕೆ ಸಮನಾಗಿವೆ.

ರಾಜಘಟ್ಟದ ಉತ್ಖನನ ಕಾರ್ಯವನ್ನು ಎರಡು ಬಾರಿ ಕೈಗೊಳ್ಳಲಾಗಿದ್ದು, ಮೊದಲ ಹಂತದಲ್ಲಿ ಕಂಡುಬಂದ ಇಟ್ಟಿಗೆಯಲ್ಲಿ ನಿರ್ಮಿತವಾದ ಬೌದ್ಧ ಚೈತ್ಯಾಲಯವು ದಕ್ಷಿಣ ಕರ್ನಾಟಕದಲ್ಲೇ ಪ್ರಪ್ರಥಮವಾಗಿ ರಾಜಘಟ್ಟದಲ್ಲಿ ದೊರೆತಿದೆ. ಅದೇ ನಿವೇಶನದ ಮತ್ತೊಂದು ಭಾಗದಲ್ಲಿ ನೂರಾರು ಸಂಖ್ಯೆಯಲ್ಲಿ ದೊರೆತಿದ್ದ ಪುಟ್ಟ ಮಣ್ಣಿನ ಹರಕೆಯ ಸ್ತೂಪಗಳ ಶೋಧ ಸಂಶೋಧನಕಾರರಿಗೆ ಅನೇಕ ನಿಗೂಢ

ವಿಷಯಗಳ ಬಗ್ಗೆ ಸುಳಿವು ಕೊಟ್ಟಿದ್ದವು. ದ್ವಿತೀಯ ಹಂತದ ಉತ್ಖನನದಿಂದ ರಾಜಘಟ್ಟದಲ್ಲಿ ದೊರೆತ ವಸ್ತುಗಳೆಂದರೆ ವಿಹಾರ, ಸ್ನಾನದ ಮನೆ, ಕುಂಭಸಮಾಧಿ ಕೆಲವು ಪ್ರಾಚ್ಯವಸ್ತುಗಳು ದೊರೆತಿವೆ.

ನಂದಿಬೆಟ್ಟ ಪರಿಸರದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ನೆಲೆಯನ್ನು ಕ್ಷೇತ್ರಕಾರ್ಯದ ಮೂಲಕ ಗುರುತಿಸಲಾಗಿದೆ. ನಂದಿಬೆಟ್ಟದಿಂದ ಸುಮಾರು ೨ ಕಿ.ಮೀ. ದೂರದಲ್ಲಿರುವ ಯಲವಳ್ಳಿಯಲ್ಲಿ ಈ ಸಂಸ್ಕೃತಿಗೆ ಸೇರಿದ ಸಮಾಧಿಗಳ ಕುರುಹುಗಳು ದೊರಕಿವೆ. ಸುತ್ತಮುತ್ತ ಪ್ರದೇಶದಲ್ಲಿ ಸಮಾಧಿಗಳು ದೊರೆತಿದ್ದು ಜನ ನಿಧಿಯ ಆಸೆಯಿಂದಾಗಿ ಅವುಗಳನ್ನು ಅಗೆದು ಹಾಳು ಮಾಡಿದ್ದಾರೆ. ಕ್ಷೇತ್ರಕಾರ್ಯದ ಸಮಯದಲ್ಲಿ ಇಲ್ಲಿಗೆ ಭೇಟಿ ನೀಡಿ ಸ್ಥಳೀಯರ ಅಭಿಪ್ರಾಯಗಳನ್ನು ಸಂಗ್ರಹಿಸುವುದರ ಜೊತೆಗೆ ಈ ಸ್ಥಳದಲ್ಲಿ ಉತ್ಖನನ ಕಾರ್ಯ ಕೈಗೊಂಡಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳು ದೊರೆಯುತ್ತವೆ ಎಂಬ ವಿಷಯದಲ್ಲಿ ಯಾವುದೇ ಸಂಶಯವಿಲ್ಲ. ಈ ಹಳ್ಳಿಯ ಸುತ್ತ ಬೆಟ್ಟಗುಡ್ಡಗಳಿಂದ ಆವೃತ್ತವಾಗಿದೆ. ಪರಿಸರದಲ್ಲಿ ಕೆರೆ-ಕುಂಟೆಗಳಿದ್ದು, ಅಲ್ಲಿನ ಜನರಿಗೆ ನೀರಿನ ಸೌಲಭ್ಯ ಪೂರೈಕೆಯಾಗುತ್ತಿತ್ತು. ಆದರೆ ಇಂದು ಅಲ್ಲಿ ಯಾವುದೇ ನೀರಿನ ತಾಣಗಳು ಕಾಣದಾಗಿವೆ. ಕಾರಣ ವ್ಯವಸಾಯದ ದೃಷ್ಟಿಯಿಂದ ಭೂಮಿಯನ್ನು ಅಂದರೆ ಕೆರೆಗಳನ್ನು ಒತ್ತುವರಿ ಮಾಡಿಕೊಳ್ಳುವುದರ ಮೂಲಕ ಅವುಗಳ ಕುರುಹುಗಳು ಇಲ್ಲದಾಗಿವೆ. ನಂದಿಬೆಟ್ಟವು ಪಂಚ ನದಿಗಳ ಉಗಮ ಸ್ಥಾನವಾಗಿರುವುದರಿಂದ ಶಿಲಾಯುಗದ ಮಾನವನ ವಾಸಸ್ಥಾನವಾಗಿತ್ತು ಎಂಬುದನ್ನು ಈ ಪರಿಸರದ ಸುತ್ತಮುತ್ತ ಲಕ್ಷಣಗಳು ಪುಷ್ಟೀಕರಿಸುತ್ತವೆ.

ಅಲಿಖಿತ ಆಧಾರಗಳನ್ನು ಅವಲಂಬಿಸಿರುವ ಇತಿಹಾಸ ಪೂರ್ವಕಾಲ ಲಿಖಿತ ಆಧಾರಗಳನ್ನು ಅವಲಂಬಿಸಿರುವ ಇತಿಹಾಸ ಕಾಲದ ನಡುವಿನ ಸಂಕ್ರಮಣ ಕಾಲವೇ ಇತಿಹಾಸ ಆರಂಭ ಕಾಲವಾಗಿದೆ. ಮಾನವ ಈ ಅವಧಿಯಲ್ಲಿ ಒಂದೆಡೆ ನೆಲೆಯೂರಿ ಗ್ರಾಮೀಣ ಬದುಕನ್ನು ಆರಂಭಿಸಿ ಬರವಣಿಗೆ ಕಲೆಯನ್ನು ಮೈಗೂಡಿಸಿಕೊಳ್ಳುವತ್ತ ದಾಪುಗಾಲು ಹಾಕಲಾರಂಭಿಸಿದ್ದನು. ಸುಟ್ಟಮಡಿಕೆಗಳು ಕೆಂಪು ಅಥವಾ ಕಂದು ಬಣ್ಣದ ಮಡಿಕೆಗಳ ಮೇಲೆ ವೈವಿಧ್ಯಮಯವೂ ಕಲಾತ್ಮಕವೂ ಆದ ಬಿಳಿಯ ಬಣ್ಣದ ಅಲಂಕಾರಿಕ ಗೆರೆಗಳು ವಿಶೇಷವಾಗಿ ಕಂಡುಬರುತ್ತವೆ. ಇಟ್ಟಿಗೆಯಿಂದ ಕಟ್ಟಲ್ಪಟ್ಟ ರಚನೆಗಳು ಈ ಸಂಸ್ಕೃತಿಯ ಇನ್ನೊಂದು ಲಕ್ಷಣ. ಬಿಳಿಯ ಬಣ್ಣದ ಅಲಂಕಾರವನ್ನುಳ್ಳ ರೌಲೆಟೆಡ್ ಕೆಂಪುಮಡಿಕೆಗಳ ಅವಶೇಷಗಳು ನಾಡಿನ ವಿವಿಧೆಡೆಗಳಲ್ಲಿ ವಿಶೇಷವಾಗಿ ಕಂಡುಬಂದಿವೆ. ನೆರೆಯ ಬೆಂಗಳೂರು ನಗರದ ಜಾಲಹಳ್ಳಿ ಹಾಗೂ ಯಶವಂತಪುರಗಳಲ್ಲಿ ದೊಡ್ಡ ಪ್ರಮಾಣದಲ್ಲಿ ರೋಮನ್ನರ ಬೆಳ್ಳಿನಾಣ್ಯಗಳು ಪತ್ತೆಯಾಗಿದ್ದು, ಕರ್ನಾಟಕದೊಂದಿಗೆ ರೋಮನ್ನೊಂದಿಗಿದ್ದ ವಾಣಿಜ್ಯ ಸಂಬಂಧವನ್ನು ತಿಳಿಸುತ್ತದೆ.

ನಂದಿಬೆಟ್ಟ ಪರಿಸರದ ಪ್ರಾಗೈತಿಹಾಸದ ಪರಿಶೀಲನೆಯಿಂದ ತಿಳಿದುಬರುವುದೇನೆಂದರೆ ಮಾನವನು ಆರಂಭದಿಂದ ಹಿಡಿದು ನಾಗರಿಕನಾದ ಹಂತದವರೆಗಿನ ಜನಜೀವನದ ಬದಲಾವಣೆಗಳ ಬಗ್ಗೆ ತಿಳಿಯಲು

ಸಾಧ್ಯವಾಗಿದೆ. ಅಲ್ಲದೆ ಇಲ್ಲಿ ದೊರೆತ ಅವಶೇಷಗಳೂ ಈ ಪ್ರದೇಶದ ಮಾನವ ಇತಿಹಾಸದ ಮೇಲೆ ಬೆಳಕು ಚೆಲ್ಲುವಲ್ಲಿ ಪ್ರಮುಖ ಪಾತ್ರವಹಿಸಿವೆ.

ಅಡಿಟಿಪ್ಪಣಿಗಳು

೧. ಷೇಕ್ ಆಲಿ ಬಿ (ಪ್ರ.ಸಂ), ಸುಂದರ ೬(ಸಂಪುಟ ಸಂಪಾದಕರು), ೧೯೯೭, ಕರ್ನಾಟಕ ಚರಿತ್ರೆ ಸಂಪುಟ-೧, ಪು.೧೮೭

೨. ಶಿವತಾರಕ್ ಕೆ.ಬಿ., ಪೂರ್ವೋಕ್ತ, ಪು.೪೧೪

೩. ವಸು ಎಂ.ವಿ., ೨೦೦೧, ದಕ್ಷಿಣ ಕರ್ನಾಟಕದ ಅರಸು ಮನೆತನಗಳು

೪. ಕನ್ನಡ ವಿಷಯ ವಿಶ್ವಕೋಶ, ಪು.೯೦೯

೫. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಪು.೯೦೩

೬. ಕಾಮತ್ ಎಸ್.ಯು.(ಸಂ), ೧೯೮೬, ಕರ್ನಾಟಕ ರಾಜ್ಯಗೆಜೆಟಿಯರ್ ಭಾಗ ೩, ಪು.೫೩೬

೭. ಎಚ್.ಚಿತ್ತರಂಜನ್ (ಸಂ), ಕೋಲಾರ ಜಿಲ್ಲೆ ಗೆಜಿಟಿಯರ್, ಪು.೫೦

೮. ಹಯವದನ್‌ರಾವ್ ಸಿ., ಮೈಸೂರು ಗೆಜೆಟಿಯರ್, ಪು.೫೩೨

೯. ಕೃಷಿ ಇಲಾಖೆಯ ವರದಿ

೧೦. ಅರಣ್ಯ ಇಲಾಖೆಯ ವರದಿ, ಚಿಕ್ಕಬಳ್ಳಾಪುರ, ೨೦೦೧

೧೧. ಅರಣ್ಯ ಇಲಾಖೆಯ ವರದಿ, ಕೋಲಾರ, ೨೦೦೩

೧೨. ಇತಿಹಾಸದರ್ಶನ ಸಂಪುಟ ೧೭, ೨೦೦೨, ಪು.೧

೧೩. ಇತಿಹಾಸದರ್ಶನ ಸಂಪುಟ ೨೦, ೨೦೦೫, ಪು.೮೯

೧೪. ಇತಿಹಾಸದರ್ಶನ ಸಂಪುಟ ೧೯, ೨೦೦೪, ಪು.೬

೧೫. ವಿಜಯ ಕರ್ನಾಟಕ, ಮೇ ೨೬, ೨೦೦೯

೧೬. ವಾಙ್ಮಯ ಇತಿಹಾಸ, ಪೂರ್ವೋಕ್ತ

೧೭. ವಸು ಎಂ.ವಿ., ಪೂರ್ವೋಕ್ತ, ಪು.೩೩

೧೮. ಬೆಂಗಳೂರು, ಜಿಲ್ಲೆಯ ಶಾಸನಗಳು, Vo-೯

ಅಧ್ಯಾಯ ೩

ಇತಿಹಾಸ

೩

ಇತಿಹಾಸ

'ಬಸವರ ಊಟಿ' ಎಂದೇ ಪ್ರಸಿದ್ಧವಾಗಿರುವ ನಂದಿಬೆಟ್ಟ ಅಥವಾ ನಂದಿದುರ್ಗ ತಂಪು ಹವೆ ದಟ್ಟ ಕಾಡಿನಿಂದ ಸುತ್ತುವರಿದಿರುವ ಸುಂದರ ಪರಿಸರ ಹಾಗೂ ಚಾರಿತ್ರಿಕ ಸ್ಮಾರಕಗಳಿಂದ ಕೂಡಿದೆ. ನಂದಿಗಿರಿಧಾಮ ಬೇಸಿಗೆಯ ತಂಗುದಾಣವಾಗಿ ಅತ್ಯಂತ ಜನಪ್ರಿಯವಾಗಿದೆ. ವರ್ಷದುದ್ದಕ್ಕೂ ಹಿತಕರ ಹವೆಯಿಂದ ಕೂಡಿದೆ. ಪ್ರಾಚೀನ ಕಾಲದಿಂದಲೂ ಅನೇಕ ರಾಜಮನೆತನಗಳು, ಸಾಮಂತರು ಹಾಗೂ ಪಾಳೆಗಾರರು ಆಡಳಿತ ನಡೆಸಿರುವ ಉಲ್ಲೇಖಗಳಿವೆ. ನಂದಿಬೆಟ್ಟ ಪರಿಸರದ ಇತಿಹಾಸ ಪಲ್ಲವರಿಂದ ಮೊದಲುಗೊಂಡು ಮೈಸೂರಿನ ಒಡೆಯರ ಕಾಲದವರೆಗಿನ ಆಡಳಿತದ ಸುಧಾರಣೆಯ ಕುರುಹುಗಳನ್ನು ಕಾಣಬಹುದು. ನಂತರ ಬ್ರಿಟಿಷರ ನಿಯಂತ್ರಣಕ್ಕೆ ಒಳಗಾಯಿತು. ಅವರ ಕಾಲದಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಂಡಿತು.

ಬಾಣ ಹಾಗೂ ಗಂಗರಸರ ಸೈನಿಕ ನೆಲೆಯಾಗಿದ್ದ ನಂದಿಕ್ಷೇತ್ರವು ತ್ರೇತಾಯುಗದಲ್ಲಿ ಪುರಾತನ ಕೇಂದ್ರವಾಗಿತ್ತೆಂದು ಹೇಳಲಾಗಿದ್ದು, ಅದು ತನ್ನದೇ ಆದ ಸ್ಥಳ ಮಹಾತ್ಮೆಯನ್ನು ಹೊಂದಿದೆ. ನಂದಿ ತನ್ನ ಪ್ರಾಯಶ್ಚಿತ್ತದ ಪರಿಹಾರಕ್ಕಾಗಿ ಕೂಷ್ಮಾಂಡ ಋಷಿಗಳ ಅಣತಿಯಂತೆ ತಪಸ್ಸನ್ನು ಆಚರಿಸಿದನು. ಅದೇ ಸಮಯದಲ್ಲಿ ಭೂಲೋಕದಲ್ಲಿ ಕ್ಷಾಮವುಂಟಾಯಿತು. ಆಗ ದೇವಲೋಕದ ಕಾಮಧೇನು ಭೂಲೋಕಕ್ಕೆ ಬಂದು ನಂದಿಯನ್ನು ಸೇರಿತು. ಇವುಗಳ ಸಮಾಗಮದಿಂದ ಸಹಸ್ರಾರು ಕರುಗಳು ಹುಟ್ಟಿದವು. ಧಾರಕಾರವಾಗಿ ಹರಿದ ಹಾಲಿನ ಪ್ರವಾಹವೇ ಕ್ಷೀರನದಿಯಾಯಿತೆಂದು, ನಂದಿತಪಸ್ಸು ಮಾಡಿದ ಆ ಬೆಟ್ಟವೇ ನಂದಿ'ಗಿರಿ' ಎಂದೂ ಪ್ರಸಿದ್ಧಿಹೊಂದಿದ(ಪುರಾಣೋಕ್ತಕ್ಷೀರ)ನದಿಯೇ ನಂದಿಬೆಟ್ಟದಲ್ಲಿ ಹುಟ್ಟಿ ಕೋಲಾರ ಜಿಲ್ಲೆಯ ಪೂರ್ವದಲ್ಲಿ ಹರಿದು ಹೋಗುವ ಪಾಲಾರ್ ನದಿ ಎಂದು ಹೇಳಲಾಗುತ್ತದೆ. ಸಾಗರಕ್ಕೆ ಸೇತುವೆ ನಿರ್ಮಿಸಲು ಮುಂದಾದ ರಾಮನಿಗೆ ವಾನರರು ನೆರವಾದ ಸಂದರ್ಭದಲ್ಲಿ ಮೇರು ಪರ್ವತದಿಂದ ತಾವು ತಂದಿದ್ದ ಐದು ಶಿಖರಗಳನ್ನು, ಸೇತುವೆ ಪೂರ್ಣಗೊಂಡಿದ್ದರಿಂದ ಅನಿವಾರ್ಯವಾಗಿ ದಂಡಕಾರಣ್ಯದಲ್ಲಿ ಇಳಿಸಿದರಂತೆ ಆ ಪಂಚಗಿರಿಗಳೇ ನಂದಿಬೆಟ್ಟ ಶ್ರೇಣಿಯಲ್ಲಿರುವ ನಂದಿಗಿರಿ, ಬ್ರಹ್ಮಗಿರಿ, ಸ್ಕಂದಗಿರಿ, ದಿವ್ಯಗಿರಿ ಮತ್ತು ವಿಷ್ಣುಗಿರಿ ಕೂಷ್ಮಾಂಡ ಋಷಿಗಳು ಇಲ್ಲಿ ತಪಸ್ಸು ಮಾಡಿದ್ದರಿಂದ 'ಕೂಷ್ಮಾಂಡ ಪರ್ವತ' ಎಂದೂ ಪ್ರಸಿದ್ಧಿಪಡೆಯಿತೆಂದು ಹೇಳಲಾಗಿದೆ.[೨೦]

ಪಲ್ಲವರು

ನಂದಿಬೆಟ್ಟ ಪರಿಸರದ ಇತಿಹಾಸ ಇಲ್ಲಿ ದೊರಕಿರುವ ಚಾರಿತ್ರಿಕ ಸ್ಮಾರಕಗಳನ್ನು ಅವಲಂಬಿಸಿದೆ. ಇಲ್ಲಿನ ಇತಿಹಾಸ ಪ್ರಾರಂಭವಾಗುವುದು ಪಲ್ಲವರಿಂದ ಮೊದಲುಗೊಳ್ಳುತ್ತದೆ. ಶಾತವಾಹನರ ಅವನತಿಯ ನಂತರ ದಕ್ಷಿಣ ಭಾರತದ ಕಂಚಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಪಲ್ಲವರು ಪ್ರಾಬಲ್ಯಕ್ಕೆ ಬಂದರು. ಕ್ರಿ.ಶ.೩ನೇ ಶತಮಾನದಿಂದ ೯ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ ಇವರು ಭಾರತೀಯ ಸಂಸ್ಕೃತಿಗೆ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ. ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಅಮೋಘವಾದ ಪ್ರಗತಿ ಕಂಡುಬಂದಿತು. ತಮ್ಮ ಪ್ರತಿಸ್ಪರ್ಧಿಗಳಾದ ಪಾಂಡ್ಯ-ಚೋಳರನ್ನು ಹತ್ತಿಕ್ಕಿ ದೀರ್ಘಕಾಲ ಆಳಿದ ಪಲ್ಲವರು ಭಾರತದ ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದಿದ್ದಾರೆ. ಪಲ್ಲವರು ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ದಕ್ಷಿಣದಲ್ಲಿ ಚೋಳರು ಇನ್ನೂ ಪ್ರಾಬಲ್ಯಕ್ಕೆ ಬಂದಿರಲಿಲ್ಲ. ಆದರೆ ೯ನೇ ಶತಮಾನದ ಅಂತ್ಯದಲ್ಲಿ ಪಲ್ಲವರು ರಾಜಕೀಯ ರಂಗದಿಂದ ನಿರ್ಗಮಿಸುವಂತಾಗಲು ಚೋಳರೇ ಕಾರಣರಾದರು. ಪಲ್ಲವರು ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಸಾಧಿಸಿದಷ್ಟು ಮಹತ್ಕಾರ್ಯ ಬಹುಶಃ ಇನ್ನಾವ ಕ್ಷೇತ್ರದಲ್ಲೂ ಕಾಣಲಾರೆವು. ಕಲೆ ಮತ್ತು ವಾಸ್ತುಶಿಲ್ಪದ ಪ್ರಗತಿಯು ಉನ್ನತಮಟ್ಟ ಮುಟ್ಟಿತ್ತು. ಪಲ್ಲವರು ತಮ್ಮದೇ ಆದ ದ್ರಾವಿಡ ಶೈಲಿಯನ್ನು ಪ್ರಥಮಬಾರಿಗೆ ರೂಢಿಯಲ್ಲಿ ತಂದರು. ಮುಂದೆ ಅದು ಚೋಳರು, ವಿಜಯನಗರದ ಅರಸರ ಆಳ್ವಿಕೆಯನ್ನು ಮತ್ತಷ್ಟು ಪ್ರಗತಿ ಕಂಡಿತು. ನಂದಿಬೆಟ್ಟ ಪರಿಸರದಲ್ಲಿ ಕಂಡುಬರುವ ದೇವಾಲಯಗಳ ವಾಸ್ತುಶಿಲ್ಪದಲ್ಲಿ ಇವರ ಕಲಾ ಕೌಶಲ್ಯವನ್ನು ಕಾಣಬಹುದಾಗಿದೆ. ಹೊಯ್ಸಳರಿಗೆ ದೊರೆತ ಮೃದುಗಲ್ಲು ಇವರಿಗೆ ಲಭ್ಯವಾಗಿಲ್ಲದ ಕಾರಣ ಕಗ್ಗಲ್ಲನ್ನೇ ಬಳಸಿ ಬೃಹತ್ ದೇವಾಲಯಗಳನ್ನು ನಿರ್ಮಿಸಲಾಗಿದೆ.

ಚೋಳರು

ಭಾರತದ ಪ್ರಾಚೀನ ರಾಜ್ಯಗಳಲ್ಲಿ ಚೋಳ ರಾಜ್ಯವೂ ಒಂದು. ದಕ್ಷಿಣದಲ್ಲಿ ಪಲ್ಲವರ ಪತನಾನಂತರ ಪ್ರಾಬಲ್ಯಕ್ಕೆ ಬಂದ ಚೋಳರು ಕ್ರಿ.ಶ.೯ನೇ ಶತಮಾನದಿಂದ ೧೩ನೇ ಶತಮಾನದವರೆಗೂ ಆಳಿದರು. ತಮ್ಮ ಈ ದೀರ್ಘ ಆಳ್ವಿಕೆಯಲ್ಲಿ ಅವರು ದಕ್ಷಿಣ ಭಾರತದ ಇತಿಹಾಸವನ್ನು ಶ್ರೀಮಂತಗೊಳಿಸಿದ್ದಾರೆ. ಚೋಳ ರಾಜ್ಯವು ಕೋರಮಂಡಲ ತೀರ ಸೇರಿಕೊಂಡಂತೆ ನೆಲ್ಲೂರಿನಿಂದ ಪುದು ಕೋಟೆಯವರೆಗೂ ಹಬ್ಬಿತ್ತು. ಅದು ಇಂದಿನ ತಮಿಳುನಾಡು ಮತ್ತು ಅದಕ್ಕೆ ಹೊಂದಿಕೊಂಡ ಕರ್ನಾಟಕದ ಅನೇಕ ಜಿಲ್ಲೆಗಳನ್ನು ಒಳಗೊಂಡಿದ್ದಿತು. ತುಂಗಭದ್ರಾನದಿಯ ದಕ್ಷಿಣಭೂಭಾಗ ಪೂರ್ತಿ ಅವರ ಅಧೀನದಲ್ಲಿದ್ದಿತೆನ್ನಬಹುದು.

ವಿಜಯಾಲ ಕ್ರಿ.ಶ.೮೫೦-೮೭೧ ಪಲ್ಲವರ ಆಳ್ವಿಕೆಯಲ್ಲಿ ಅಗೋಚರವಾಗೇ ಇದ್ದ ಚೋಳ ವಂಶೀಯರ ಅಧಿಕಾರವನ್ನು ಪುನರುಜ್ಜೀವನಗೊಳಿಸಿದನು. ವಿಜಯಾಲಯ ಇವನು ಸ್ವಲ್ಪ ಕಾಲ ಪಲ್ಲವರ

ಸಾಮಂತನಾಗಿದ್ದ, ಪಲ್ಲವರು ಪಾಂಡ್ಯರ ವಿರುದ್ಧ ಕದನದಲ್ಲಿ ಮಗ್ನರಾಗಿದ್ದಾಗ ವಿಜಯಾಲನು ಕ್ರಿ.ಶ.೮೫೦ರಲ್ಲಿ ತಂಜಾವೂರನ್ನು ಸ್ವಾಧೀನಪಡಿಸಿಕೊಂಡು ಸ್ವತಂತ್ರನಾಗಿ ಆಳಲಾರಂಭಿಸಿದ ತಂಜಾವೂರೇ ಚೋಳರ ರಾಜಧಾನಿಯಾಯಿತು.

ತಮ್ಮ ದೀರ್ಘಾವದಿಯ ಆಳ್ವಿಕೆ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಚೋಳರು ಅಪಾರವಾದ ಪ್ರೋತ್ಸಾಹವನ್ನು ನೀಡಿದ್ದರಿಂದ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಅದ್ಭುತ ಪ್ರಗತಿಯುಂಟಾಯಿತು. ಚೋಳರು ದೇವಾಲಯಗಳನ್ನು ನಿರ್ಮಿಸುವುದರಲ್ಲಿ ಪಲ್ಲವರ ಶೈಲಿಯನ್ನು ರೂಢಿಸಿಕೊಂಡಿದ್ದರಿಂದ ಅವರ ಕಾಲದ ಕಲೆಗೆ ಚೋಳರ ಕಲೆಯೆಂದೇ ಹೆಸರಾಗಿದೆ. ಚೋಳರ ರಾಜರು ಶಿವಭಕ್ತರಾದರಿಂದ ಶೈವ ಧರ್ಮ ಹೆಚ್ಚು ಪ್ರಚಾರಕ್ಕೆ ಬರುವುದರ ಮೂಲಕ ಅನೇಕ ಶೈವ ದೇವಾಲಯಗಳ ನಿರ್ಮಾಣ ಕೂಡ ಆಯಿತು. ಜೋಳರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳಲ್ಲಿ ನಂದಿಯ ಭೋಗನಂದೀಶ್ವರ ಮತ್ತು ಯೋಗನಂದೀಶ್ವರ ದೇವಾಲಯಗಳು ಸೇರಿವೆ. ನಂದಿಯಲ್ಲಿ ಇರುವ ನಂದಿಮಂಟಪಗಳು ಕೇವಲ ವಾಸ್ತುಶಿಲ್ಪವೇ ಅಲ್ಲದೆ ಶಿಲ್ಪಕಲೆಯೂ ಕೂಡ ಚೋಳರ ಕಾಲದಲ್ಲಿ ಪ್ರಗತಿ ಹೊಂದಿತು. ಅನೇಕ ಸುಂದರವಾದ ಶಿಲ್ಪಕಲಾ ಕೃತಿಗಳು ಚೋಳರ ಕಾಲದಲ್ಲಿ ಸೃಷ್ಟಿಯಾದವು. ಇದಲ್ಲದೆ ಭೋಗ ನಂದೀಶ್ವರ ದೇವಾಲಯದ ನವರಂಗದ ಎಡಭಾಗದಲ್ಲಿ ಧ್ಯಾನ ಮುದ್ರೆಯಲ್ಲಿರುವ ಚೋಳರಾಜನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಹಾಗೂ ಇವರ ಕಾಲಕ್ಕೆ ಸೇರಿದ ಕಂಬಗಳು ಸಹ ದೇವಾಲಯದಲ್ಲಿ ಕಂಡುಬಂದಿದೆ.

ಒಟ್ಟಾರೆ ಇದೆಲ್ಲದರ ಪರಿಣಾಮವಾಗಿ ನಂದಿಬೆಟ್ಟ ಪರಿಸರ ಚೋಳರ ನಿಯಂತ್ರಣದಲ್ಲಿ ಅಥವಾ ಅವರ ಆಳ್ವಿಕೆಗೆ ಒಳಪಟ್ಟಿತ್ತು ಎನ್ನುವುದನ್ನು ದೃಢಪಡಿಸುತ್ತದೆ.

ತಲಕಾಡಿನ ಗಂಗರು

ಕರ್ನಾಟಕದ ಇತಿಹಾಸದಲ್ಲಿ ಗಂಗರ ಆಳ್ವಿಕೆ ಚಿರಸ್ಮರಣೀಯವಾಗಿದೆ. ಗಂಗರು ಸುಮಾರು ೬ನೇ ಶತಮಾನಗಳ ಕಾಲ ಕರ್ನಾಟಕದ ಬಹುಭಾಗವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು. ನಂದಿದುರ್ಗ ಗಂಗರ ಕಾಲದಿಂದಲೂ ಪ್ರಸಿದ್ಧವಾಗಿದೆ. ಕೋಲಾರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿಂದ ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದ ಗಂಗರನ್ನು ಶಾಸನಗಳಲ್ಲಿ ನಂದಿಗಿರಿನಾಥರೆಂದೇ ಕರೆಯಲಾಗಿದೆ. ಆದರೆ ಆ ಕಾಲದ ಅವರ ಯಾವುದೇ ಶಾಸನ ಇಲ್ಲಿ ದೊರೆತಿಲ್ಲವೆನ್ನುವುದು ಆಶ್ಚರ್ಯಕರ ಸಂಗತಿ, ನಂದಿಗ್ರಾಮದಲ್ಲಿ ದೊರೆತಿರುವ ತಾಮ್ರಶಾಸನವೊಂದರಲ್ಲಿ ನಂದಿಗಿರಿಯಲ್ಲಿಯ ಮಠದ ಸ್ಥಾನಪತಿಯಾದ ಕಾಳಾಮುಖರ ಗುರು ಈಶ್ವರ ದಾಸ ದಾನವನ್ನು ಸ್ವೀಕರಿಸಿದನೆಂದು ಹೇಳಿದೆ. ಆದ್ದರಿಂದ ಇದು ಕಾಳಮುಖರಿಗೆ ಪವಿತ್ರವಾದ ಕ್ಷೇತ್ರವಾಗಿತ್ತೆಂದು ಹೇಳಬಹುದು. ಜೈನ ಮತಾವಲಂಬಿಗಳಾಗಿದ್ದ ಗಂಗರು ಇದನ್ನು ಆನಂದಗಿರಿ ಎಂದು ಕರೆಯುತ್ತಿದ್ದರೆಂದೂ ಅನಂತರ ವೃಷಭ ತೀರ್ಥಕರ ಹೆಸರಿನಿಂದ

ವೃಷಭಪರ್ವತವೆಂದು ಕರೆಯಲ್ಪಡುತ್ತಿತ್ತೆಂದು ಐತಿಹ್ಯಗಳಿವೆ. ಈ ಬೆಟ್ಟವು ಜೈನರಿಗೂ ಪೂಜ್ಯ ಸ್ಥಳವಾಗಿದ್ದಿತೆಂಬುದಕ್ಕೆ ಅನೇಕ ಕುರುಹುಗಳು ಇಲ್ಲಿ ಕಂಡುಬಂದಿವೆ. ಉದಾಹರಣೆಗೆ ನಂದಿಗಿರಿಯ ಪಕ್ಕದಲ್ಲಿ ಪೂರ್ವದಿಕ್ಕಿಗಿರುವ ಗೋಪಿನಾಥಗುಡ್ಡದ ಮೇಲೆ ಒಂದು ಪ್ರಾಚೀನ ಶಾಸನವಿದ್ದು, ಇದರ ಪ್ರಾರಂಭದ ಭಾಗವು ಗಂಗರ ದಾನ ಶಾಸನದಂತಿದೆ. ಇದರ ಪ್ರಾರ್ಥನಾ ಶ್ಲೋಕವು ಪ್ರಥಮ ತೀರ್ಥಕರ ವೃಷಭದೇವನಿಗೆ ಅನ್ವಯಿಸುತ್ತದೆ. ಗಂಗರ ಕಾಲದಲ್ಲಿ ಜೈನ ಧರ್ಮದ ಪ್ರಭಾವಕ್ಕೆ ಒಳಗಾಗಿದ್ದ ಈ ಭಾಗದಲ್ಲಿ ಅನಂತರವೂ ಹಲವಾರು ಜೈನ ಕವಿಗಳು ಇದ್ದರು. ಅದರಲ್ಲಿ ಕುಮುದೇಂದ ಮುನಿಯು ಗೋಪಿನಾಥ ಗುಡ್ಡದ ವಾಯುವ್ಯ ದಿಕ್ಕಿನಲ್ಲಿರುವ ಗುಹೆಯಲ್ಲಿ ಧ್ಯಾನಾಸಕ್ತನಾಗುತ್ತಿದ್ದ. ಇವನ ಹುಟ್ಟೂರು ನಂದಿಬಳಿಯ ಯಲುವಳ್ಳಿ ಎಂಬ ವಿಷಯ ಇಲ್ಲಿ ದೊರೆತಿರುವ ಶಾಸನದಿಂದ ತಿಳಿದುಬರುತ್ತದೆ. ದಕ್ಷಿಣದ ಪಾರ್ಶ್ವದ ದುರ್ಗಮ ಪ್ರದೇಶದಲ್ಲಿ ಪಾಳು ಬಿದ್ದಿರುವ ಬಾವಿಯೊಂದಿದ್ದು ಅದನ್ನು ಶ್ರವಣತೀರ್ಥವೆಂದು ಕರೆಯಲಾಗುತ್ತದೆ.

ಹೊಯ್ಸಳರು

ಕಲ್ಯಾಣಿ ಚಾಲುಕ್ಯರ ಪತನಾನಂತರ ಕರ್ನಾಟಕದಲ್ಲಿ ತಲೆ ಎತ್ತಿದವರು ಹೊಯ್ಸಳರು. ಇವರು ಸ್ವಲ್ಪ ಕಾಲ ಕಲ್ಯಾಣಿ ಚಾಲುಕ್ಯರ ಮಾಂಡಲೀಕರಾಗಿದ್ದು ಕ್ರಿ.ಶ.೧೧ನೇ ಶತಮಾನದ ಅಂತ್ಯಭಾಗದಲ್ಲಿ ಪ್ರಾಬಲ್ಯಕ್ಕೆ ಬಂದರು. ಸುಮಾರು ೩ ಶತಮಾನಗಳಿಗೂ ದೀರ್ಘಕಾಲ ಕರ್ನಾಟಕದ ಬಹುಭಾಗವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು. ಸುಭದ್ರ ಸರ್ಕಾರ ವ್ಯವಸ್ಥೆಗೊಳಿಸಿದ್ದ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಒಂದು ಹೊಸ ಅಧ್ಯಾಯವೊಂದನ್ನು ಆರಂಭಿಸಿದರು. ದ್ವಾರಸಮುದ್ರ ಇವರ ರಾಜಧಾನಿಯಾಗಿತ್ತು.

ನಂದಿಬೆಟ್ಟ ಪ್ರದೇಶವು ಇವರ ನಿಯಂತ್ರಣಕ್ಕೆ ಒಳಪಟ್ಟಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿ ಇವರು ನಿರ್ಮಿಸಿರುವ ಉಮಾಮಹೇಶ್ವರ ದೇವಾಲಯ. ಇದು ಬೆಟ್ಟದ ತಪ್ಪಲಿನಲ್ಲಿರುವ ಭೋಗ ನಂದೀಶ್ವರ ಮತ್ತು ಅರುಣಾಚಲೇಶ್ವರ ದೇವಾಲಯದ ಮಧ್ಯದಲ್ಲಿ ಕಂಡುಬರುತ್ತದೆ. ಇದರ ಮುಂಭಾಗದಲ್ಲಿ ನಿರ್ಮಿಸಲಾಗಿರುವ ಕಲ್ಯಾಣ ಮಂಟಪ ಕಪ್ಪು ಬಳಪದ ಕಲ್ಲಿನಿಂದ ನಿರ್ಮಾಣವಾಗಿದ್ದು, ಇದರ ಕಂಬಗಳಲ್ಲಿ ಮೂಡಿರುವ ಕಲಾಶೈಲಿ ಮನೋಜ್ಞವಾಗಿದ್ದು, ಇದರ ಕಾಲದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹಿಡಿದ ಕೈಗನ್ನಡಿಯಂತಿದೆ.

ಹೊಯ್ಸಳರು ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಅದ್ವಿತೀಯ ಸಾಧನೆ ಮಾಡಿದ್ದಾರೆ. ಅವರು ಜಗದ್ವಿಖ್ಯಾತರಾಗಲು ಕಾರಣವಾದುದು. ಅವರ ವಿಶಿಷ್ಟ ನಮೂನೆಯ ವಾಸ್ತುಶಿಲ್ಪ. ಹೊಯ್ಸಳರು ರೂಪಿಸಿದ ವೈವಿಧ್ಯಮಯ ವಾಸ್ತುಶಿಲ್ಪ ವೈಖರಿಯನ್ನು ಹೊಯ್ಸಳ ಶೈಲಿ ಅಥವಾ ವೇಸರಶೈಲಿ

ಎಂಬುದಾಗಿ ಕರೆಯಲಾಗಿದೆ. ಇದು ಚಾಲುಕ್ಯರ ಕಾಲದಲ್ಲಿ ಹುಟ್ಟಿ ಹೊಯ್ಸಳರ ಕಾಲದಲ್ಲಿ ಔನತ್ಯವನ್ನು ಮುಟ್ಟಿತು.

ವಿಜಯನಗರ ಕಾಲ

ವಿಜಯನಗರ ಸಾಮ್ರಾಜ್ಯವು ಕ್ರಿ.ಶ.೧೩೩೬ ರಿಂದ ೧೫೬೫ರವರೆಗೆ ಅಂದರೆ ಸುಮಾರು ೨೨೯ ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಹೊಯ್ಸಳರ ನಂತರ ಅಧಿಕಾರಕ್ಕೆ ಬಂದರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾದುದಾಗಿದೆ. ಇದು ರಾಜಕೀಯ ಅಸ್ಥಿರತೆಯನ್ನು ತೊಡೆದು ಹಾಕಿದುದಲ್ಲದೆ ಮುಸ್ಲಿಮರ ದಾಳಿಯನ್ನು ಸತತವಾಗಿ ೩ ಶತಮಾನಗಳಿಗೂ ಹೆಚ್ಚು ಕಾಲ ತಡೆಹಿಡಿಯಿತು. ೧೪ನೇ ಶತಮಾನದ ಆದಿ ಭಾಗದಲ್ಲಿ ಕಾಕತೀಯರು, ಸೇವುಣರು, ಹೊಯ್ಸಳರು ತಮ್ಮನ್ನು ತಾವು ರಕ್ಷಿಸಿಕೊಳ್ಳದಾಗದ ಪರಿಸ್ಥಿತಿಯಲ್ಲಿ ಉದಯವಾದ ವಿಜಯನಗರ ಭಾರತದ ಇತಿಹಾಸದಲ್ಲೇ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಟ್ಟಕಡೆಯ ಹಿಂದೂ ಸಾಮ್ರಾಜ್ಯ. ಕ್ರಿ.ಶ.೧೩೩೬ರಲ್ಲಿ ಅಸ್ತಿತ್ವಕ್ಕೆ ಬಂದ ಈ ಸಾಮ್ರಾಜ್ಯ ಹಂಪಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ದಶಕಗಳ ಕಾಲ ಆಳ್ವಿಕೆ ನಡೆಸಿದರು.

ವಿಜಯನಗರ ಕಾಲದ ಪ್ರತಿಷ್ಠಿತ ಅರಸರಲ್ಲಿ ಒಬ್ಬನಾದ ಕೃಷ್ಣದೇವರಾಯನ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿ ಬೆಟ್ಟದ ಮೇಲೆ ನಿರ್ಮಿಸಲಾಗಿರುವ ಯೋಗನಂದೀಶ್ವರ ದೇವಾಲಯದ ಗರ್ಭಗುಡಿಯ ಎರಡೂ ಪಕ್ಕಗಳಲ್ಲಿಯೂ ೫ ಅಡಿ ಎತ್ತರದ ಲೋಹದ ದ್ವಾರಪಾಲಕ ವಿಗ್ರಹಗಳು ಇವೆ. ಇವು ವಿಜಯನಗರದ ಕೃಷ್ಣದೇವರಾಯನ ಕಾಣಿಕೆ. ಹಾಗೆಯೇ ಬೆಟ್ಟದ ತಪ್ಪಲಿಗೆ ಹೊಂದಿಕೊಂಡಂತೆ ಇರುವ ಭೋಗನಂದೀಶ್ವರ ದೇವಾಲಯದ ಕಂಬಗಳು, ವಸಂತಮಂಟಪ ಮತ್ತು ವಿಜಯನಗರದ ಕಲೆ ಮತ್ತು ವಾಸ್ತುಶಿಲ್ಪದ ಲಕ್ಷಣಗಳಲ್ಲಿ ಒಂದಾದ ಅಮ್ಮನವರ ಗುಡಿಗಳ ನಿರ್ಮಾಣ ಕಾರ್ಯವನ್ನು ಇಲ್ಲಿ ಕಾಣಬಹುದು. ಇಲ್ಲಿ ರಾಯಗೋಪುರವಿದ್ದು ಅದು ಶಿಥಿಲಾವಸ್ಥೆಯಲ್ಲಿದೆ. ಭೋಗ ನಂದೀಶ್ವರ ದೇವಾಲಯದ ಸಂಪೂರ್ಣ ನಿರ್ಮಾಣ ಕಾರ್ಯ ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ಲಕ್ಷಣಗಳನ್ನು ಹೋಲುತ್ತದೆ.

ಪಾಳೆಗಾರರು

ಆಡಳಿತ ಹಿತದೃಷ್ಟಿಯಿಂದ ವಿಶಾಲವಾದ ಸಾಮ್ರಾಜ್ಯದ ನಿರ್ವಹಣೆಗಾಗಿ ಹಲವಾರು ವಿಭಾಗಗಳನ್ನಾಗಿ ಭಾಗ ಮಾಡಿ ಅವುಗಳಿಗೆ ಅಧಿಕಾರಿಗಳನ್ನು ನೇಮಕ ಮಾಡುವ ಮುಖಾಂತರ ಆಡಳಿತವನ್ನು ನಡೆಸಲಾಗುತ್ತಿತ್ತು. ಕಾಲಾನಂತರ ವಿಭಾಗಾಧಿಕಾರಿಗಳಲ್ಲಿ ಬದಲಾವಣೆಗಳುಂಟಾಗಿ ಪ್ರಾಂತ್ಯಾಧಿಕಾರಿಗಳು, ದಳವಾಯಿಗಳು, ಸಾಮಂತರು, ಪಾಳೆಯಗಾರರು ಎಂಬ ವರ್ಗಗಳು ಆಡಳಿತದಲ್ಲಿ ಪ್ರಮುಖ ಸ್ಥಾನವನ್ನು

ಪಡೆದುಕೊಂಡರು. ಹೀಗೆ ಪ್ರಾರಂಭವಾದುದ್ದೇ ಪಾಳೆಯಗಾರರು. ೧೫ ಮತ್ತು ೧೬ನೇ ಶತಮಾನದಲ್ಲಿ ವಿಜಯನಗರದ ಅರಸರು ಈ ಪಾಳೆಯಗಾರಿಕೆಯನ್ನು ಪ್ರಾರಂಭಿಸಿದರು.

'ಪಾಳೆಯಗಾರ' ಎಂಬ ಪದವನ್ನು ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ರೀತಿಯಲ್ಲ ಸಂಬೋಧಿಸಲಾಗುತ್ತದೆ. ಕನ್ನಡದ ಪಾಳೆಯಗಾರರೆಂಬ ಹೆಸರಿನ ಇವರಿಗೆ ತೆಲುಗಿನಲ್ಲಿ 'ಪಾಳೆಯಗಾಡು' ತಮಿಳಿನಲ್ಲಿ 'ಪಾಲ್ಯೆಕ್ಕಾರನ್' ಮರಾಠಿಯಲ್ಲಿ 'ಪಾಳೆಯಗಾರ' ಎಂದು ಕರೆಯಲಾಗಿದೆ. ಇವರಿಗೆ ಅಧೀನವಾಗಿದ್ದ ಭೂಪ್ರದೇಶದಕ್ಕೆ 'ಪುಲ್ಲಂ' ಎಂದು ಹೆಸರಾಗಿದ್ದ ಕಾರಣ ಇವರಿಗೆ ಪಾಳೆಗಾರ ಎಂದು ಕರೆಯಲಾಗಿದೆ. ಇವರು ಅರಸರಿಗೆ ಸಹಾಯಕರಾಗಿದ್ದರು. ಪಾಳೆಯ ಎಂಬ ಪದ ದಂಡು, ಸೈನ್ಯ, ಸೇನಾವಿಭಾಗ, ಶಿಬಿರ ಎಂಬ ವಿವಿಧ ಅರ್ಥವನ್ನು ಸೂಚಿಸುತ್ತದೆ. ಇವುಗಳ ಮುಖ್ಯಸ್ಥರೇ ಪಾಳೇಗಾರರು ಇವರು ಚಿಕ್ಕ ಚಿಕ್ಕ ಪ್ರಾಂತ್ಯಗಳಲ್ಲಿ ಪ್ರಬಲ ಅರಸರಂತೆ ಆಳ್ವಿಕೆ ಮಾಡಿಕೊಂಡು ಜನರಿಂದ ಕಂದಾಯ ಕಾಣಿಕೆ ಮುಂತಾದವುಗಳನ್ನು ತೆಗೆದುಕೊಳ್ಳುತ್ತಿದ್ದರು ಹಾಗೂ ದುಷ್ಟರನ್ನು ನಿಗ್ರಹಿಸುತ್ತಾ ಸಮುದಾಯವನ್ನು ಕಾಪಾಡುತ್ತಿದ್ದ ಮುಖಂಡರನ್ನು ಪಾಳೆಯಗಾರರು ಎಂಬ ಹೆಸರಿನಿಂದ ಕರೆಯುತ್ತಿದ್ದರು.

ಚಿಕ್ಕಬಳ್ಳಾಪುರದ ಪಾಳೆಯಗಾರರು

ಚಿಕ್ಕಬಳ್ಳಾಪುರದ ಪಾಳೆಯಗಾರರನ್ನು ಕುರಿತ ಸ್ಥಳೀಯ ಐತಿಹ್ಯದ ಪ್ರಕಾರ ಅವತಿಯನ್ನು ಆಳುತ್ತಿದ್ದ ಮಲ್ಲೇಗೌಡನ ಮಗ ಮರಿಗೌಡ ಒಂದು ದಿನ ಕೋಡಿಮಂಚೇನಹಳ್ಳಿ ಕಾಡಿನಲ್ಲಿ ಬೇಟೆಯಾಡುತ್ತಿದ್ದನಂತೆ. ಬೇಟೆ ನಾಯಿಗಳ ಮುಂದೆ ಮೊಲವೊಂದು ಯಾವುದೇ ಅಂಜಿಕೆ ಇಲ್ಲದೆ ನಿಂತಿತ್ತಂತೆ. ಇದನ್ನು ಕಂಡು ಆಶ್ಚರ್ಯಗೊಂಡ ರಾಜ ಆ ಸ್ಥಳದ ಜನರ ದಿಟ್ಟತನವೇ ಇದಕ್ಕೆ ಕಾರಣ ಎಂದು ತಿಳಿದು. ವಿಜಯನಗರ ರಾಜನಿಂದ ಅನುಮತಿಯನ್ನು ಪಡೆದುಕೊಂಡು ಕೋಟೆಯನ್ನು ನಿರ್ಮಿಸಿ ಪಟ್ಟಣವೊಂದನ್ನು ಕುಟ್ಟುತ್ತಾನೆ. ಇದೇ ಮುಂದೆ ಚಿಕ್ಕಬಳ್ಳಾಪುರವಾಯಿತು ಎಂದು ಹೇಳಲಾಗುತ್ತದೆ. ಅದರಂತೆ ಚಿಕ್ಕಬಳ್ಳಾಪುರವು ಮರಿಗೌಡ ಮತ್ತವನ ವಂಶಸ್ಥರ ಅಧೀನದಲ್ಲಿ ಬಹಳ ಕಾಲ ಉಳಿಯಿತು. ಈ ಮನೆತನದವರು ಶಿಡ್ಲಘಟ್ಟವನ್ನು ಖರೀದಿಸುವ ಮೂಲಕ ತಮ್ಮ ಪಾಳೆಯಪಟ್ಟಿನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಕ್ರಮೇಣ ನಂದಿದುರ್ಗ, ಕಲವರದುರ್ಗ, ಗುಡಿಬಂಡೆ ಹಾಗೂ ಇಟ್ಕಲ್ ದುರ್ಗಗಳಲ್ಲಿ ಕೋಟೆಯನ್ನು ನಿರ್ಮಿಸುವ ಮೂಲಕ ತಮ್ಮ ಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಂಡರು.

ಆವತಿ ಪಾಳೆಯಗಾರರು(ಪ್ರಭುಗಳು)

೧೪ನೇ ಶತಮಾನದ ಅಂತ್ಯಭಾಗದಲ್ಲಿ ಕಂಚಿಬಳಿಯ ಆಲೂರು ಗ್ರಾಮದವರಾದ ಇವರು ಕೋಲಾರ ಜಿಲ್ಲೆಯ ನಂದಿದುರ್ಗದ ಪೂರ್ವಕ್ಕಿರುವ ರಾಮಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಬಂದು ತಂಗಿದರು. ಕ್ರಮೇಣ ಈ ಪ್ರದೇಶ 'ಆವತಿ' ಎಂದೇ ಹೆಸರು ಪಡೆಯಿತು. ತೆಲುಗು ಮೂಲದವರಾದ

ಇವರನ್ನು 'ಭಂಡಿಕಾಪಲು' ಎಂದು ಕರೆಯಲಾಗುತ್ತಿದ್ದು ಇದಕ್ಕೆ ಅವರು ಹೊಂದಿದ್ದ ಎತ್ತಿನ ಬಂಡಿ ಕಾರಣವಾಗಿದೆ.

ಆವತಿ ವಂಶಜರಿಗೆ ಸೇರಿದ ಹತ್ತು-ಹನ್ನೆರಡು ಶಾಸನಗಳು ಜಿಲ್ಲೆಯ ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿ ಹಾಗೂ ಶಿಡ್ಲಘಟ್ಟ ತಾಲೂಕುಗಳಲ್ಲಿ ಲಭಿಸಿವೆ. ಅವುಗಳ ಕಾಲ ೧೪೨೮ ರಿಂದ ೧೭೯೨ ರವರೆಗೂ ವ್ಯಾಪಿಸಿದೆ. ಕುಡುವತ್ತಿಯ ೧೪೩೮ರ ತಾಮ್ರಶಾಸನದಲ್ಲಿ ಇವರು ಭೈರವ ತಮ್ಮ ಕುಲದೈವ ಮನೆ ದೇವರು ಕರಗದಮ್ಮನೆಂದು ಹೇಳಿಕೊಂಡಿದ್ದಾರೆ. ಇದೇ ಕುಡುವತ್ತಿ ಗ್ರಾಮವನ್ನು ಭೈರವ ಭೂಪಾಲನು ನಂದಿಯ ನಂದೀಶ್ವರ ಗುರುಗಳಿಗೆ ದತ್ತಿಬಿಟ್ಟ ಅಂಶ ಶಾಸನದಲ್ಲಿ ಉಕ್ತವಾಗಿದೆ. ನಂದಿಗ್ರಾಮದ ೧೪೭೪ ರ ಶಾಸನದಲ್ಲಿ ಮಲೆಯಬೈರೇಗೌಡ, ಮಡದಿ ಭೈಯಕ್ಕ ಹಾಗೂ ಅವರ ಮಕ್ಕಳೀರ್ವರ ಹೆಸರಿದೆ. ವೆಂಕಟೇಶ್ವರ ದೇವರಿಗೆ ದತ್ತಿಬಿಟ್ಟಿರುವ ಅಂಶ ನೀಡಲ್ಪಟ್ಟಿರುವ ನಂದಿಗ್ರಾಮದ ಶಾಸನದಲ್ಲಿ ದಾಖಲಾಗಿದೆ.

ಹೈದರಾಲಿ ಮತ್ತು ಟಿಪ್ಪು ಸುಲ್ತಾನ್

೧೭೭೦ರಲ್ಲಿ ನಂದಿದುರ್ಗವನ್ನು ಮರಾಠರಿಂದ ಇವರು ತಮ್ಮ ವಶಕ್ಕೆ ತೆಗೆದುಕೊಂಡರು. ಕೋಟೆ ಕೊತ್ತಲುಗಳನ್ನು ಬಳಪಡಿಸಿ ಅದನ್ನು ಅಭೇಧ್ಯವಾದ ಗಿರಿದುರ್ಗವನ್ನಾಗಿ ಮಾಡಿದರು. ಇಂದು ಅಲ್ಲಿ ಕಾಣುವ ಕೋಟೆಯ ಅವಶೇಷಗಳು ಬಹುಮಟ್ಟಿಗೆ ಟಿಪ್ಪುವಿನ ಕಾಲದವು. ೧೭ನೇ ಶತಮಾನದ ಶಾಸನವೊಂದರಿಂದ ಇಲ್ಲಿನ ಅತ್ಯುನ್ನತವೂ ಅಭೇಧ್ಯವೂ ಆದನಂದಿಗಿರಿಯನ್ನು ಚಿಕ್ಕಬಳ್ಳಾಪುರದ ಪಾಳೆಯಗಾರರು, ಕೋಟೆ ಕೊತ್ತಲುಗಳನ್ನು ನಿರ್ಮಿಸುವ ಮೂಲಕ ಅದನ್ನೊಂದು ಗಿರಿದುರ್ಗವನ್ನಾಗಿ ಮಾರ್ಪಡಿಸಿದರು ಎಂದು ತಿಳಿದುಬರುತ್ತದೆ. ಈ ವಂಶದ ಚಿಕ್ಕ ಭೈರೇಗೌಡನ ಮಗ ಮರಿಗೌಡ ಇಲ್ಲ ಕೋಟೆಯನ್ನು ಕಟ್ಟಿಸಿದ. ಅನಂತರ ಮರಾಠರ ವಶವಾದ ನಂದಿದುರ್ಗವನ್ನು ಶಿವಾಜಿಯ ಮಗ ಸಾಂಬಾಜಿಯ ಆಳ್ವಿಕೆಯಲ್ಲಿ ಬಾಲಾಜಿಕೃಷ್ಣ ಎಂಬ ಸರದಾರನು ನೋಡಿಕೊಳ್ಳುತ್ತಿದ್ದನು. ಯೋಗನಂದೀಶ್ವರ ದೇವಾಲಯದಲ್ಲಿ ಸಾಂಬಾಜಿಯ ಶಾಸನವೊಂದಿದೆ. ಪಕ್ಕದ ಬೆಟ್ಟಗಳೊಡನೆ ಹೊಂದಿಕೊಂಡಂತಿರುವ ಪಶ್ಚಿಮಾ ಭಾಗವನ್ನುಳಿದು ಇತರೆಡೆ ಬಹು ಕಡಿದಾದ ಪಾರ್ಶ್ವಗಳಿರುವ ನಂದಿಬೆಟ್ಟವು ನೆಲದಿಂದ ಮೇಲೆದ್ದ ಬೃಹತ್ ಬಂಡೆಯಂತೆ ಕಾಣುತ್ತದೆ. ಬೆಟ್ಟದ ನೆತ್ತಿಯಿಂದ ನೇರವಾಗಿ ಆಳಕ್ಕಿಳಿಯುವ ನೈಋತ್ಯ ಪಾರ್ಶ್ವವನ್ನು 'ಟಿಪ್ಪುಡ್ರಾಪ್' ಎಂದು ಕರೆಯುತ್ತಾರೆ. ಯುದ್ಧದಲ್ಲಿ ಸೆರೆ ಸಿಕ್ಕ ಶತ್ರು ಸೈನಿಕರನ್ನು ಇಲ್ಲಿಂದ ಕೆಳಗೆ ತಳ್ಳುತ್ತಿದ್ದರಂತೆ ಉತ್ತರ ಪಾರ್ಶ್ವದಲ್ಲಿರುವ ಇದೇ ರೀತಿಯ ಅಂದರೆ ಇದಕ್ಕಿಂತ ಚಿಕ್ಕದಾದ ಕಮರಿಗೆ 'ಹೈದರ್ ಡ್ರಾಪ್' ಎಂದು ಹೆಸರಿದೆ.

ಬ್ರಿಟಿಷರು

ಅತ್ಯಂತ ದುರ್ಗಮ ಮತ್ತು ಅಭೇದ್ಯವಾಗಿದ್ದ ನಂದಿದುರ್ಗವನ್ನು ಬ್ರಿಟಿಷರು ೧೭೯೧ರಲ್ಲಿ ಲಾರ್ಡ್ ಕಾರ್ನ್‌ವಾಲೀಸನ ನೇತೃತ್ವದಲ್ಲಿ ಆಕ್ರಮಿಸಿ ವಶಪಡಿಸಿಕೊಂಡರು. ಕೋಟೆಯ ಒಳಗಡೆ ಕುದುರೆ ಲಾಯಗಳು, ಮದ್ದುಗುಂಡುಗಳ ಉಗ್ರಾಣಗಳಿವೆ. ೧೭೯೯ ರಿಂದ ೧೯೦೮ರವರೆಗೆ ಬೆಟ್ಟದ ಬುಡದಲ್ಲಿ ಬ್ರಿಟಿಷ್ ಸೇನೆ ನೆಲೆಸಿದ್ದಾಗಿನಿಂದ ಬೇಸಗೆಯ ದಿನಗಳಲ್ಲಿ ಬೆಂಗಳೂರಿನಲ್ಲಿರುತ್ತಿದ್ದ ಬ್ರಿಟಿಷ್ ಅಧಿಕಾರಿಗಳು ಬೆಟ್ಟದ ಮೇಲೆ ತಂಗುತ್ತಿದ್ದರು. ಈಗಿನ ಅಮೃತ ಸರೋವರದ ಬಳಿಯ ಉದ್ಯಾನವನ್ನು ಕರ್ನಲ್ ಕ್ಯುಪೇಜ್ ಎಂಬ ಬ್ರಿಟಿಷ್ ಅಧಿಕಾರಿ ನಿರ್ಮಿಸಿದ್ದನು. ಅನಂತರ ಇತರ ಬ್ರಿಟಿಷ್ ಅಧಿಕಾರಿಗಳಾದ ಕರ್ನಲ್ ಹಿಲ್(ಗ್ಲೆನ್ ಟಿಲ್ಟ್), ಮಾರ್ಕ್‌ಕಬ್ಬನ್ (ಕಬ್ಬನ್ ಹೌಸ್), ಕ್ಯಾಪ್ಟನ್ ಕನಿಂಗ್ ಹ್ಯಾಂ (ಓಕ್ ಲ್ಯಾಂಡ್) ತಮ್ಮ ವಾಸದ ಮನೆಗಳನ್ನು ನಿರ್ಮಿಸಿದರು.

ಕನ್ನಿಂಗ್ಯಾಮ್‌ನ 'ಓಕ್ ಲ್ಯಾಂಡ್ಸ್ 'ನಲ್ಲಿ ೧೯೩೬ರಲ್ಲಿ ಮಹಾತ್ಮಗಾಂಧಿಯವರು ಕೆಲವಾರಗಳ ಕಾಲ ವಿಶ್ರಾಂತಿ ಪಡೆದುದರ ನೆನಪಿಗಾಗಿ ಅದನ್ನೀಗ 'ಗಾಂಧಿ ನಿಲಯ' ಎಮದು ಕರೆಯಲಾಗುತ್ತದೆ. ಕರ್ನಾಟಕಕ್ಕೆ ಬೇಟಿಯತ್ತ ಅನೇಕ ಗಣ್ಯವ್ಯಕ್ತಿಗಳಲ್ಲಿ ಬ್ರಿಟಿಷ್ ರಾಣಿ ಎಲಿಜಬೆತ್, ಎಡಿನ್ ಬರೋದ ರಾಜಕುಮಾರ ಫಿಲಿಪ್, ಇಂದಿರಾಗಾಂಧಿ, ರಾಜೀವ್ ಗಾಂಧಿ ಮೊದಲಾದವರು ಇಲ್ಲಿ ವಿಶ್ರಾಂತಿಪಡೆದು ಹೋಗಿದ್ದಾರೆ. ಬೆಂಗಳೂರಿನಲ್ಲಿ ಸಾರ್ಕ್ ಸಮ್ಮೇಳನ ನಡೆದಾಗ, ಇಡೀ ಸಾರ್ಕ್ ರಾಷ್ಟ್ರಗಳ ಪ್ರಮುಖರೆಲ್ಲರೂ ಇಲ್ಲಿಗೆ ಬೇಟಿ ನೀಡುತ್ತಿದ್ದರು.

ಒಟ್ಟಾರೆ ಹೇಳುವುದಾದರೆ ಬ್ರಿಟಿಷರ ನಿಯಂತ್ರಣಕ್ಕೆ ಒಳಗಾದ ಮೇಲೆ ನಂದಿಬೆಟ್ಟ ಸಾಕಷ್ಟು ಸುಧಾರಣೆಗಳನ್ನು ಕಂಡಿತು. ಹಾಗೂ ಬದಲಾವಣೆಗಳನ್ನು ಬ್ರಿಟಿಷ ಆಡಳಿತದಿಂದ ಕಾಣಬಹುದಾಗಿದೆ.

ಅಡಿಟಿಪ್ಪಣಿಗಳು

೧. ರಮೇಶ್ ನಾಯಕ್ (ಸಂ), **ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ,** ೨೦೦೭

೨. ಡಾ.ಎಂ.ಎಸ್ .ಕೃಷ್ಣಮೂರ್ತಿ, ನಂದಿಯ **ಭೋಗನಂದೀಶ್ವರ - ಅರುಣಾಚಲೇಶ್ವರ ದೇವಾಲಯಗಳು ಒಂದು ಮರುಚಿಂತನೆ,** ೨೦೦೪, ಪು.೯೦

೩. ಸೂರ್ಯನಾಥ್ ಕಾಮತ್, ಕೃಷ್ಣಮೂರ್ತಿ ಪಿ.ವಿ.(ಸಂ), **ಇತಿಹಾಸ ದರ್ಶನ, ಸಂಪುಟ** ೧೧, ೧೯೯೯, ಪು.೧

೪. **ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ,** ಪು.೯೦೩

೫. ರೈಸ್ ಬಿ.ಎಲ್., **ಮೈಸೂರು ಗೆಜೆಟಿಯರ್ ಸಂಪುಟ II,** ೧೮೯೭, ಪು.೧೯೫

೬. ಕಾಮತ್ ಎಸ್.ಯು.(ಸಂ), ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-೩, ೧೯೮೬, ಪು.೫೩೬

೭. ಕನ್ನಡ ವಿಷಯ ವಿಶ್ವಕೋಶ, ಪು.೯೦೯

೮. ಕೃಷ್ಣರಾವ್ ಎಂ.ವಿ., ಕೇಶಭಟ್ಟ ಎಂ., ಕರ್ನಾಟಕ ಇತಿಹಾಸ ದರ್ಶನ, ೧೯೭೦, ಪು.೪೫೭

೯. ಚಿತ್ತರಂಜನ್ ಹೆಚ್.(ಸಂ), ಕೋಲಾರ ಜಿಲ್ಲಾ ಗೆಜೆಟಿಯರ್, ಪು.೪೪

೧೦. ಚಂದ್ರಶೇಖರಯ್ಯ ಬಿ.ಎಂ., ಕರ್ನಾಟದ ಸಾಂಸ್ಕೃತಿಕ ಇತಿಹಾಸ ಪರಂಪರೆ

೧೧. ಗೋಪಾಲ್ ಆರ್.(ಸಂ), ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.೯೩

೧೨. ವಸು ಎಂ.ವಿ., ಪೂರ್ವೋಕ್ತ, ಪು.೩೩

೧೩. ಶಿವತಾರಕ್ ಕೆ.ಬಿ., ಪೂರ್ವೋಕ್ತ, ಪು.೪೧೩

೧೪. ಅದೇ, ಪು.೪೦೧-೪೧೫

೧೫. ಹಯವದನ್‌ರಾವ್ ಸಿ., ಮೈಸೂರ್ ಗೆಜೆಟಿಯರ್, ಪು.೫೩೨

೧೬. ಅದೇ, ಪು.೫೩೨

೧೭. ಕನ್ನಡ ವಿಷಯ ವಿಶ್ವಕೋಶ, ಪು.೯೦೨

೧೮. ಅರಣ್ಯ ಇಲಾಖೆಯ ವರದಿ, ಕೋಲಾರ, ೨೦೦೧

೧೯. ಕೃಷಿ ಇಲಾಖೆಯ ವರದಿ, ಚಿಕ್ಕಬಳ್ಳಾಪುರ, ೨೦೦೫

ಅಧ್ಯಾಯ ೪

ವಾಸ್ತುಶಿಲ್ಪ

೪

ವಾಸ್ತುಶಿಲ್ಪ

ಕಲೆ ಎನ್ನುವುದು ರಚನಾತ್ಮಕ ಕ್ರಿಯೆ. ಕಲೆಯು ಮಾನವನ ವಿಕಾಸದ ಜೊತೆಗೆ ಬೆಳೆದು ಬಂದಿರುವಂತದ್ದು, ಆದಿಯಿಂದಲೂ ಬಂದಿರುವ ಸಂಪ್ರದಾಯಗಳು ಪ್ರಾಚೀನ ಮಾನವನನ್ನು ತಿಳಿದುಕೊಳ್ಳುವ ಮಾರ್ಗಗಳಾಗಿವೆ. ಕಲೆಯು ಯಾವಾಗಲೂ ಸಮಕಾಲೀನ ಪ್ರಸ್ತುತತೆಯನ್ನು ತಿಳಿಸುತ್ತದೆ. ಮಾನವನು ವಾಸಿಸಲು ಆಯ್ದುಕೊಂಡ ಗುಹೆಗಳೇ ಕಲೆಯ ಮೂಲ ನೆಲೆಗಳಾದವು. ಗುಹೆಗಳ ವಿಶಾಲವಾದ ಭಿತ್ತಿಯ ಮೇಲೆ ತಾನು ನಿತ್ಯ ಕಂಡುಂಡ ಅನುಭವಗಳನ್ನು ಚಿತ್ರಿಸಿದನು. ತನಗೆ ಇಷ್ಟವಾದ ಪ್ರಾಣಿ, ಪಕ್ಷಿ ಹಾಗೂ ಇತರ ಸಂಕೇತಗಳು ಚಿತ್ರಗಳಾಗಿ ಮೂಡಿಬಂದವು. ಬಹುತೇಕ ಚಿತ್ರಗಳು ಗೀರುಗಳ ಮೂಲಕ ಸೃಷ್ಟಿಯಾದಂತವುಗಳು ಗುಹೆಗಳ ಮುಂಭಾಗವನ್ನು ಮನೆಯಂತೆ ನಿರ್ಮಿಸಿ ವಿಸ್ತರಿಸಿದನು. ಮಾನವ ತನ್ನ ಬಹುಕೋಟಿ ವರ್ಷಗಳ ಅಲೆಮಾರಿ ಜೀವನಕ್ಕೆ ವಿದಾಯ ಹೇಳಿದನೆಂದು ಹೇಳಬಹುದು. ಮಾನವನ ಬದುಕಿನಲ್ಲಿ ಪ್ರಕೃತಿಯು ಮಹತ್ತರ ಪಾತ್ರವಹಿಸುವುದನ್ನು ಗುರುತಿಸಬಹುದು. ಮಾನವನಿಗೆ ಪ್ರಕೃತಿಯ ಬಗ್ಗೆ ಗೌರವ, ಭಯ, ಭಕ್ತಿಗಳು ಮೂಡಿದವು. ಈ ದೃಷ್ಟಿಯಿಂದ ಪ್ರಕೃತಿಯ ಎಲ್ಲ ವಸ್ತುಗಳು ಅವನಿಗೆ ಪೂಜಾರ್ಹವಾದವು. ಈ ಕಾರಣದಿಂದಲೇ ಗಿಡ, ಮರ, ನದಿ ಇತ್ಯಾದಿಗಳು. ಅವನಿಗೆ ಪೂಜನೀಯವಾದುದಲ್ಲದೆ, ಪೂಜಾಸ್ಥಾನವೂ ಆದವು. ಈ ಎಲ್ಲ ಸೃಷ್ಟಿಯ ಹಿನ್ನೆಲೆಯಾಗಿ ನಿಂತು ತನ್ನನ್ನು ನಡೆಸುತ್ತಿರುವ ಯಾವುದೋ ಒಂದು ಅನಂತಶಕ್ತಿ ಇದೆ ಎಂಬ ಅರಿವು ಉಂಟಾದಾಗ, ಆ ಶಕ್ತಿಗೆ ಒಂದು ರೂಪ ಕೊಡಲು ಪ್ರಯತ್ನಿಸಿದ. ಹೀಗೆ ನೀಡಿದ ಆ ಒಂದು ರೂಪಕ್ಕೆ ಅಥವಾ ಸಂಕೇತಕ್ಕೆ ರಕ್ಷಣಾರ್ಥವಾಗಿ ಪ್ರತ್ಯೇಕ ಆಲಯವನ್ನು ಕಟ್ಟಲು ಆರಂಭಿಸಿದ. ಇದು ದೇವಾಲಯ ರಚನೆಗೆ ನಾಂದಿಯಾಯಿತು.

ಮಾನವನು ತನಗಾಗಿ ಕಟ್ಟಿಕೊಂಡ ಮನೆ 'ಗೃಹವಾಸ್ತುಶಿಲ್ಪ' ಎನಿಸಿದರೆ, ತನ್ನ ದೇವರಿಗಾಗಿ ಕಟ್ಟಿದ್ದು 'ಧಾರ್ಮಿಕ ವಾಸ್ತುಶಿಲ್ಪ' ಅಥವಾ 'ದೇವಾಲಯ ವಾಸ್ತುಶಿಲ್ಪ' ಎನಿಸಿತು. ಗೃಹವಾಸ್ತುಶಿಲ್ಪ ರಚನೆಯು ದೇವಾಲಯ ವಾಸ್ತುಶಿಲ್ಪ 'ರಚನೆ'ಯ ಮೇಲೆ ಪ್ರಭಾವ ಬೀರಿತು. ಸಾಮಾನ್ಯವಾಗಿ ವಾಸ್ತು ಎಂದರೆ ಕಟ್ಟಡ ಎನ್ನುವ ಅರ್ಥ ಕೊಡುತ್ತದೆ. ಮನುಷ್ಯ ಹಾಗೂ ದೇವತೆಗಳು ವಾಸ ಮಾಡುವ ಸ್ಥಳ ಅಥವಾ ವಾಸಕ್ಕೆ ಮನೆಯನ್ನು ಕಟ್ಟಲು ಯೋಗ್ಯವಾದ ಭೂಮಿ. ಇಂತಹ ಕಟ್ಟಡಗಳು ದೇವಾಲಯ ಗಳಾಗಿರಬಹುದು. ಕೋಟೆ ಕೊತ್ತಲುಗಳಾಗಿರಬಹುದು. ವಾಸ್ತುಶಿಲ್ಪ ಎಂಬ ಪರಿಭಾಷೆಗೆ ವಿಶಾಲವಾದ

ಅರ್ಥವ್ಯಾಪ್ತಿ ಇದ್ದರೂ ಸಾಮಾನ್ಯವಾಗಿ ದೇವಾಲಯಗಳು ಮಾತ್ರ ವಾಸ್ತುಶಿಲ್ಪಗಳಾಗಿ ಕಣ್ಮುಂದೆ ನಿಲ್ಲುತ್ತವೆ.

ಸ್ತೂಪ, ಚೈತ್ಯವಿಹಾರ, ಬಸದಿ, ಮಸೀದಿ, ಚರ್ಚ್, ಕೆರೆ-ಕಟ್ಟೆ, ಬರುಜು, ಕೋಟೆ ಹಾಗೂ ಮನೆಗಳಂತಹ ಎಲ್ಲಾ ರಚನೆಗಳು ವಾಸ್ತುಶಿಲ್ಪಗಳೇ ಹಾಗಿವೆ. ಶುಕ್ರನೀತಿ ಗ್ರಂಥವು ದೇವಾಲಯ ಅರಮನೆ ಅಥವಾ ರಾಜಗೃಹ, ದೇವತಾಮೂರ್ತಿಗಳ ರಚನೆ, ಸರ್ವಜನೋಪಯೋಗಿ ಗೃಹಗಳು, ಬಾವಿ, ಪುಷ್ಕರಣೆ ಮುಂತಾದವುಗಳು ಶಿಲ್ಪಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ. ವಾಸ್ತುವಿನ ಜೊತೆ ಜೊತೆಗೆ ಶಿಲ್ಪವು ಶಿಲ್ಪಿಯ ಅಭಿರುಚಿಗೆ ಅನುಗುಣವಾಗಿ ವಾಸ್ತುವಿಗೆ ವಿವಿಧ ಭಾಗಗಳಲ್ಲಿ ವ್ಯಕ್ತವಾಗಿರುವುದನ್ನು ನಾವು ಕಾಣುತ್ತೇವೆ. ಭಾರತೀಯ ಚರಿತ್ರೆಯಲ್ಲಿ ವಾಸ್ತುರೂಪದಲ್ಲಿ ಮೊದಲು ದೊರೆಯುವುದು ಬೌದ್ಧ ಮತ್ತು ಜೈನ ಧರ್ಮಗಳು ಅಸ್ತಿತ್ವಕ್ಕೆ ಬಂದನಂತರ ಈ ಧರ್ಮಗಳಿಗೆ ಸಂಬಂಧಿಸಿದ ಸೂಪ್ತ ಮತ್ತು ಚೈತ್ಯಗಳು ಆರಂಭದ ವಾಸ್ತುಶಿಲ್ಪಕ್ಕೆ ಸಾಕ್ಷಿಗಳಾಗಿವೆ. ಸೂಪ್ತವೆಂದರೆ ಸತ್ತವರ ಸ್ಮಾರಕವಾಗಿ ಭೂಗತ ಮಾಡಿದ ಕಳೇಬರಹದ ಮೇಲೆ ಕಟ್ಟಿದ ಗೋಲಾಕಾರದ ದಿಬ್ಬ ಇವುಗಳು ಬೃಹತ್ ಶಿಲಾಸಂಸ್ಕೃತಿಯ ಸಮಾಧಿ ಕಲ್ಪನೆಯ ಮುಂದುವರೆದ ಹಂತದಿಂದ ಈ ಸ್ತೂಪಗಳ ರಚನೆಯಾಗಿರಬಹುದೆಂದು ಹೇಳಬಹುದಾಗಿದೆ. ನಂತರ ಶಾತವಾಹನರು, ಮೌರ್ಯರ ಕಾಲದ ಕಟ್ಟಡಗಳ ರಚನೆಯು ಕಂಡುಬರುತ್ತದೆ. ಗುಪ್ತರ ಕಾಲದಲ್ಲಿ ನಿರ್ದಿಷ್ಟವಾಗಿ ದೇವಾಲಯ ವಾಸ್ತುವಿನ ರಚನೆ ಕಾಣಬಹುದಾಗಿದೆ. ವಾಸ್ತುಶಿಲ್ಪವನ್ನು ದೇವಾಲಯಕ್ಕೂ ಹಾಗೂ ಶಿಲ್ಪ ಎಂಬುದನ್ನು ಮೂರ್ತಿಗಳಿಗೆ ಅನ್ವಯವಾಗುವಂತೆ ಅನುಕ್ರಮದಲ್ಲಿ ಬಳಸುತ್ತಾರೆ. ಈ ವಾಸ್ತುಶಿಲ್ಪವನ್ನು ಅಧ್ಯಯನ ದೃಷ್ಟಿಯಿಂದ ದೇವಾಲಯ ವಾಸ್ತುಶಿಲ್ಪ ಮತ್ತು ರಕ್ಷಣಾ ವಾಸ್ತುಶಿಲ್ಪ ಎಂಬುದಾಗಿ ವಿಂಗಡಿಸಲಾಗುತ್ತದೆ.

ದೇವಾಲಯ ವಾಸ್ತುಶಿಲ್ಪ

ಚರಿತ್ರೆಯ ರಚನೆಯಲ್ಲಿ ದೇವಾಲಯಗಳು ಪರಿಣಾಮಕಾರಿ ಮಾಧ್ಯಮಗಳಾಗಿ ಕಾರ್ಯನಿರ್ವಹಿಸುತ್ತವೆ. ದೇವಾಲಯಗಳು ಮಾನವನ ಇತಿಹಾಸ ಮತ್ತು ಅವನ ಕಾಲದ ವಿಭಿನ್ನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಸಾಮಾನ್ಯವಾಗಿ ದೇವಾಲಯ ಎಂದರೆ ದೇವರು ಇರುವ ಸ್ಥಳ ಅಥವಾ ಆಲಯ, ಆಲಯ ಅಂದರೆ ಕಟ್ಟಡವೆಂದರ್ಥ. ದೇವರು ಇರತಕ್ಕ ಸ್ಥಾನ, ಎಡ ಜಾಗ, ಎಂದರ್ಥ. ಧಾರ್ಮಿಕ ಶ್ರದ್ಧೆಯ ಪ್ರಮುಖ ಅಂಶ ದೇವಾಲಯವಾಗಿದೆ. ಇದಕ್ಕೆ ತನ್ನದೇ ಆದ ಭವ್ಯ ಪರಂಪರೆ ಸಂಸ್ಕೃತಿ ಇದೆ. ದೇವಾಲಯವು ಜನರ ಭಕ್ತಿ ಮತ್ತು ನಿಷ್ಠೆಗಳ ಪ್ರತೀಕವಾಗಿದೆ. ಈ ದೇವಾಲಯಗಳು ಇತಿಹಾಸರಚನೆಯಲ್ಲಿ ಪ್ರಮಾಣಯೋಗ್ಯವಾದ ಆಕರ ಸಾಮಗ್ರಿಗಳಾಗಿ ಬಳಕೆಯಾಗುತ್ತವೆ. ಕ್ರಿ.ಶ.ಕೆಗೂ ಮುನ್ನವೇ ದೇವಾಲಯಗಳ ಉಗಮ ರಚನೆಗೊಂಡಂತಹವೆಂಬುದಾದರೂ ಅವುಗಳ ಸ್ವರೂಪ ವ್ಯಕ್ತವಾಗುವುದಿಲ್ಲ. ಹರಪ್ಪ ಮತ್ತು ಮೆಹೆಂಜೋದಾರೋ ನೆಲೆಗಳ ಉತ್ಖನನಗಳಲ್ಲಿ ದೊರೆತ ಸಾರ್ವತ್ರಿಕ

ಕಟ್ಟಡಗಳನ್ನು ದೇವಾಲಯಗಳೆಂದು ಹೇಳಲು ಬರುವುದಿಲ್ಲ. ಕಾರಣ ದೇವಾಲಯದ ರಚನೆ ಅದರಲ್ಲಿ ಕಂಡುಬರುವುದಿಲ್ಲ. ಇಲ್ಲಿ ಹಲವು ಮೂರ್ತಿಗಳು ದೊರೆತವು. ಇವುಗಳಲ್ಲಿ ಮಾತೃದೇವತಾರಾಧನೆ, ಪಶುಪತಿ ಮೊದಲಾದವನ್ನು ಪೂಜಿಸುತ್ತಿದ್ದರು. ಇದರಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ದೇವಾಲಯಗಳ ರಚನೆಗೂ ಮೊದಲು ಅಥವಾ ಪೂರ್ವದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆ ಹಾಗೂ ಆರಾಧನೆ ಇತ್ತೆಂದು ಹೇಳಬಹುದು. ಇದಕ್ಕೆ ಪೂರಕವಾಗಿ ರಾಮಾಯಣ, ಮಹಾಭಾರತದ ಕಾವ್ಯಗಳಲ್ಲಿ ಉಲ್ಲೇಖಗಳಿವೆ. ಮೂರ್ತಿ ಆರಾಧನೆಯು ಆರಂಭವಾದ ಬಳಿಕ ಅದರ ರಕ್ಷಣೆಗಾಗಿ ವಾಸ್ತುರೂಪ ನೀಡಲಾಯಿತು.

ಕ್ರಿ.ಪೂ.೬ನೇ ಶತಮಾನದಲ್ಲಿ ಜೈನ ಮತ್ತು ಬೌದ್ಧಧರ್ಮಗಳು ಉದಯವಾದ ನಂತರ ಭಾರತದ ಚರಿತ್ರೆಯಲ್ಲಿ ದೇವಾಲಯದ ರೂಪರೇಷೆಗಳು ಅಸ್ತಿತ್ವಕ್ಕೆ ಬಂದವು. ಈ ಧರ್ಮಗಳಿಗೆ ಸಂಬಂಧಿಸಿದ ಸ್ತೂಪ ಚೈತ್ಯಾಲಯಗಳು ಆರಂಭದ ಧಾರ್ಮಿಕ ಕಟ್ಟಡ ವಾಸ್ತುವಿಗೆ ಸಾಕ್ಷಿಗಳಾಗಿವೆ. ಇದನ್ನು ಬೃಹತ್ ಶಿಲಾ ಸಂಸ್ಕೃತಿಯ ಸಮಾಧಿಯ ಮುಂದುವರೆದ ಹಂತವಾಗಿರುವುದನ್ನು ಗಮನಿಸಬಹುದು. ಕರ್ನಾಟಕದಲ್ಲೂ ಈ ರೀತಿಯ ಕಟ್ಟಡಗಳು ಶಾತವಾಹನರ ಕಾಲದಲ್ಲಿ ಅನೇಕ ನೆಲೆಗಳಲ್ಲಿ ಕಂಡುಬಂದಿವೆ. ಐಹೊಳೆ, ಸನ್ನತಿ, ಪಟ್ಟದಕಲ್ಲು, ಬನವಾಸಿ, ಚಂದ್ರವಳ್ಳಿಯ ಉತ್ಖನನ ಕಾರ್ಯದಲ್ಲಿ ಕಟ್ಟಡಗಳು ದೊರೆತಿವೆ. ಗುಪ್ತರ ಕಾಲದಲ್ಲಿ ಕಟ್ಟಡ ರೂಪದ ದೇವಾಲಯಗಳನ್ನು ಕಾಣಬಹುದು. ದೇವಾಲಯಗಳನ್ನು ಪ್ರಾರಂಭದಲ್ಲಿ ಬೊಂಬು, ಮರಣ, ಇಟ್ಟಿಗೆ, ಮಣ್ಣಿನಿಂದ ನಿರ್ಮಿಸುತ್ತಿದ್ದರು. ನಂತರ ಕಾಲದಲ್ಲಿ ಶಾಶ್ವತತೆಯ ದೃಷ್ಟಿಯಿಂದಾಗಿ ಕಲ್ಲನ್ನು ಬಳಸಿ ದೇವಾಲಯವನ್ನು ನಿರ್ಮಿಸಲು ಪ್ರಾರಂಭಿಸಿದರು. ಕರ್ನಾಟಕದಲ್ಲಿ ಶಿಲಾವಸ್ತುವಿನಿಂದ ನಿರ್ಮಿಸಿದ ದೇವಾಲಯಗಳನ್ನು ಕದಂಬರ ಕಾಲದಲ್ಲಿ ಕಾಣಬಹುದು. ಕ್ರಿ.ಶ.೬ನೇ ಶತಮಾನದಿಂದ ಹಿಡಿದು ಮೈಸೂರು ಒಡೆಯರವರೆಗಿನ ಅವಧಿಯ ವಾಸ್ತು ಶಿಲ್ಪಕಲೆಯ ಉಗಮ ಮತ್ತು ವಿಕಾಸದ ಹೆಜ್ಜೆಗಳನ್ನು ಗುರುತಿಸಬಹುದು. ಕರ್ನಾಟಕದ ಆಳರಸರುಗಳಾದ ಕದಂಬರು, ಚಾಲುಕ್ಯರು ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು ಹಾಗೂ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಅರಸು ಮನೆತನಗಳು ತಮ್ಮದೇ ಆದ ಪ್ರತ್ಯೇಕ ವಾಸ್ತುಶೈಲಿಗಳನ್ನು ಅಳವಡಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ದೇವಾಲಯಗಳ ನಿರ್ಮಾಣಕ್ಕಾಗಿ ಇವರು ವಿವಿಧ ಪ್ರದೇಶಗಳಲ್ಲಿ ಲಭ್ಯವಿರುವ ಶಿಲೆ, ಕಣಶಿಲೆ, ಮರಳು, ಸುಣ್ಣಶಿಲೆ, (ಅಗ್ನಿಶಿಲೆ) ಮುಂತಾದವುಗಳನ್ನು ಬಳಸಿದರು. ಇವರು ದಕ್ಷಿಣದ ದ್ರಾವಿಡ ಶೈಲಿ, ಉತ್ತರದ ನಾಗರಶೈಲಿಗಳನ್ನು ಒಗ್ಗೂಡಿಸಿ ಕೊಂಡು ವೇಸರಶೈಲಿ ಎಂಬ ಹೊಸ ವಾಸ್ತುಶೈಲಿಯನ್ನು ಹುಟ್ಟು ಹಾಕಿದರು.

ನಂದಿಬೆಟ್ಟ ಪರಿಸರದ ದೇವಾಲಯಗಳು ಹೆಚ್ಚಾಗಿ ಗಂಗರು, ಚೋಳರು ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರ ಪ್ರಭಾವಕ್ಕೆ ಒಳಗಾಗಿ ಇವರ ಕಾಲದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ತಕ್ಕಂತೆ ಬದಲಾಗಿರುವುದನ್ನು ಕಾಣುತ್ತೇವೆ. ನಂದಿಬೆಟ್ಟ ಪರಿಸರದಲ್ಲಿ ಕಂಡುಬರುವ

ಪ್ರಮುಖ ದೇವಾಲಯಗಳನ್ನು ಈ ಕೆಳಕಂಡಂತೆ ನೋಡಬಹುದು. ಈ ಪರಿಸರದಲ್ಲಿ ಹೆಚ್ಚಾಗಿ ಶೈವ ಮತ್ತು ವೈಷ್ಣವ ಧರ್ಮದ ದೇವಾಲಯಗಳು ಹೆಚ್ಚಾಗಿ ಕಂಡುಬರುತ್ತವೆ.

ರಂಗಸ್ಥಳದ ಶ್ರೀರಂಗನಾಥ ದೇವಾಲಯ

ಚಿಕ್ಕಬಳ್ಳಾಪುರ ಗೌರಿಬಿದನೂರು ಮಾರ್ಗದಲ್ಲಿ ತಿಪ್ಪೇನಹಳ್ಳಿಯಿಂದ ಎರಡು ಕಿ.ಮೀ. ದೂರದಲ್ಲಿದೆ. ಶ್ರೀರಂಗನಾಥಸ್ವಾಮಿಯ ಬೃಹತ್ ದೇವಾಲಯಕ್ಕೆ ಪ್ರಸಿದ್ಧವಾಗಿದೆ. ನಂದಿಯ ಪಂಚಗಿರಿಗಳ ಸಾಲಿನಲ್ಲಿ ಬರುವ ಸ್ಕಂದಗಿರಿಯ ಉತ್ತರಕ್ಕೆ ದ್ರಾವಿಡಶೈಲಿಯನ್ನು ನಿರ್ಮಿಸಿರುವ ಈ ಬೃಹತ್ ದೇವಾಲಯ ವಾಸ್ತುಶಿಲ್ಪದ ಅತ್ಯುತ್ತಮ ಕೊಡುಗೆಯಾಗಿದೆ. ದೇವಾಲಯವು ವಾಸ್ತುಶಿಲ್ಪದ ದೃಷ್ಟಿಯಿಂದ ವಿಜಯನಗರ ಪೂರ್ವ ಅಥವಾ ಹೊಯ್ಸಳರ ಕಾಲದ ರಚನೆಯಾಗಿದೆ. ದೇವಾಲಯದ ಮಹಾದ್ವಾರ ದಕ್ಷಿಣಾಭಿಮುಖವಾಗಿದೆ. ನವರಂಗ ಸುಂದರವಾದ ಮುಖ ಮಂಟಪಗಳನ್ನು ಹೊಂದಿದೆ. ಮುಖಮಂಟಪದ ಸುತ್ತಲೂ ಸುಂದರ ಕೆತ್ತನೆಯಿಂದ ಕೂಡಿದೆ. ಶಿಲಾಸ್ತಂಭಗಳನ್ನೊಳಗೊಂಡ ಹಜಾರವಿದೆ. ಮುಖಮಂಟಪವು ಎತ್ತರದ ಜಗತಿಯ ಮೇಲೆ ನಿರ್ಮಾಣಗೊಂಡಿದೆ. ಈ ಮಂಟಪದಲ್ಲಿ ಉಬ್ಬುಶಿಲ್ಪಗಳಿಂದ ಅಲಂಕೃತವಾದ ೨೪ ಶಿಲಾಸ್ತಂಭಗಳಿವೆ. ಇದಕ್ಕೆ ಹೊಂದಿಕೊಂಡಂತಿರುವ ಹಜಾರದ ೧೪ ಶಿಲಾಸ್ತಂಭಗಳೂ ಉತ್ತಮ ವೈಷ್ಣವ ಉಬ್ಬುಶಿಲ್ಪಗಳ ಕೆತ್ತನೆಯಿಂದ ಕೂಡಿದೆ. ಪ್ರತಿಯೊಂದು ಕಂಭವೂ ತನ್ನದೇ ಆದ ವೈಶಿಷ್ಟ್ಯತೆಯಿಂದ ಕೂಡಿದ್ದು ಕಂಭಗಳ ಮೇಲೆ ದೇವಾನುದೇವತೆಗಳು, ಪ್ರಾಣಿಗಳು, ಸಿಂಹ, ಆನೆ, ಬಳ್ಳಿಗಳು ಮುಂತಾದ ಕೆತ್ತನೆಯ ಕೆಲಸಗಳಿಂದ ಅಲಂಕೃತಗೊಂಡಿದೆ. ಗರ್ಭಗುಡಿಗೆ ಪ್ರದಕ್ಷಿಣಾ ಪಥವಿದ್ದು, ಈ ಪ್ರದಕ್ಷಿಣಾಪಥದ ಮಾರ್ಗದಲ್ಲಿ ಶಿಲೆಗಳ ಮೇಲೆ ನೂರಾರು ವಿವಿಧ ಕಲಾ ಕೃತಿಗಳು, ಪುರಾಣ ಸಂಬಂಧ ಘಟನಾವಳಿಗಳು, ಪ್ರಾಣಿಗಳು, ಪಕ್ಷಿಗಳು, ಎಲೆಬಳ್ಳಿಗಳು ದೇವತೆಗಳ ಮೂರ್ತಿಗಳನ್ನು ಕಡೆದಿರುವುದನ್ನು ಕಾಣಬಹುದಾಗಿದೆ. ಗರ್ಭಗುಡಿಯಲ್ಲಿರುವ ಶ್ರೀರಂಗನಾಥಮೂರ್ತಿ ೪ ಅಡಿ ಎತ್ತರವಾಗಿದ್ದು, ಶೇಷಶಯನ ಮೇಲೆ ಮಲಗಿದ್ದು, ಆಕರ್ಷಕವಾಗಿದೆ. ಜೊತೆಯಲ್ಲಿ ಶ್ರೀದೇವಿ ಮತ್ತು ಭೂದೇವಿಯರ ಮೂರ್ತಿಗಳು ಸೊಗಸಾಗಿವೆ. ಗರ್ಭಗುಡಿಯ ಮೇಲೆ ಚತುಷ್ಕೋನಾಕಾರದ ದ್ರಾವಿಡಶೈಲಿಯ ಶಿಖರವಿದೆ. ಇದಲ್ಲದೆ ಇಲ್ಲಿ ಆಳ್ವಾರರ ಮೂರ್ತಿಗಳು ಉತ್ಸವ ಮೂರ್ತಿಗಳು ಹಾಗೂ ರಾಮಾನುಜಾಚಾರ್ಯರ ಮೂರ್ತಿಗಳನ್ನು ಕಾಣಬಹುದಾಗಿದೆ.[೧] ಗರ್ಭಗುಡಿಯ ಹೊರಭಾಗದಲ್ಲಿರುವ ದ್ವಾರಪಾಲಕರ ವಿಗ್ರಹಗಳೂ ಬಹುಸುಂದರ ವಾಗಿವೆ. ಮುಂಭಾಗದ ಹಜಾರದಲ್ಲಿ ಶಿಲಾಸ್ತಂಭಗಳಿವೆ. ಮುಖಮಂಟಪ ಹಾಗೂ ಹಜಾರದಲ್ಲಿ ಸಾಲುಸಾಲಾಗಿ ಎಲ್ಲಾ ಶಿಲಾಸ್ತಂಭಗಳಲ್ಲಿಯೂ ೩ ಸಾಲುಗಳ ಕೆತ್ತನೆಗಳಿವೆ. ಮಂಟಪದ ಮೇಲ್ಛಾವಣಿ ಕಲ್ಲಿನಲ್ಲಿಯೇ ಕೊರೆಯಲ್ಪಟ್ಟಿದೆ. ನವರಂಗದಲ್ಲಿ ಶ್ರೀವೈಷ್ಣವ ಆಚಾರ್ಯರುಗಳಾದ ವಿಶ್ವಸೇನ ರಾಮಾನುಜ; ನಮ್ಮಾಳ್ವಾರ್ ಮತ್ತು ಚಕ್ರಿತ್ತಾಳ್ವಾರ್‌ಗಳ ಲೋಹದ ಪ್ರತಿಮೆಗಳಿವೆ. ಸುಖನಾಸಿಯಿಂದ ಹೊರಬಂದಂತೆ ದ್ವಾರದಲ್ಲಿ ಎರಡು ಪಾರ್ಶ್ವಗಳಲ್ಲಿ ಶಿಲಾ ಆನೆಗಳನ್ನು ಕಾಣಬಹುದಾಗಿದೆ. ಈ ಆನೆಗಳು ಬೃಹತ್ತಾಗಿದ್ದು

ಕೆತ್ತನೆಯ ಕೆಲಸವು ಬಹು ಸುಂದರವಾಗಿದೆ. ದೇವಾಲಯದ ಹೊರಪ್ರಾಕಾರದಲ್ಲಿ ಗರುಡ ಗಂಭ, ಧ್ವಜ ಸ್ತಂಭಗಳು ಬೃಹತ್ ಕೆತ್ತನೆಯ ಕೆಲಸಕ್ಕೆ ಹಿಡಿದ ಕೈಗನ್ನಡಿಯಂತಿದೆ. ಈ ದೇವಾಲಯದ ಪೂರ್ವ ಭಾಗದಲ್ಲಿ ಒಂದು ವಿಶೇಷ ಸ್ಥಳದಲ್ಲಿ ಕಿಂಡಿಯನ್ನು ಅಳವಡಿಸಲಾಗಿದೆ.[೨] ಈ ಕಿಂಡಿಯ ಮೂಲಕ ಬೆಳಗಿನ ಸೂರ್ಯರಶ್ಮಿಯು ಮಕರಸಂಕ್ರಾತಿ ದಿನದಂದು ಸ್ವಾಮಿಯ ಮೇಲೆ ಬೀಳುವುದು.

ಈ ದೇವಾಲಯದ ಹೊರ ಪ್ರಾಕಾರವನ್ನು ತಲುಪಿದಂತೆ ಕೇಂದ್ರ ದೇವಾಲಯದ ಎಡಭಾಗದಲ್ಲಿ ಶಿಲೆಗಳಿಂದಲೇ ನಿರ್ಮಿತವಾದ ಮತ್ತೊಂದು ದೇವಾಲಯವು ಕಂಡುಬರುವುದು. ಈ ದೇವಾಲಯದಲ್ಲಿ ಪ್ರಮುಖವಾಗಿ ಮುಖಮಂಟಪ ಮತ್ತು ಮೂರು ಗುಡಿಗಳನ್ನು ಕಾಣಬಹುದಾಗಿದೆ. ಮಧ್ಯಭಾಗದಲ್ಲಿರುವ ಗರ್ಭಗುಡಿಯಲ್ಲಿ ಲಕ್ಷ್ಮಿಯ ಸುಂದರವಾದ ವಿಗ್ರಹವಿದೆ. ಈ ಮೂರ್ತಿಯು ಕಪ್ಪುಶಿಲೆಯಿಂದ ಕೆತ್ತಲ್ಪಟ್ಟಿದ್ದು, ಸುಮಾರು ೩ ಅಡಿಗಳಷ್ಟು ಎತ್ತರವಾಗಿದೆ. ಲಕ್ಷ್ಮಿಯ ಮೂರ್ತಿಯು ಕುಳಿತ ಭಂಗಿಯಲ್ಲಿದ್ದು ಚತುರ್ಭುಜಗಳನ್ನು ಹೊಂದಿದ್ದು ಎರಡು ಕೈಗಳಲ್ಲಿ ಆಯುಧಗಳನ್ನು ಒಂದು ಆಭಯಹಸ್ತವೂ ಮತ್ತೊಂದು ವರದಹಸ್ತವೂ ಆಗಿದೆ. ಈ ಆಲಯದ ಎಡಭಾಗದಲ್ಲಿ ರಾಮಾನುಜಾಚಾರ್ಯರ ಮೂರ್ತಿಯನ್ನು ಇರಿಸಲಾಗಿದೆ. ಈ ಮೂರ್ತಿಯ ಎತ್ತರವೂ ಸಹ ೨ ರಿಂದ ೨೧/೨ ಅಡಿಗಳಿಷ್ಟಿದೆ. ಲಕ್ಷ್ಮಿದೇವಿಯ ಆಲಯದ ಬಲಭಾಗದಲ್ಲಿ ಆಂಡಾಳ್ ತಾಯಾರ್ ಸನ್ನಿಧಿಯಿದ್ದು, ಇಲ್ಲಿ ಅಂಡಾಳ ಮಾತೆಯ ಸುಮಾರು ೨ ೧/೨ ಅಡಿ ಎತ್ತರದ ಮೂರ್ತಿಯನ್ನು ಪ್ರತಿಷ್ಟಾಪಿಸಲಾಗಿದೆ. ದೇವಾಲಯದ ರಾಯಗೋಪುರ ಮತ್ತು ವಿಮಾನಗೋಪುರಗಳು ನಾಶವಾಗಿದ್ದು, ಇತ್ತೀಚೆಗೆ ಅವುಗಳ ನಿರ್ಮಾಣ ಕಾರ್ಯ ನಡೆಯುತ್ತದೆ.[೩] ಇಲ್ಲಿ ನಡೆಯುವ ಉತ್ಸವಗಳಲ್ಲಿ ಮಾರ್ಗಶಿರ ಶುದ್ಧಪೂರ್ಣಿಮೆಯೆಂದು ನಡೆಯುವ ಬ್ರಹ್ಮೋತ್ಸವ ಮುಕ್ಕೋಟಿ, ಏಕಾದಶಿ, ದಸರ ವಿಶೇಷ ಸೇವೆ ಮತ್ತು ಶ್ರೀರಾಮನವಮಿ ಉತ್ಸವಗಳು ಮುಖ್ಯವಾದವುಗಳು.

ಭೋಗನಂದೀಶ್ವರ ದೇವಾಲಯ

ನಂದಿಗ್ರಾಮದ (ಭೋಗನಂದೀಶ್ವರ) ಮತ್ತು ಅರುಣಾಚಲೇಶ್ವರ ಜೋಡಿ ದೇವಾಲಯವು ಸುಮಾರು ೩೭೦ ಅಡಿ ಉದ್ದ ೨೫೦ ಅಡಿ ಅಗಲದಲ್ಲಿ ಬೃಹದಾಕಾರವಾಗಿ ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿದ್ದು, ಲಭ್ಯವಿರುವ ಶಾಸನಗಳ ರೀತ್ಯ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಿರ್ಮಿಸಲಾಗಿರುವ ದೇವಾಲಯಗಳಿಗೆಲ್ಲ ಅತಿ ಪ್ರಾಚೀನವಾದುದೆಂದು ತಿಳಿದುಬರುತ್ತದೆ. ಪೂರ್ವದ ಕಡೆಯ ಮಹಾದ್ವಾರದಲ್ಲಿ ಪ್ರವೇಶಿಸಿ ಮುನ್ನಡೆದಂತೆ ದೇವಾಲಯದ ವಿಶಾಲ ಮುಖಮಂಟಪವು ಸ್ವಾಗತಿಸುತ್ತದೆ. ಈ ಮುಖಮಂಟಪ ಕಂಬಗಳ ಕಲಾಭವ್ಯತೆ ಮತ್ತು ಜೋಡಣೆಯ ಸೊಬಗಿನಿಂದಾಗಿ ದೇವಾಲಯದ ಇಡೀ ನಿರ್ಮಾಣ ಒಂದೇ ದೇವಾಲಯವೆಂದು ಮೊದಲನೋಟಕ್ಕೆ ಅನ್ನಿಸಿದರೂ ಎರಡೂ ಬೇರೆ ಬೇರೆ ದೇವಾಲಯಗಳ ಮಧ್ಯೆ ಒಂದು ಸಣ್ಣ ದೇವಾಲಯದೊಡನೆ ಬೆಸೆದು ನಿರ್ಮಿಸಲಾಗಿರುವ ಜೋಡಿ ದೇವಾಲಯ. ಅಲ್ಲದೆ ಈ

ಎರಡು ದೇವಾಲಯಗಳ ಎದುರಿಗೆ ನಂದಿಮಂಟಪಗಳನ್ನು ಸಹ ನಿರ್ಮಿಸಲಾಗಿದ್ದು, ಈ ಇಡೀ ರಚನೆ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಹೋಲಿಕೆಯನ್ನು ನೆನಪಿಗೆ ತರುತ್ತದೆ. ಈ ಜೋಡಿ ದೇವಾಲಯವು ಪೂರ್ವಾಭಿಮುಖವಾಗಿ ಒಂದು ವಿಸ್ತಾರವಾದ ಪ್ರಾಕಾರದ ಮಧ್ಯದಲ್ಲಿ ನೆಲೆಸಿದ್ದು, ಪ್ರಾಕಾರದ ಅಕ್ಕಪಕ್ಕಗಳ ಗೋಡೆಗೆ ಅಂಟಿಕೊಂಡು ಯಾತ್ರಾರ್ಥಿಗಳು ತಂಗಲು ಕೈಸಾಲೆಯನ್ನು ನಿರ್ಮಿಸಲಾಗಿದೆ.

ದೇವಾಲಯದ ಎರಡು ಗರ್ಭಗೃಹಗಳ ಪೈಕಿ ಉತ್ತರ ದಿಕ್ಕಿನ ಗೃಹದಲ್ಲಿ ಭೋಗನಂದೀಶ್ವರನನ್ನು, ದಕ್ಷಿಣ ಗೃಹದಲ್ಲಿ ಅರುಣಾಚಲೇಶ್ವರನನ್ನು ಸ್ಥಾಪಿಸಲಾಗಿದೆ. ಈ ಜೋಡಿ ದೇವಾಲಯಗಳು ಗರ್ಭಗೃಹ, ಸುಖನಾಸಿ ಮತ್ತು ನವರಂಗಗಳ ಸಹಿತಿ ನಿರ್ಮಿಸಲಾಗಿದ್ದು, ಸುಖನಾಸಿಗಳಲ್ಲಿ ಎದುರು ಬದರಿಗೆ ಎರಡು ಕಲಾತ್ಮಕ ಜಾಲಂಧ್ರಗಳನ್ನು ನಿರ್ಮಿಸಲಾಗಿದೆ. ಈ ಜೋಡಿ ದೇವಾಲಯವು ವಾಸ್ತುಶಿಲ್ಪದ ದೃಷ್ಟಿಯಿಂದ ಎಷ್ಟು ವೈಶಿಷ್ಟ್ಯಪೂರ್ಣವೋ ಅದರ ನಿರ್ಮಾಣದ ಕತೆಯೂ ಕೂಡ ಅಷ್ಟೇ ವೈಶಿಷ್ಟಪೂರ್ಣವಾಗಿದೆ. ಭೋಗನಂದೀಶ್ವರ ದೇವಾಲಯ ಮತ್ತು ಅರುಣಾಚಲೇಶ್ವರ ದೇವಾಲಯಗಳ ಪೈಕಿ ಮೊದಲ ದೇವಾಲಯವು ೯ನೇ ಶತಮಾನಕ್ಕಿಂತಲೂ ಪ್ರಾಚೀನ ಕಾಲದ್ದೆಂದು ಚಿಕ್ಕಬಳ್ಳಾಪುರದ ೨೬ನೇ ಶಾಸನದ ರೀತ್ಯ ತಿಳಿದುಬಂದಿದ್ದು, ಲಭ್ಯವಿರುವ ಬಹಳಷ್ಟು ಶಾಸನಗಳ ರೀತ್ಯ ಹನ್ನೊಂದನೇ ಮತ್ತು ಹನ್ನೆರಡನೇ ಶತಮಾನಗಳಲ್ಲಿ ಚೋಳ ಮತ್ತು ಹೊಯ್ಸಳರಿಂದ ಅರುಣಾಚಲೇಶ್ವರ ದೇವಾಲಯವು ಸೇರಿದಂತೆ ಈ ದೇವಾಲಯವು ಬಹಳಷ್ಟು ಹಿಗ್ಗಿಸಲ್ಪಟ್ಟಿತ್ತೆಂದು ತಿಳಿದುಬರುತ್ತದೆ.[೪] ಶತಮಾನಗಳ ಅಂತರದಲ್ಲಿ ಈ ಜೋಡಿ ದೇವಾಲಯದ ನಿರ್ಮಾಣ ವಿವಿಧ ಹಂತಗಳಲ್ಲಿ ಕೈಗೊಂಡಿದ್ದರೂ ಇದೇ ದೇವಾಲಯುವ ಜೋಡಣೆಯನ್ನು ಗಮನಿಸಿದಾಗ ಎಲ್ಲಿಯೂ ಇದು ಬೇರೆ ಬೇರೆ ಕಾಲದಲ್ಲಿ ವಿವಿಧ ಹಂತಗಳಲ್ಲಿ ನಿರ್ಮಿಸಿ ಜೋಡಿಸಲಾಗಿದೆಯೆಂದು ಊಹಿಸಲೂ ಕಷ್ಟ. ಅಷ್ಟೊಂದು ನಯನಾಜೂಕಾಗಿ ಈ ಕಾರ್ಯವನ್ನು ಕೈಗೊಂಡು ಮುಗಿಸಲಾಗಿದೆ.

ಚಿಕ್ಕಬಳ್ಳಾಪುರದಿಂದ ೭ ಕಿ.ಮೀ. ದೂರದಲ್ಲಿ ನಂದಿಬೆಟ್ಟದ ಈಶಾನ್ಯ ಭಾಗಲ್ಲಿರುವ ಭೋಗ ನಂದೀಶ್ವರ ದೇವಾಲಯವು ಇಡೀ ರಾಜ್ಯದಲ್ಲಿ ಅತ್ಯಂತ ಮುಖ್ಯವಾದ ದ್ರಾವಿಡ ಶೈಲಿಯ ದೇವಾಲಯಗಳಲ್ಲಿ ಒಂದಾಗಿದೆ. ಮೂಲ ದೇವಾಲಯವು ಒಂಬತ್ತನೆಯ ಶತಮಾನಕ್ಕಿಂತ ಪ್ರಾಚೀನವಾಗಿದ್ದು, ಅನಂತರ ಸೇರಿಸಲಾದ ಭಾಗಗಳು ಚೋಳ, ಹೊಯ್ಸಳ ಮತ್ತು ವಿಜಯನಗರ ಕಾಲಕ್ಕೆ ಸೇರುತ್ತದೆ. ದ್ರಾವಿಡ ಶೈಲಿಯ ಈ ದೇವಾಲಯವು ಕರ್ನಾಟಕದ ಅತ್ಯಂತ ಸುಂದರ ಹಾಗೂ ಅಲಂಕೃತ ದೇವಾಲಯವಾಗಿದೆ. ಇದು ಅವಳಿ ದೇವಾಲಯವಾಗಿದ್ದು ಉತ್ತರಕ್ಕೆ ಭೋಗನಂದೀಶ್ವರ ಮತ್ತು ದಕ್ಷಿಣಕ್ಕೆ ಅರುಣಾಚಲೇಶ್ವರ ದೇವಾಲಯವಿದೆ. ಬೆಟ್ಟದ ತಪ್ಪಲಲ್ಲಿ ಭೋಗನಂದೀಶ್ವರ ದೇವಾಲಯವು ವಿಶಾಲವಾದ ನಿವೇಶನದಲ್ಲಿ ರಚಿತವಾಗಿದೆ. ಈ ಎರಡೂ ದೇವಾಲಯಗಳು ತಳವಿನ್ಯಾಸದಲ್ಲಿ ಹಾಗೂ ವಿಸ್ತೀರ್ಣದಲ್ಲಿ ಒಂದೇ ರೀತಿ

ಇದೆ. ಎರಡೂ ದೇವಾಲಯಗಳು ಪೂರ್ವ ದಿಕ್ಕಿನತ್ತ ಮುಖ ಮಾಡಿವೆ. ಪ್ರತಿಯೊಂದರಲ್ಲೂ ಒಂದೊಂದು ಗರ್ಭಗೃಹ, ಸುಖನಾಸಿ ಮತ್ತು ನವರಂಗಳಿವೆ. ಅವುಗಳ ಮುಂದೆ ಎರಡು ನಂದಿಮಂಟಪಗಳು ಇವೆ. ಅವುಗಳಲ್ಲಿ ಒಂದರ ಮುಂದೆ ಒಂದು ಸಣ್ಣ ಗರ್ಭಗೃಹವೂ ಇದೆ. ಮೂಲ ದೇವಾಲಯಗಳ ಎರು ವಿನ್ಯಾಸದಲ್ಲಿ ಸಹ ಹೆಚ್ಚು ಕಡಿಮೆ ಒಂದೇ ರೀತಿಯ ಅಲಂಕರಣೆ ಕಾಣಬಹುದು. ವಿವಿಧಾಕೃತಿಯ ದಿಂಡುಗಳಿಂದ ಕೂಡಿದ ಅಧಿಷ್ಠಾನ, ಕುಂಡ್ಯಗಳ, ಕೋಷ್ಠಗಳು, ಜಾಲಂಧ್ರಗಳು ಮುಂತಾದವುಗಳಿಂದ ಅಲಂಕೃತವಾದ ಭಿತ್ತಿ. ಕೂಡುಗಳಿಂದ ಕೂಡಿದ ಕಪೋತ, ಶಿಲ್ಪಾಲಂಕೃತವಾದ ಕೂಟ, ಶಾಲ, ಪಂಜರಗಳ ಮಾಲೆ ದ್ವಿತಲವಿಮಾನ, ಗ್ರೀವ, ಶಿಖರ ಮತ್ತು ಸ್ತೂಪಿ ಎಲ್ಲವನ್ನು ಎರುವಿನ್ಯಾಸದಲ್ಲಿ ಹೊಂದಿದೆ." (ಪು.೯೦) ಸುಖನಾಸಿ ಮತ್ತು ನವರಂಗಗಳು ಎದುರು ಬದುರಾಗಿ ರಂಧ್ರಗಳಿಂದ ಕೂಡಿದ ಜಾಲಂಧ್ರಗಳಿವೆ. ಭೋಗನಂದೀಶ್ವರ ದೇವಾಲಯದ ೪ ಕಂಬಗಳು ೪ ಪಕ್ಕಗಳಲ್ಲಿ ಸುಂದರವಾದ ಸಣ್ಣ ಸಣ್ಣ ವಿಗ್ರಹಗಳನ್ನು ಕೆತ್ತಲಾಗಿದೆ. ನವರಂಗದಲ್ಲಿ ೭ ಅಡಿಗಳು ಚತುದಶ್ರ ಭೂವನೇಶ್ವರದಲ್ಲಿ ಅಷ್ಟದಿಕ್ಪಾಲಕರ ಮತ್ತು ಮಧ್ಯದಲ್ಲಿ ಶಿವಪಾರ್ವತಿಯರ ವಿಗ್ರಹಗಳಿದ್ದು, ನವರಂಗದ್ವಾರದ ಮುಂದೆ ನಂದಿಮಂಟಪವಿದೆ. ಈ ದೇವಾಲಯಗಳೆರಡೂ ಒಂದೇ ಆಕಾರ ಮತ್ತು ರೂಪವನ್ನು ಹೊಂದಿದ್ದು ಗರ್ಭಗುಡಿಯ ಮೇಲೆ ಕಲ್ಲಿನ ಶಿಖರಗಳಿವೆ. ದೇವಾಲಯಗಳ ಹೊರ ಗೋಡೆಗಳ ಮೇಲೆ ಉಬ್ಬುಶಿಲ್ಪಗಳು, ಕಂಬಗಳು ಮತ್ತು ರಂಧ್ರಗಳುಳ್ಳ ಕಿಟಕಿಗಳು ಅಥವಾ ಜಾಲಂಧ್ರಗಳನ್ನು ಒಳಗೊಂಡಿದೆ. ತಳಭಾಗದಲ್ಲಿ ಆನೆ, ಯಾಳಿ ಮತ್ತು ಸಿಂಹಗಳ ಪಟ್ಟಿಕೆಗಳನ್ನು ಕಾಣಬಹುದು. ಎರಡು ದೇವಾಲಯಗಳ ಮಧ್ಯದಲ್ಲಿ ಒಂದು ಚಿಕ್ಕ ಉಮಾಮಹೇಶ್ವರಿ ದೇವಾಲಯವಿದೆ. ಇದರ ಮುಂಭಾಗದಲ್ಲಿ ತುಂಬಾ ನಾಜೂಕಾದ ಕೆತ್ತನೆಯ ಕಲೆಯನ್ನು ಹೊಂದಿರುವ ಒಂದು ಕಲ್ಯಾಣ ಮಂಟಪವಿದೆ. ಇದನ್ನು ೧೩ನೇ ಶತಮಾನದಲ್ಲಿ ಹೊಯ್ಸಳ ಕಾಲದೆನ್ನಲಾಗಿದೆ. ನವರಂಗದಲ್ಲಿ ಕೈಮುಗಿದು ಕುಳಿತಿರುವ ಒಬ್ಬ ಭಕ್ತನ ಬಿಡಿಶಿಲ್ಪವಿದ್ದು, ಅದನ್ನು ರಾಜೇಂದ್ರ ಚೋಳನ ವ್ಯಕ್ತಿಶಿಲ್ಪವೆಂದು ಗುರುತಿಸುತ್ತಾರೆ. ಈ ಶಿಲ್ಪವುದುಂಡು ವಿಗ್ರಹವಾಗಿದ್ದು ಧ್ಯಾನಾಸಕ್ತನಾಗಿ ಕುಳಿತಿರುವಂತೆ ಪ್ರತಿಷ್ಠಾಪಿಸಲಾಗಿದೆ. ಈ ಶಿಲ್ಪವು ಪ್ರಸ್ತುತ ಚರ್ಚೆಗೆ ಒಳಗಾಗಿದ್ದು ಶಿಲ್ಪ ರಾಜೇಂದ್ರನದ್ದಾದರೆ ಈ ವ್ಯಕ್ತಿ ಇಲ್ಲೇಕೆ ತನ್ನ ಶಿಲ್ಪವನ್ನು ಇಡಿಸಿದ್ದಾನೆ. ತಾನೇ ನಿರ್ಮಿಸಿದ ಗಂಗೈಕೊಂಡ ಚೋಲಪುರಂನಲ್ಲಿರುವ ವಿಶ್ವವಿಖ್ಯಾತ ಬೃಹದೀಶ್ವರ ದೇವಾಲಯದಲ್ಲಿ ಇರಿಸಿಲ್ಲ ಎಂಬ ಶಂಕೆ ಮೂಡುತ್ತದೆ. ರಾಜೇಂದ್ರ ಚೋಳ ಎಂದು ಗುರುತಿಸಲ್ಪಡುವ ಈ ವಿಗ್ರಹವು ೨ ೧/೨ ಅಡಿ ಎತ್ತರವಾಗಿದ್ದು, ಪದ್ಮಾಸನ ಭಂಗಿಯಲ್ಲಿ ಕುಳಿತಿದ್ದು ಕಂಠೀಹಾರ ಮತ್ತು ತೋಳುಬಂಧಿಯನ್ನು ತೊಟ್ಟಿದ್ದು ಜ್ಞಾನ ಮುದ್ರೆಯಲ್ಲಿರುವುದು ಕಂಡುಬರುತ್ತದೆ.

ಕಪ್ಪು ಕಲ್ಲಿನ ವಿಗ್ರಹವಾಗಿದೆ. ರಾಜೇಂದ್ರ ಚೋಳನು ನೊಳಂಬವಾಡಿಯ ದೇವಾಲಯಗಳನ್ನು ನಾಶಮಾಡಿ ಅಲ್ಲಿಂದ ಕಂಬಗಳನ್ನು ತನ್ನ ನಾಡಿಗೆ ಸಾಗಿಸಿದ್ದಾನೆ. ಶಿವಭಕ್ತನಾಗಿ ನೊಳಂಬವಾಡಿಯ

ಅನೇಕ ದೇವಾಲಯಗಳನ್ನು ನಾಶಮಾಡಿದ ಪಾಪ ಅವನನ್ನು ಸುತ್ತಿಕೊಂಡಂತೆ ಅನ್ನಿಸಿ, ಪಾಪದಿಂದ ವಿಮೋಚನೆ ಹೊಂದಲು ಪ್ರಾಯಶ್ಚಿತ್ತಾರ್ಥವಾಗಿ ಆಗ ಅಲ್ಲೆ, ಉಳಿದಿದ್ದ ಭೋಗನಂದೀಶ್ವರ ದೇವಾಲಯದ ನವರಂಗದಲ್ಲಿ ದೇವರ ಸಾನಿಧ್ಯದಲ್ಲಿ ಪಾಪ ಭೀರುವಾಗಿ ಕೈಮುಗಿದು ಕುಳಿತಿರುವಂತೆ ಶಿಲ್ಪಗಳನ್ನು ಕೆತ್ತಿಸಿಟ್ಟಿರಬೇಕು. ಪ್ರಾಯಶ್ಚಿತ್ತಾರ್ಥವಲ್ಲದೆ ಕೇವಲ ಭಕ್ತಿಯ ದ್ಯೂತಕವಾಗಿ ತನ್ನ ಶಿಲ್ಪವನ್ನು ಶಿವದೇವಾಲಯಗಳಲ್ಲಿ ಕೆತ್ತಿಸಿಟ್ಟಿದ್ದಾನೆಂದು ನಂಬಬೇಕಾದರೆ ಈ ರೀತಿಯ ಶಿಲ್ಪಗಳು ಈತನಿಂದ ನಿರ್ಮಾಣವಾದ ಬೇರೆ ದೇವಾಲಯಗಳಲ್ಲಿ ಕಾಣಬೇಕಿತ್ತು. ಆದರೆ ಅಲ್ಲೆಲ್ಲೂ ಈ ರೀತಿ ಶಿಲ್ಪಗಳು ಇರುವುದು ಕಾಣುವುದಿಲ್ಲ.

ಈ ಶಿಲ್ಪವನ್ನು ಕಂಡಾಗ ಪ್ರಾಯಶ್ಚಿತಕ್ಕಿಂತ ಹೆಚ್ಚಾಗಿ ಭಕ್ತಿಯ ಅಂಶಗಳು ಕಂಡುಬರುತ್ತವೆ. ಆದಕಾರಣ ರಾಜೇಂದ್ರ ಚೋಳನ ವಿಗ್ರಹಕ್ಕೆ ಬದಲಾಗಿ ಭಕ್ತರ ಅಥವಾ ಯಾರಾದರೂ ಜೈನ ಮುನಿಗಳ ವಿಗ್ರಹವಿರಬಹುದು ಎನ್ನುವುದು ಸಂಶೋಧಕ ಅಭಿಪ್ರಾಯ. ಕಾರಣ ಈ ಕ್ಷೇತ್ರವು ಹಿಂದೆ ಜೈನ ಧರ್ಮದ ಪ್ರಭಾವಕ್ಕೆ ಒಳಗಾಗಿತ್ತು ಎನ್ನುವ ಬಲವಾದ ಆಧಾರದ ಮೇಲೆ ಈ ಅಭಿಪ್ರಾಯ ವ್ಯಕ್ತಪಡಿಸಲಾಗುತ್ತದೆ. ಭೋಗನಂದೀಶ್ವರ ದೇವಾಲಯದ ನವರಂಗದ ಎಡಭಾಗದ ಗುಡಿಯಲ್ಲಿ ಧ್ಯಾನಮುದ್ರೆಯಲ್ಲಿ ಕುಳಿತಿರುವ ವಿಗ್ರಹದ ಬಗ್ಗೆ ಮತ್ತೊಂದು ಪೌರಾಣಿಕ ಹಿನ್ನೆಲೆಯಿರುವುದು ಕಂಡುಬರುತ್ತದೆ. ಬ್ರಹ್ಮದೋಷಕ್ಕೆ ಗುರಿಯಾದ ಇವರು ಅದರ ಪರಿಹಾರಕ್ಕಾಗಿ ೧೦೮ ಶಿವ ದೇವಾಲಯಗಳನ್ನು ನಿರ್ಮಿಸಿ ಕಡೆಯ ದೇವಾಲಯ ನಿರ್ಮಾಣಕ್ಕೆ ಹಣದ ಅಭಾವ ಉಂಟಾಯಿತು. ಇದರಿಂದ ವ್ಯಾಕುಲಚಿತ್ತನಾದ ರಾಜ ತನ್ನ ತಾಯಿಯನ್ನು ಪರಿಹಾರ ಕೇಳಿದಾಗ ಉಳಿದ ಒಂದೇ ನಾಣ್ಯದಿಂದ ಕಡೆಯ ೧೦೮ ದೇವಾಲಯವನ್ನು ನಿರ್ಮಿಸಲು ಸಾಧ್ಯವಿಲ್ಲ ಎಂದಾಗ ಅವನ ತಾಯಿ 'ಆ ಉಳಿದ ಒಂದು ನಾಣ್ಯವನ್ನು ನಿನ್ನ ಎದೆಯ ಮೇಲೆ ಇಟ್ಟುಕೊ' ಎಂದು ಹೇಳಿದಳಂತೆ. ಅದರಂತೆ ರಾಜ ಉಳಿದ ಒಂದೇ ಒಂದು ನಾಣ್ಯವನ್ನು ತನ್ನ ಎದೆಯ ಮೇಲೆ ಇಟ್ಟುಕೊಂಡು ಪದ್ಮಾಸನರೂಢನಾಗಿ ಕುಳಿತು ಪರಿನಿರ್ವಾಣ ಹೊಂದಿದನೆಂದು ತಿಳಿದುಬರುತ್ತದೆ. ಭೋಗನಂದೀಶ್ವರ ದೇವಾಲಯದಲ್ಲಿ ನಿರ್ಮಿಸಲಾಗಿರುವ ವಿಗ್ರಹಕ್ಕೂ ಈ ಪೌರಾಣಿಕ ಹಿನ್ನೆಲೆಗೂ ಹೋಲಿಸಿ ನೋಡಿದರೆ ಸತ್ಯಕ್ಕೆ ಸಮೀಪವಾಗಿರುವುದು ಕಂಡುಬರುತ್ತದೆ. ಆದರೆ ರಾಜನಾಗಿದ್ದ ಇವನಿಗೆ ಹಣದ ಮುಗ್ಗಟ್ಟು ಬರಲು ಹೇಗೆ ಸಾಧ್ಯ ಎನ್ನುವುದು ಯಕ್ಷಪ್ರಶ್ನೆಯಾಗಿದೆ. ಯಾವುದೇ ಸತ್ಯ ಮತ್ತು ಅಸತ್ಯವೆಂದು ನಿರ್ಧರಿಸಲು ಆಧಾರಗಳ ಕೊರತೆ ಇದೆ.

ದೇವಾಲಯದೊಳಕ್ಕೆ ಗಾಳಿ ಬೆಳಕಿನ ಪ್ರವೇಶಕ್ಕಾಗಿ ನಿರ್ಮಿಸಿರುವ ಜಾಲಂಧ್ರಗಳು ಈ ದೇವಾಲಯದ ವಾಸ್ತುಶಿಲ್ಪದ ಉತ್ಕೃಷ್ಟ ವೈಶಿಷ್ಟ್ಯವಾಗಿದೆ. ಈ ಜೋಡಿ ದೇವಾಲಯದಲ್ಲಿ ಒಟ್ಟು ೧೦ ಇಂಥ ಜಾಲಂಧ್ರಗಳಿದ್ದು, ಇವುಗಳಲ್ಲಿ ೪ ಭೋಗನಂದೀಶ್ವರ ದೇವಾಲಯದಲ್ಲೂ ೪ ಅರುಣಾಚಲೇಶ್ವರ ದೇವಾಲಯದಲ್ಲೂ ಇದ್ದು, ಉಳಿದ ಎರಡನ್ನು ಮಧ್ಯದ ಉಮಾಮಹೇಶ್ವರ ದೇವಾಲಯದ ಹಿಂದಿನ

ತೆರೆಗೋಡೆಯಲ್ಲಿಡಲಾಗಿದೆ. ಇವು ಬೇರೆ ದೇವಾಲಯಗಳ ಜಾಲಂಧ್ರಗಳಂತೆ ಇರದೆ ಇವುಗಳಲ್ಲಿ ಗಾಳಿ ಬೆಳಕು ಪ್ರವೇಶಿಸಲು ರಂಧ್ರಗಳೊಡನೆ ಸುಂದರ ವಿಗ್ರಹಗಳನ್ನು ಬಿಡಿಸಿರುವುದು ಅವುಗಳ ವಿಶಿಷ್ಟತೆಯನ್ನು ಹೆಚ್ಚಿಸಲು ಕಾರಣವಾಗಿವೆ. ಅರುಣಾಚಲೇಶ್ವರ ದೇವಾಲಯದ ನವರಂಗದ ದಕ್ಷಿಣ ಕಡೆಯ ಜಾಲಂಧ್ರದಲ್ಲಿ ತಾಂಡವೇಶ್ವರನ ವಿಗ್ರಹವಿದ್ದು, ಅರ್ಧಪಾದದ ಪೀಠದ ಮೇಲೆ ಹಳೆಯ ಶಿಲಾಶಾಸನವಿದ್ದು, ಬಹುಶಃ ಇದು ಶಿಲ್ಪಿಯ ಬಗ್ಗೆ ತಿಳಿಸುತ್ತದೆ ಎಂದು ಊಹಿಸಲಾಗಿದೆ. ಉತ್ತರ ಕಡೆಯ ಜಾಲಂಧ್ರದಲ್ಲಿ ಬಳ್ಳಿಗಳ ೩ ಸುರುಳಿಗಳನ್ನು ಬಿಡಿಸಲಾಗಿದ್ದು, ಪ್ರತಿ ಸುರುಳಿಯ ಮಧ್ಯೆ ನೃತ್ಯ ಭಂಗಿಯ ಸ್ತ್ರೀಯ ಮತ್ತು ಹಿಮ್ಮೇಳದವರ ಚಿತ್ರಗಳನ್ನು ಕೊರೆದಿರುವುದು ಕಲಾತ್ಮಕವಾಗಿದೆ. ಇದೇ ದೇವಾಲಯದ ಸುಖನಾಸಿಯ ದಕ್ಷಿಣದ ಜಾಲಂಧ್ರದಲ್ಲಿ ಸುರುಳಿ ಸುತ್ತಿರುವ ಬಳ್ಳಿಗಳ ಮಧ್ಯೆ ವಿವಿಧ ಭಂಗಿಗಳಲ್ಲಿ ಗುಜ್ಜಾರಿಗಳನ್ನು ಬಿಡಿಸಲಾಗಿದೆ. ಉತ್ತರದ ಕಡೆಯ ಜಾಲಂಧ್ರದಲ್ಲಿ ನವಿಲಿನ ಮೇಲಿ ಕುಳಿತ ಸುಬ್ರಹ್ಮಣ್ಯನನ್ನು ಬಿಡಿಸಲಾಗಿದೆ. ನವರಂಗದ ಉತ್ತರದ ಜಾಲಂದ್ರದಲ್ಲಿ ೩ ಗುಜ್ಜಾರಿಗಳ ೩ ಸಾಲುಗಳಿದ್ದು ಸಾದಾ ಪಟ್ಟಿಯೊಂದರಿಂದ ಬೇರ್ಪಡಿಸಲಾಗಿದೆ. ಸುಕನಾಸ ಮತ್ತು ನವರಂಗಗಳ ಇಕ್ಕೆಲದ ಗೋಡೆ ಮಧ್ಯಭಾಗದಲ್ಲಿ ಜಾಲಂಧ್ರಗಳಿದ್ದು, ಇವುಗಳಲ್ಲಿ ಮಹಿಷಿನಿಯ ಎರಡು ವಿಭಿನ್ನ ರೀತಿಯ ಶಿಲ್ಪಗಳು ದೇವಾಲಯದ ಜಾಲಂಧ್ರದಲ್ಲಿರುವ ದುರ್ಗಿಯ ಶಿಲ್ಪ ತಮಿಳು ಸಂಪ್ರದಾಯದ ರೀತಿಯಲ್ಲಿ ಕಾಣಬಹುದು. ಚತುರ್ಭುಜಳಾದ ದುರ್ಗಿ ಶಂಖ, ಚಕ್ರವನ್ನು ಹಿಡಿದು, ಕುಚಬಂಧವನ್ನು ಧರಿಸಿ ಎಮ್ಮೆಯ ತಲೆಯ ಮೇಲೆ ಸಮಭಂಗಿಯಲ್ಲಿ ನಿಂತಿದ್ದಾಳೆ. ಇದೇ ವಿಷಯವನ್ನು ಕೈಪಿಡಿಯ ಗೋಡೆಯ ಮೇಲೆ ಚಾಳುಕ್ಯ ಶೈಲಿಯ ರೀತಿ ಕಂಡಿರಿಸಲಾಗಿದೆ. ಇದರಲ್ಲಿ ಎಮ್ಮೆಯ ಕಾಯದ ಅಸುರನನ್ನು ಕಾಲಿನಲ್ಲಿ ಮೆಟ್ಟಿ ಶೂಲದಿಂದ ಇರಿದು ಕೊಲ್ಲುತ್ತಿದ್ದಾಳೆ. ತಮಿಳು ಮತ್ತು ಕರ್ನಾಟಕ ಶೈಲಿಯ ಪದ್ಧತಿಗಳನ್ನು ಒಂದೇ ದೇವಾಲಯದಲ್ಲಿ ಕಾಣಬಹುದು.[೬]

ಮುಖಮಂಟಪದಿಂದ ಪಾತಾಳಂಕಣಕ್ಕೆ ಹೋಗುವ ಮೆಟ್ಟಿಲುಗಳ ಪಕ್ಕ ಸುಮಾರು ೫ ಅಡಿ ವ್ಯಾಸದ ೧೦ ಅಡಿ ಎತ್ತರದ ಒಂದೂ ಕಾಲು ಅಡಿ ತ್ರಿಜ್ಯವುಳ್ಳ ಕಲ್ಲಿನ ಛತ್ರಿ ಇದೆ. ಪಾತಾಳಾಂಕಣಕ್ಕೆ ಮತ್ತು ತೆರೆದ ವರಾಂಡವನ್ನು ಸುಂದರವಾಗಿ ಸಿಂಗರಿಸಿರುವ ೩ ಅಡಿ ಎತ್ತರದ ತಳಹದಿಯ ಮೇಲೆ ನಿರ್ಮಿಸಿದ್ದು, ಉತ್ತರ ದಕ್ಷಿಣ ಮತ್ತು ಪೂರ್ವಗಳ ಕಡೆಯಿಂದ ದ್ವಾರಗಳನ್ನು ಇಡಲಾಗಿದೆ. ಈ ಜೋಡಿ ದೇವಾಲಯಗಳ ಮಧ್ಯೆ ಉಮಾಮಹೇಶ್ವರಿಯ ಗುಡಿಯೆಂದು ಕರೆಯುವ ಗರ್ಭಗುಡಿಯಾಕಾರದಲ್ಲಿ ಒಂದು ಚಿಕ್ಕ ಗುಡಿಯಿದೆ. ಇದು ಅರುಣಾಚಲೇಶ್ವರ ಮತ್ತು ಭೋಗನಂದೀಶ್ವರ ದೇವಾಲಯಗಳ ನವರಂಗಗಳ ಅಕ್ಕಪಕ್ಕದಲ್ಲಿ ಒಂದೇ ನೇರದಲ್ಲಿದ್ದು, ಇದರ ಸುತ್ತಲೂ ಪ್ರದಕ್ಷಿಣೆ ಬರಲು ಅನುಕೂಲವಾಗುವಂತೆ ಸುಮಾರು ೨ ಅಡಿ ಅಗಲದ ಸ್ಥಳಾವಕಾಶವನ್ನು ಕಲ್ಪಿಸಲಾಗಿದೆ. ಇದರಲ್ಲಿ ಭೋಗನಂದೀಶ್ವರ ದೇವಾಲಯಕ್ಕೆ ಸೇರಿದ ಶಿವ ಮತ್ತು ಪಾರ್ವತಿಯರ ವಿಗ್ರಹಗಳನ್ನು ಇಡಲಾಗಿದೆ.

ಈ ಗುಡಿಯ ಹೊರ ಗೋಡೆಗಳ ಮೇಲೆ ೨ ಅಡಿ ಅಗಲದ ಚಿತ್ರಪಟ್ಟಿಕೆ ಇದೆ. ಇದರ ತುಂಬ ಶಿವ ಪಾರ್ವತಿಯರ ಮದುವೆಗೆ ಸಂಬಂಧಿಸಿದ ಚಿತ್ರಗಳನ್ನು ಬಿಡಿಸಲಾಗಿದೆ. ಈ ಗುಡಿಯ ಹಿಂಭಾಗದಲ್ಲಿ ೨ ಜಾಲಂಧ್ರಗಳಿಂದ ಕೂಡಿದ ಸುಂದರವಾದ ತೆರೆಯ ಗೋಡೆ ಇದೆ. ಈ ಗೋಡೆಯ ಮಧ್ಯದಲ್ಲಿ ೨ ಅಡಿಗಳ ಎತ್ತರದ ಪೊದೆಗೂದಲಿನ ಪಾದರಕ್ಷೆಗಳನ್ನು ಧರಿಸಿರುವ ಅಕ್ಕಪಕ್ಕದಲ್ಲಿ ನಿಂತಿರುವ ಸ್ತ್ರೀಯರಿಂದ ಭಿಕ್ಷೆ ಸ್ವೀಕರಿಸುತ್ತಿರುವ ಭಿಕ್ಷಾಟನಾ ಮೂರ್ತಿಯ ಚಿತ್ರಣ ವಿಶಿಷ್ಟ ಆಕರ್ಷಣೆಯಿಂದ ಕೂಡಿದೆ. ಈ ಸ್ತ್ರೀಯರು ದಾರುಕವನದ ಮುನಿಯ ಪತ್ನಿಯರು. ಪುರಾಣದ ರೀತ್ಯ ಇವರು ಶಿವನ ಸೌಂದರ್ಯದಿಂದ ಮರುಳಾಗಿ ಅವನ ಸೇವೆ ಮಾಡಿ ಒಲಿಸಿಕೊಳ್ಳಲು ತಮ್ಮ ತಮ್ಮಲ್ಲೇ ಸ್ಪರ್ಧೆಗೆ ಇಳಿದಿದ್ದರೆಂದು ತಿಳಿದುಬರುತ್ತದೆ.

ಈ ಗುಡಿಯ ಮುಂಭಾಗದಲ್ಲಿ ಶಿಲ್ಪ ನೈಪುಣ್ಯತೆಯ ಪ್ರತೀಕವಾಗಿ ಕರಿಕಲ್ಲಿನ ನಾಲ್ಕು ಕಂಬಗಳಿಂದ ನಿರ್ಮಿಸಿರುವ ಕಲ್ಯಾಣ ಮಂಟಪವಿದೆ. ಇದರ ಕಂಬಗಳನ್ನು ಅಡಿಯಿಂದ ಮುಡಿಯವರೆಗೂ ಬಹಳ ಸೂಕ್ಷ್ಮವಾಗಿ ಕೆತ್ತಲಾಗಿದೆ. ಇವುಗಳ ಸುಂದರ ಕೆತ್ತನೆ ಮತ್ತು ಚಿತ್ರಗಳ ವಿವರ ವಿಸ್ತಾರ ಅಚ್ಚರಿ ಮೂಡಿಸುವಂತಿದೆ. ಹೊಯ್ಸಳ ದೇವಾಲಯಗಳನ್ನು ಮೀರಿಸುವ ಶಿಲ್ಪ ಚಾತುರ್ಯ ಇಲ್ಲಿ ಪ್ರದರ್ಶಿತವಾಗಿದೆಯೆಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಇವುಗಳ ಮೇಲೆ ಒಂದು ಅಂಗುಲ ಸ್ಥಳವನ್ನೂ ಸಹ ವ್ಯರ್ಥಗೊಳಿಸದೆ ಶಿಲ್ಪಿ ತನ್ನ ಕೈಚಳಕವನ್ನು ತೋರಿಸಿ ಕಲ್ಲಿನಲ್ಲಿ ಕಲೆಯನ್ನು ಅರಳಿಸಲಾಗಿದೆ. ಇವುಗಳ ಮೇಲೆ ಪಶುಪಕ್ಷಿಗಳ, ಗಿಡ ಬಳ್ಳಿಗಳ, ಪ್ರಾಣಿಗಳ ಮತ್ತು ಮಾನವಾಕೃತಿಗಳನ್ನು ಪರಿಪೂರ್ಣವಾಗಿ ಬಿಡಿಸಲಾಗಿದೆ. ಈ ಕಂಬಗಳು ಇಬ್ಬದಿಗಳಲ್ಲೂ ಕೊರೆದಿರುವ ಚೌಕರಸ ಕಂಬದ ಎದುರಿಗೆ ಬರುವಂತೆ ಸುಮಾರು ಎರಡುವರೆ ಅಡಿ ಎತ್ತರದ ಮೋಹಕ ಸ್ತ್ರೀಯರ ವಿಗ್ರಹಗಳನ್ನು ಬಿಡಿಸಿದ್ದು ಇವುಗಳ ಮೇಲೆ ಅತಿ ನಾಜೂಕಾಗಿ ಮತ್ತು ಸೂಕ್ಷ್ಮವಾಗಿ ಕಲ್ಲಿನ ಕಳಸವನ್ನು ಬಿಡಿಸಲಾಗಿದೆ. ಉಳಿದ ಇಕ್ಕೆಡೆಗಳಲ್ಲಿ ಪುಷ್ಪ ಕುಂಭಗಳನ್ನು ಮತ್ತು ಲತೆಗಳನ್ನು ಬಿಡಿಸಿ ಅವುಗಳ ಮೇಲೆ ಪುಟ್ಟ ಪಕ್ಷಿಗಳು ನಾನಾ ಭಂಗಿಗಳಲ್ಲಿ ಕುಳಿತಿರುವಂತೆ ಬಿಡಿಸಿರುವ ದೃಶ್ಯ ಮನೋಹರವಾಗಿದೆ. ಈ ಸ್ತ್ರೀಯರ ವಿಗ್ರಹಗಳ ಮಧ್ಯೆ ಮತ್ತೊಂದು ಚೌಕರಸ ಕಂಬವನ್ನು ಬಿಡಿಸಿದ್ದು ಅದರ ಮೇಲೆ ಮತ್ತೊಂದು ಕಲ್ಲಿನ ಕಳಶವನ್ನು ಸಹ ರಚಿಸಲಾಗಿದೆ. ಪ್ರತಿಕಂಬದ ಚಿತ್ರಣ ಕಲ್ಲಿನಲ್ಲಿ ಕಾವ್ಯ ರಚಿಸಿದಂತಿದ್ದು ಈ ಎಲ್ಲಾ ಚಿತ್ರಣ ಒಂದೇ ಕಲ್ಲಿನಲ್ಲಿ ನಿರ್ಮಿತವಾಗಿರುವುದು ಶಿಲ್ಪಿಯ ಕಲ್ಪನಾ ನೈಪುಣ್ಯಕ್ಕೆ ಕಳಸವಿಟ್ಟಂತಿದೆ. ಕಂಬಗಳ ಮೇಲ್ಛಾವಣೆಯಲ್ಲಿ ೫ ಅಡಿ ಸುತ್ತಳತೆಯಲ್ಲಿ ಅಷ್ಟದಿಕ್ಪಾಲಕರು ಮುಂತಾದ ವಿಗ್ರಹಗಳಿಂದ ಕೂಡಿದ ಭುವನೇಶ್ವರಿಯನ್ನು ಬಿಡಿಸಲಾಗಿದೆ. ಈ ಕಂಬಗಳ ಒಳ ಪಾರ್ಶ್ವಗಳಲ್ಲಿ ಇಕ್ಕೆಡೆಗಳಿಗೂ ಪಶ್ಚಿಮ ಕಂಬದಲ್ಲಿ ಶಿವಪಾರ್ವತಿ, ಉತ್ತರ ಕಂಬದಲ್ಲಿ ವಿಷ್ಣು ಮತ್ತು ಲಕ್ಷ್ಮಿ, ಪೂರ್ವ ಕಂಬದಲ್ಲಿ ಜೋಡಿ ತಲೆಗಳ ಅಗ್ನಿ-ಸ್ವಾಹಾ ದೇವಿ, ದಕ್ಷಿಣ ಕಂಬದಲ್ಲಿ ಬ್ರಹ್ಮ ಮತ್ತು ಸರಸ್ವತಿ ವಿಗ್ರಹಗಳನ್ನು ಮನೋಹರವಾಗಿ ಬಿಡಿಸಲಾಗಿದೆ.

ಈ ಕಲ್ಯಾಣ ಮಂಟಪದ ಮುಂಭಾಗದಲ್ಲಿ ೧೨ ಕರಿ ಕಲ್ಲಿನ ಸುಂದರ ಕಂಭಗಳಿಂದ ಕೂಡಿದ ಅಪೂರ್ವ ಮುಖಮಂಟಪವನ್ನು ನಿರ್ಮಿಸಲಾಗಿದೆ. ಈ ಕಂಬಗಳಲ್ಲಿ ಪ್ರತಿಯೊಂದು ಕಂಬವು ೩ ಹಂತಗಳನ್ನು ಹೊಂದಿದೆ. ಕಂಬದ ಕೈ ಭಾಗದಲ್ಲಿ ಸಿಂಹ ಚಿತ್ರವಿದೆ. ಈ ಚಿತ್ರಗಳಲ್ಲಿ ಹನುಮಂತನು ಕೊಳಲೂ ಊದುತ್ತಿರುವುದು, ಮತ್ಸ್ಯಾವತಾರಿ ವಿಷ್ಣು ಸೋಮಕನನ್ನು ಕೊಲ್ಲುತ್ತಿರುವುದು. ರಾಮ ಪೂಜಿಸುತ್ತಿರುವ ಸೈಕತ ಲಿಂಗವನ್ನು ಹನುಮಂತನು ಎತ್ತುತ್ತಿರುವುದು, ವಿಷ್ಣು ಮದ್ದಲೆಯನ್ನು ಬಾರಿಸುತ್ತಿರುವುದು ರಾವಣ ಸನ್ಯಾಸಿಯಾಗಿರುವುದು, ಕೃಷ್ಣ ಬೆಣ್ಣೆಯನ್ನು ಕದಿಯುತ್ತಿರುವ ಇವೇ ಮೊದಲಾದ ಚಿತ್ರಗಳನ್ನು ಕಾಣಬಹುದು. ಈ ಮಂಟಪದ ಮಧ್ಯೆದ ಎರಡು ಅಂಕಣದ ಸುತ್ತ ಅರ್ಧ ಅಡಿ ಅಂಗಲದ ಕರಿಕಲ್ಲಿನ ಚಿತ್ರಪಟ್ಟಿಕೆಯ ಮೇಲೆ ಇರುವ ಗೂಡುಗಳ ಮಧ್ಯೆ ಚಿತ್ರಗಳನ್ನು ಕೊರೆದಿದ್ದು ಅವುಗಳನ್ನು ಚೌಕರಸ ಕಂಬಗಳಿಂದ ಪ್ರತ್ಯೇಕಿಸಲಾಗಿದೆ. ಈ ಚಿತ್ರಗಳಲ್ಲಿ ಶಿವ, ಪಾರ್ವತಿ ಮತ್ತು ವೃಂದ, ಸಪ್ತ ಋಷಿಗಳು ಸೂರ್ಯ ಮತ್ತು ತಾಂಡವೇಶ್ವರ, ಬ್ರಹ್ಮ ಮತ್ತು ವಿಷ್ಣು ಮದ್ದಳೆಗಳೊಡನೆ ಕೂಡಿರುವ ಸಂಗೀತಗಾರರ ತಂಡ ಮುಂತಾದವರನ್ನು ರೂಪಿಸಲಾಗಿದೆ.

ಭೋಗನಂದೀಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಅರುಣಾಚಲೇಶ್ವರ ದೇವಾಲಯವು ಇದೇ ಶೈಲಿಯಲ್ಲೇ, ಹೆಚ್ಚು ಕಡಿಮೆ ಅದೇ ಕಾಲಕ್ಕೆ ನಿರ್ಮಿತವಾಗಿದೆ. ಈ ದೇವಾಲಯದಲ್ಲಿಗ್ಗ ನಂದೀಮಂಟಪ, ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿದ್ದು, ಗರ್ಭಗೃಹದ ಮೇಲೆ ಚತುಷ್ಕೋನಾಕಾರದ ಶಿಖರವಿದೆ. ದೇವಾಲಯದಲ್ಲಿರುವ ಕಮಾನುಗಳು, ಸಂಗೀತ ನುಡಿಸುತ್ತಿರುವ ಯಕ್ಷರು, ಚತುಷ್ಕೋನಾಕಾರದ ಶಿಖರ ಮುಂತಾದವುಗಳು ಪರಿಪಕ್ವವಾದ ಕಲಾಶೈಲಿಗೆ ಉತ್ತಮ ನಿದರ್ಶನಗಳಾಗಿದೆ. ಈ ದೇವಾಲಯದ ದಕ್ಷಿಣ ಭಾಗದಲ್ಲಿ ಬರುವ ೩ ಅಡಿ ಎತ್ತರದ ಸಿಂಹಮುಖದ ಸಣ್ಣಸೊಂಡಿಲ ಗಣಪತಿಯ ವಿಗ್ರಹ ವಿಶೇಷವಾಗಿದೆ. ತಾಂಡವೇಶ್ವರ ವಿಗ್ರಹದ ಪಾದದ ಮೇಲಿರುವ ಶಾಸನವು ಲಿಪಿಶಾಸ್ತ್ರದ ಆಧಾರದ ಮೇಲೆ ನೊಳಂಬರ ಕಾಲಕ್ಕೆ ಸೇರಿದ್ದು, ದೇವಾಲಯದ ಮುಂಭಾಗದಲ್ಲಿರುವ ಮುಖಮಂಟಪವು ವಿಜಯನಗರದ ಪೂರ್ವ ಅಥವಾ ಹೊಯ್ಸಳರ ನಂತರ ಕಾಲದ ರಚನೆ ಎಂದು ಖಚಿತವಾಗಿ ತಿಳಿದುಬರುತ್ತದೆ. ಕಾರಣ ಇದರಲ್ಲಿ ಬಳಪದ ಕಲ್ಲಿನ ಬಳಕೆಯಾಗಿದೆ. ಈ ಮುಖಮಂಟಪವನ್ನು ಹೊಯ್ಸಳರ ಮೂರನೇ ಬಲ್ಲಾಳನ ರಾಜ್ಯಪಾಲನಾಗಿದ್ದ ಇಳವಂಜಿ ವಾಸು ದೇವರಾಯನು ನಿರ್ಮಿಸಿರಬೇಕೆಂದು ಅಭಿಪ್ರಾಯಪಡಲಾಗಿದೆ.

ದೇವಾಲಯದ ಆವರಣದ ಮಧ್ಯಭಾಗದಲ್ಲಿ ವಿಶಾಲವಾದ ವಸಂತ ಮಂಟಪವಿದ್ದು, ಇದರ ದಕ್ಷಿಣ ಭಾಗಕ್ಕೆ ಚಿಕ್ಕ ಚಿಕ್ಕ ಬಿಡಿ ಗುಡಿಗಳಿವೆ. ದೇವಾಲಯದ ಹಿಂಭಾಗದಲ್ಲಿ ಪ್ರಕಾರದೊಳಗೆ ೩ ಗುಡಿಗಳಿದ್ದು, ಕಮಲೇಶ್ವರ ಮತ್ತು ದೇವಿಯರಾದ ಅಪೀತಾಂಬ, ಕುಚಾಂಬ ಮತ್ತು ಗಿರಿಜಾಂಬರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಲಾಗಿರುವ

ಬಾಣಲಿಂಗವು ಚೌಕರವಾದ ಗರ್ಭಗೃಹದಲ್ಲಿ ಕಂಡುಬರುತ್ತದೆ. ಇದರ ಮುಂಭಾಗದಲ್ಲಿ ಅರ್ಧಮಂಟಪ ಹಾಗೂ ನವರಂಗಳಿವೆ. ಭೋಗನಂದೀಶ್ವರ ದೇವಾಲಯದ ನವರಂಗದಲ್ಲಿರುವ ಹರೆಂಬಗಣಪತಿಯ ವಿಗ್ರಹವು ಬಹಳ ಪ್ರಚಾರವನ್ನು ಪಡೆದಿದೆ. ಇದೇ ದೇವಾಲಯದ ಪ್ರಕಾರದಲ್ಲಿ ದೇವಿಯರ ಆಲಯಗಳು, ವಸಂತ ಮಂಟಪ, ತುಲಾಭಾರ ಮಂಟಪ, ಮೆಟ್ಟಿಲುಗಳುಳ್ಳ ಚೌಕಾಕಾರದ ಶೃಂಗೀತೀರ್ಥವೆಂಬ ಕೊಳವಿದೆ.

ಒಟ್ಟಾರೆ ನಂದಿಗ್ರಾಮದ ಜೋಡಿ ದೇವಾಲಯವು ಕರ್ನಾಟಕದಲ್ಲಿ ಅತ್ಯಂತ ಸುಂದರ ದೇವಾಲಯವಾಗಿರುವುದರ ಜೊತೆಗೆ ಬಹಳ ಪ್ರಾಚೀನ ದೇವಾಲಯವಾಗಿರುವುದೆಂದು ತಿಳಿದುಬರುತ್ತದೆ. ಅತಿ ಪುರಾತನ ಆಧಾರವು ಚಿಕ್ಕಬಳ್ಳಾಪುರದ ೨೬ನೇ ಶಾಸನವಾಗಿದ್ದು, ಇದು ೯ನೇ ಶತಮಾನದ ಅಂತ್ಯ ಕಾಲದ್ದಾಗಿರುತ್ತದೆ. ಇದು ನೊಳಂಬರ ಕಾಲದ ನೊಳಂಬ ರಾಜನದಾಗಿದ್ದು ಅವನಿಂದ ದೇವಾಲಯದ ಜೀರ್ಣೋದ್ಧಾರ ಕೈಗೊಂಡ ಬಗ್ಗೆ ವಿವರಿಸುತ್ತದೆ. ನಂದಿಬಾವಿಯೊಂದರಲ್ಲಿ ಒಂದು ತ್ರಾಮಪಟ ದೊರೆತಿದ್ದು ಅದರ ಪ್ರಕಾರ ಕ್ರಿ.ಶ.೮೦೬ರಲ್ಲಿ ದೇವಾಲಯಕ್ಕೆ ರಾಷ್ಟ್ರಕೂಟರ ದೊರೆ ೩ನೇ ಗೋವಿಂದನಿಂದ ದೇವಾಲಯಕ್ಕೆ ದತ್ತಿಕೊಟ್ಟ ಬಗ್ಗೆ ಉಲ್ಲೇಖವಿದೆ. ಬಾಣವಿದ್ಯಾಧರನ ಪತ್ನಿ ರತ್ನಾವಳಿಯಿಂದ ದೇವಾಲಯವು ನಿರ್ಮಿಸಲ್ಪಟ್ಟಿತೆಂದು ತಿಳಿದುಬಂದಿದ್ದು, ಕ್ರಿ.ಶ.೮೧೦ರಲ್ಲಿ ಅದಕ್ಕೇ ದತ್ತಿ ಕೊಟ್ಟ ಬಗ್ಗೆ ಉಲ್ಲೇಖವಿದೆ.

ಯೋಗನಂದೀಶ್ವರ ದೇವಾಲಯ

ಬೆಟ್ಟದ ತುದಿಯ ಮೇಲೆ ವಿಶಾಲವಾದ ಬಂಡೆಯಿದ್ದು ಅದರ ಮೇಲೆ ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಿತವಾಗಿರುವ ದೇವಾಲಯ ಯೋಗನಂದೀಶ್ವರ ದೇವಾಲಯ, ದೇವಾಲಯದ ಸುತ್ತಲೂ ಸುಮಾರು ೧೦ ಅಡಿ ಎತ್ತರದ ಕಲ್ಲಿನಿಂದ ಮತ್ತು ಗಾರೆಯನ್ನು ಬಳಸಿ ಕಟ್ಟಿದ ಗೋಡೆಯನ್ನು ನಿರ್ಮಿಸಲಾಗಿದೆ. ಇದಕ್ಕೆ ಎರಡು ಕಡೆಯಿಂದ ದ್ವಾರಗಳಿದ್ದು, ಅದರ ಮೇಲೆ ಬೃಹದಾಕಾರದ ನಂದಿ ವಿಗ್ರಹಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ್ದು ಅವು ಈಗ ಶಿಥಿಲವಸ್ಥೆಯಲ್ಲಿದೆ. ಇಲ್ಲಿ ಶಿವನು ಯೋಗದೀಕ್ಷೆಯಲ್ಲಿರುವುದರಿಂದ ಯಾವುದೇ ಉತ್ಸವಗಳು ನಡೆಯುವುದಿಲ್ಲ ಮತ್ತು ಉತ್ಸವ ಮೂರ್ತಿಯೂ ಇಲ್ಲ. ಗರ್ಭಗುಡಿಯಲ್ಲಿ ಯೋಗ ನಂದೀಶ್ವರ, ಲಿಂಗದ ರೂಪದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ. ಗರ್ಭಗುಡಿಗೆ ಪ್ರದಕ್ಷಿಣಾಪಥ ಇಲ್ಲ. ಈ ದೇವಾಲಯ ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿದೆ. ಇದರ ನಿರ್ಮಾಣಕ್ಕೆ ಗ್ರಾನೈಟ್ ಕಲ್ಲನ್ನು ಬಳಸಲಾಗಿದೆ. ಸುಖನಾಸಿಯ ಬಾಗಿಲು ಹಿತ್ತಾಳೆ ಚೌಕಟ್ಟಿನ ಪಟ್ಟಿಯಿಂದ ಕೂಡಿದ್ದು ಅದರ ಮೇಲೆ ಅನೇಕ ಚಿತ್ರಗಳನ್ನು ಕೆತ್ತಲಾಗಿದೆ. ಅದರ ಎರಡೂ ಪಕ್ಕಗಳಲ್ಲಿಯೂ ೫ ಅಡಿ ಎತ್ತರವಿರುವ ಲೋಹದ ದ್ವಾರಪಾಲಕರ ವಿಗ್ರಹಗಳಿವೆ. ಇವುಗಳನ್ನು ವಿಜಯನಗರದ ಕೃಷ್ಣದೇವ ರಾಯನ ಕಾಣಿಕೆಯಾಗಿ ನೀಡಿದನೆಂದು ಹೇಳಲಾಗುತ್ತದೆ. ನವರಂಗದ ಉತ್ತರದ ಬಾಗಿಲಿನ ಮುಂದೆ ಕಲ್ಯಾಣ ಮಂಟಪವಿದ್ದು, ಸುಕನಾಸಿಯ ದಕ್ಷಿಣಕ್ಕೆ ಇನ್ನೊಂದು ಮಂಟಪವಿದೆ. ಇದರಲ್ಲಿ ಲಿಂಗೋದ್ಭವ

ಮೂರ್ತಿ, ದುರ್ಗ, ಮಹಿಷಾಸುರಮರ್ಧಿನಿ, ನಾಟ್ಯಗಣಪತಿ ಮುಂತಾದ ವಿಗ್ರಹಗಳಿವೆ. ಸಮಪ್ರಮಾಣದ ಆಕರ್ಷಕ ಮೂರ್ತಿಗಳಿವು. ಯೋಗನಂದೀಶ್ವರ ಗರ್ಭಗುಡಿಯ ಎಡಭಾಗಕ್ಕೆ ದೇವಿಮುಕ್ತಾಂಬೆಯ ವಿಗ್ರಹವಿದೆ. ಇದು ಸುಮಾರು ೨ ಅಡಿ ಎತ್ತರವಾಗಿದ್ದು, ಕಪ್ಪು ಶಿಲೆಯಿಂದ ಕೂಡಿದ್ದು, ಉದ್ಭವ ಮೂರ್ತಿಯ ರೂಪದಲ್ಲಿದೆ. ಬೆಟ್ಟದ ಮೇಲೆ ತಪಸ್ಸು ಮಾಡಿ ಮುಕ್ತಿ ಪಡೆದಳಾದ ಕಾರಣ ಈ ಹೆಸರು ಎಂಬುದು ಸಾಂಪ್ರದಾಯಿಕ ಕಥೆ. ಈ ದೇವಾಲಯದಲ್ಲಿ ಸುಮಾರು ೧೦ ಕಂಬಗಳಿದ್ದು ಗುಂಡಾಕಾರವಾದ ಕಪ್ಪುಕಲ್ಲಿನಿಂದ ಕೂಡಿದೆ. ಚೋಳರ ಕಾಲದ ವಾಸ್ತುಶಿಲ್ಪವನ್ನು ಕಾಣಬಹುದು. ದೇವಸ್ಥಾನಕ್ಕೆ ಹೊಂದಿಕೊಂಡಂತೆ ಹಿಂಭಾಗದಲ್ಲಿ ಒಂದು ಪುಷ್ಕರಣಿಯಿದೆ. ಇದೂ ಸಹ ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಾಣವಾಗಿದೆ. ಯೋಗನಂದೀಶ್ವರ ದೇವಾಲಯದಲ್ಲಿರುವ ಹಲವಾರು ವಿಗ್ರಹಗಳಲ್ಲಿ ಒಂದನ್ನು ಕೂಷ್ಮಾಂಡ ಋಷಿಯೆಂದು ಹೇಳಲಾಗುತ್ತದೆ. ಈ ದೇವಾಲಯವನ್ನು ಪೂರ್ವಾಭಿಮುಖವಾಗಿ ನಿರ್ಮಿತ ವಾಗಿದೆ.

ಪಟ್ರೇನಹಳ್ಳಿಯ ಗೋಪಾಕೃಷ್ಣ ದೇವಾಲಯ

ಚಿಕ್ಕಬಳ್ಳಾಪುರದ ಪಟ್ರೇನಹಳ್ಳಿಯ ಗೋಪಾಲಕೃಷ್ಣ ದೇವಾಲಯವು ಆಕರ್ಷಕ ವಾಸ್ತುಶಿಲ್ಪ ಶೈಲಿಗೆ ಒಂದು ಉತ್ತಮ ನಿದರ್ಶನವಾಗಿದೆ. ದ್ರಾವಿಡ ಶೈಲಿಯ ವಾಸ್ತುರಚನೆಯನ್ನು ಹೊಂದಿರುವ ಈ ದೇವಾಲಯವು ಎತ್ತರವಾದ ರಾಯಗೋಪುರ ಸಮೇತವಾದ ಪ್ರವೇಶದ್ವಾರವನ್ನು ಹೊಂದಿದೆ. ಈ ದೇವಾಲಯವು ಗರ್ಭಗುಡಿ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದ್ದು ವಿಶಾಲವಾದ ಒಳಪ್ರಕಾರವನ್ನು ಹೊಂದಿದೆ. ನವರಂಗದ ಛತ್ತಿನಲ್ಲಿ ಕೆಳಮುಖ ಮಾಡಿರುವ ಕಮಲದ ಹೂವಿನ ಕೆತ್ತನೆ ಇದೆ. ಇಲ್ಲಿರುವ ಭಾವಣಿಯು ಕಲ್ಲಿನ ತೊಲೆಗಳ ಮೇಲೆ ಸುಂದರ ವೈಷ್ಣವ ಪುರಾಣದ ಉಬ್ಬುಶಿಲ್ಪಗಳ ಅಲಂಕಾರವಿದೆ. ಹೆಚ್ಚಾಗಿ ರಾಮಾಯಣದ ಕತೆಯನ್ನು ಪ್ರತಿನಿಧಿಸುವ ಶಿಲ್ಪಗಳೂ ಕಂಡುಬರುತ್ತವೆ. ಗೋಪಾಲಕೃಷ್ಣ ವಿಗ್ರಹವು ನಾಲ್ಕು ಕೈಗಳಲ್ಲಿ ಶಂಖ, ಚಕ್ರ ಹಾಗೂ ಕೊಳಲನ್ನು ನುಡಿಸುತ್ತಿರುವ ಸಮಭಂಗಿಯು ಆಕರ್ಷಕವಾಗಿದೆ.

ವೀರಭದ್ರಸ್ವಾಮಿ ದೇವಾಲಯ

ವೀರಭದ್ರಸ್ವಾಮಿ ದೇವಾಲಯವೊಂದು ನಂದಿಬೆಟ್ಟದ ಮೇಲಿದೆ. ನಂದಿಬೆಟ್ಟವನ್ನು ಹತ್ತಲು ೧,೪೦೦ ಮೆಟ್ಟಿಗಳು ಇದ್ದು, ಇದರ ಉತ್ತರ ದಿಕ್ಕಿಗೆ ಈ ದೇವಾಲಯ ಬರುತ್ತದೆ. ಗುಹೆಯಲ್ಲಿ ೨ ಕೊಠಡಿಗಳು ಕಂಡುಬರುತ್ತದೆ. ಒಳಗಿರುವ ಕೊಠಡಿಯಲ್ಲಿ ೪ ಅಡಿ ಎತ್ತರವಿರುವ ಕಪ್ಪುಶಿಲೆಯಿಂದ ನಿರ್ಮಿಸಲಾಗಿರುವ ವೀರಭದ್ರನ ಪ್ರತಿಮೆಯಿದೆ. ಈ ಪ್ರತಿಮೆಯು ಕ್ರಿ.ಶ.೧೪ನೆಯ ಶತಮಾನದ ಹೊಯ್ಸಳೋತ್ತರ ಶೈಲಿಯಲ್ಲಿದ್ದು ನಾಲ್ಕು ಕೈಗಳಲ್ಲಿ ಕತ್ತಿ, ಬಿಲ್ಲು, ಬಾಣ ಮತ್ತು ಗುರಾಣಿಗಳನ್ನು

ಹೊಂದಿದೆ. ವೀರಭದ್ರನ ಬಲಭಾಗದಲ್ಲಿ ದಕ್ಷಿಬ್ರಹ್ಮನ ಕಿರುಶಿಲ್ಪವಿದೆ. ಈ ಗುಹೆಯ ಪ್ರವೇಶದ್ವಾರದ ಮೇಲ್ಭಾಗದಲ್ಲಿರುವ ಕ್ರಿ.ಶ.೧೩೩೭ರ ಶಾಸನವು ಕಣ್ಣಪ್ಪರಾಯನ ಮಗ ದೇವರಾಯನು ಈ ದೇವಾಲಯದ ಕಟ್ಟಡವನ್ನು ಹಾಗೂ ಬಾಗಿಲ ದ್ವಾರಬಂಧವನ್ನು ನಿರ್ಮಿಸಿದ ಬಗ್ಗೆ ಉಲ್ಲೇಖಿಸುತ್ತದೆ.

ಒಟ್ಟಾರೆ ಈ ದೇವಾಲಯ ಗುಹಾಂತರ ದೇವಾಲಯದಂತೆ ಕಂಡುಬರುತ್ತದೆ. ಬೃಹತಾಕಾರದ ಹೆಬ್ಬಂಡೆಯನ್ನು ಕೊರೆದು ನಿರ್ಮಿಸಿರುವಂತೆ ತೋರುತ್ತದೆ.

ಗೋಪಿನಾಥಬೆಟ್ಟದ ಗೋಪಾಲಕೃಷ್ಣದೇವಾಲಯ

ನಂದಿಬೆಟ್ಟಕ್ಕೆ ಹೊಂದಿಕೊಂಡಂತಿರುವ ಗೋಪಿನಾಥಬೆಟ್ಟಕ್ಕೆ ಗೋವರ್ಧನಗಿರಿ ಎಂದೂ ಕರೆಯಲಾಗುತ್ತದೆ. ನಂದಿಕ್ಷೇತ್ರದ ಪಂಚಗಿರಿಗಳಾದ ದಿವ್ಯಗಿರಿ, ಬ್ರಹ್ಮಗಿರಿ, ನಂದಿಗಿರಿ, ವಿಷ್ಣುಗಿರಿ ಮತ್ತು ಸ್ಕಂದಗಿರಿಗಳನ್ನು ಒಳಗೊಂಡಿದೆ. ನಂದಿಗಿರಿಯ ಪೂರ್ವದ ಅಂಚಿನಲ್ಲಿ ಈ ಬೆಟ್ಟ ಬರುತ್ತದೆ. ಅಷ್ಟೊಂದು ಎತ್ತರವಲ್ಲದ ಈ ಬೆಟ್ಟವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಬಹುದು. ಗೋಪಾಲಕೃಷ್ಣನ ಆವಾಸಸ್ಥಾನ ಒಂದು ಬೃಹತ್ ಬಂಡೆಯಡಿ ಈ ಅವಾಸ ಸ್ಥಳವಾದರೂ ಪ್ರಕೃತಿ ದತ್ತ ಕೊಡುಗೆ ವಿಶಾಲ ಬಂಡೆಯ ಒಡಲನ್ನು ಕೊರೆದು ದೊಡ್ಡ ಗುಡಾರವನ್ನು ನಿರ್ಮಿಸಿರುವಂತೆ ಈ ದೇವಾಲಯ ತೋರುತ್ತದೆ. ಒಂದು ರೀತಿಯ ಗುಹಾಂತರ ದೇವಾಲಯವನ್ನು ಹೋಲುತ್ತದೆ. ಬೆಟ್ಟದ ಮೇಲೆ ಪ್ರಕೃತಿ ದತ್ತವಾಗಿ ನಿರ್ಮಾಣವಾಗಿರುವ ಗುಹೆಯಲ್ಲಿ ಪ್ರತಿಷ್ಠಾಪಿಸಲಾಗಿರುವ ಗೋಪಾಲಕೃಷ್ಣಮೂರ್ತಿ ಸುಮಾರು ೩ ಅಡಿ ಎತ್ತರವಾಗಿದೆ. ಈ ಗುಡಿಯ ಎಡಭಾಗದಲ್ಲಿ ತಾಯಿ ಯಶೋಧೆಯ ವಿಗ್ರಹವಿದ್ದು ಸುಮಾರು ೨ ಅಡಿ ಎತ್ತರವಾಗಿದೆ. ಗೋಪಿನಾಥ ಅಭಯ ಹಸ್ತನಾಗಿ ಸರ್ವರ ರಕ್ಷಣೆಗಾಗಿ ನಿಂತಿದ್ದಾನೆ. ಈ ದೇವಾಲಯದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸ್ಥಳೀಯರ ಅಭಿಪ್ರಾಯದ ಪ್ರಕಾರ ದೇವೇಂದ್ರ ಕೃಷ್ಣನ ಮೇಲಿನ ಕೋಪಕ್ಕಾಗಿ ಬೆಂಕಿಯ ಮಳೆಯನ್ನು ಸುರಿಸಿದಾಗ ಬಾಲಕೃಷ್ಣ ತನ್ನ ಗೋವುಗಳಿಗೆ ಈ ಬಂಡೆಯಡಿ ರಕ್ಷಣೆ ಕೊಟ್ಟ ಎಂಬ ಕಲ್ಪನೆ ಜನಮನದಲ್ಲಿ ಬೇರೂರಿದೆ. ಈ ಬಂಡೆಯ ಮೇಲೆ ಬಿದ್ದ ಬೆಂಕಿಯ ಮಳೆ ಕೆಳಕ್ಕೆ ಜಾರದೆ ಪಕ್ಕಕ್ಕೆ ಸರಿದು ಹೋಗಲೆಂದು ಕೃಷ್ಣ ತನ್ನ ೪ ಬೆರಳುಗಳಿಂದ ಈ ಬಂಡೆಯ ಸುತ್ತಲೂ ಆಳವಾದ ಗೆರೆ ಎಳೆದಿದ್ದಾನೆ. ಆ ಗೆರೆಗಳನ್ನು ಈಗಲೂ ಕಾಣಬಹುದು. ಬಂಡೆಯ ಸುತ್ತಲೂ ಮೂಡಿರುವ ಈ ಗೆರೆ ಮಾನವ ನಿರ್ಮಿತವಾಗಿರದೆ. ಸಹಜವಾಗಿಯೇ ಮೂಡಿದಂತಿದೆ. ಈ ಬಂಡೆಯ ಮೇಲೆ ಕ್ರಿ.ಶ.ಸುಮಾರು ೮೦೦ರ ಪ್ರಾಚೀನ ಶಾಸನವಿದ್ದು, ಇದರ ಪ್ರಾರಂಭ ಶ್ಲೋಕವು ವೃಷಭನಾಥನಿಗೆ ಅರ್ಪಣೆಯಾಗಿದೆ. ಬಂಡೆಯ ಸಮೀಪದಲ್ಲಿಯೇ ಮತ್ತೊಂದು ದೊಡ್ಡ ಬಂಡೆಯಡಿ ಒಂದು ಗುಹೆಯಿದ್ದು ಹಿಂದೆ ಇಲ್ಲಿ ಕುಮುದೇಂದ್ರ ಮುನಿ ತಪಸ್ಸು ಮಾಡುತ್ತಿದ್ದ ಎಂದು ಪ್ರತೀತಿ ಇದೆ. ಈ ಗುಹೆ ಬಹಳವೇ ಉದ್ದವಿದ್ದು ಮುನ್ನೆಚ್ಚರಿಕೆಯ ಕ್ರಮವಾಗಿ ಗುಹೆಯ ಮುಂದೆ ತಡೆಗೋಡೆಯನ್ನು ಕಟ್ಟಲಾಗಿದೆ. ಗೋಪಿನಾಥನ

ಗೋವರ್ಧನಗಿರಿ ಸನ್ನಿಧಿಯಿಂದ ಲಕ್ಷ್ಮೀ ನರಸಿಂಹ ಸ್ವಾಮಿಸನ್ನಿಧಿಗೆ ಬರುವಾಗ ಎರಡು ಬೃಹತ್ ಬಂಡೆಗಳು ಮಧ್ಯ ಸ್ವಾಭಾವಿಕವಾಗಿ ನಿರ್ಮಾಣವಾಗಿರುವ ಉದ್ದದ ಸುರಂಗ ದಾರಿಯಿದೆ. ಈ ಮಾರ್ಗದ ಮೂಲಕ ದೇವಾಲಯಕ್ಕೆ ದಾರಿಯಿದೆ.

ಉದ್ಭವ ಬೃಹತ್‌ದೇಹಿ (ಕಣಿವೆ ಬಸವ) ಬಸವ

ನಂದಿಕ್ಷೇತ್ರ ಯೋಗನಂದೀಶ್ವರ ಭೋಗನಂದೀಶ್ವರರ ಆವಾಸ ಸ್ಥಾನವಾಗಿ ಪ್ರಸಿದ್ಧಿಗೆ ಬಂದಿರುವಂತೆ, ಈಶ್ವರನ ಪ್ರಿಯವಾಹನ ನಂದಿಯೂ ಕೂಡ ಇಲ್ಲಿ ನೆಲೆಗೊಂಡು ಪೂಜೆಗೊಳ್ಳುತ್ತಿರುವುದೊಂದು ವಿಶೇಷ. ನಂದಿಬೆಟ್ಟದ ಮೇಲೆ ನೆಲ್ಲಿಕಾಯಿ ಬಸವನಾಗಿ ನೆಲೆಸಿದ್ದರೆ, ಈ ಬೆಟ್ಟದ ತಪ್ಪಲಲ್ಲಿ ಕಣಿವೆ ಬಸವನಾಗಿ ಭಕ್ತಕೋಟಿಯನ್ನು ಆಕರ್ಷಿಸುತ್ತದೆ. ನಂದಿಗ್ರಾಮ ಮತ್ತು ದೊಡ್ಡಬಳ್ಳಾಪುರ ರಸ್ತೆಯಲ್ಲಿ ಸುಲ್ತಾನ್ ಪೇಟೆ ಮಾರ್ಗವಾಗಿ ೨ ಕಿ.ಮೀ. ಅಂತರದಲ್ಲಿ ದಿವ್ಯಗಿರಿ, ಬ್ರಹ್ಮಗಿರಿ, ನಂದಿಗಿರಿ, ವಿಷ್ಣುಗಿರಿ ಮತ್ತು ಸ್ಕಂದಗಿರಿ ಈ ಪಂಚ ಗಿರಿಗಳ ಸಮೂಹದ ನಂದಿಗಿರಿ ವಿಷ್ಣುಗಿರಿಗಳ ಸಂಗಮ ಸ್ಥಾನವೇ ಕಣಿವೆ ಬಸವನ ತಾಣ. ಇವನ ಸಿರಿಯ ಮೋಡಿಗೆ ಒಳಗಾಗಿಯೇ ಬಸವ ಇಲ್ಲಿ ನೆಲಸಿರಬೇಕು ಎಂಬ ಕಲ್ಪನೆ ಮೂಡುತ್ತದೆ.

ಬೆಟ್ಟದ ಮೇಲಿನ ನೆಲ್ಲಿಕಾಯಿಬಸವ(ಸಮೀಪದಲ್ಲಿ ನೆಲ್ಲಿಕಾಯಿ ಮರ ಇರುವುದರಿಂದ ಈ ಹೆಸರು ರೂಢಿಯಾಗಿದೆ) ಗಾತ್ರದಲ್ಲಿ ಕೃಶದೇಹಿಯಾದರೆ, ಕಣಿವೆ ಬಸವ ಮಾತ್ರ ಬೃಹತ್ ದೇಹಿ. ಇದರ ಎತ್ತರ ಸುಮಾರು ೧೧ ಅಡಿಯಾದರೆ ಅಗಲ ಸುಮಾರು ೧೧ ಅಡಿಗಳು. ಉದ್ದ ಸುಮಾರು ೧೭ ಅಡಿ ಇದ್ದು ಸುತ್ತಳತೆಯೇ ಸುಮಾರು ೫೭ ಅಡಿ ಬರುತ್ತದೆ. ಮುಂಗಾಲುಗಳನ್ನು ಮಡಚಿ ಮಲಗಿಕೊಂಡಿರುವ ಬಸವನನ್ನು ಬಿಳಿಯ ಗ್ರಾನೈಟ್ ಕಲ್ಲಿನಲ್ಲಿ ಕಡೆಯಲಾಗಿದ್ದರೂ ನಿರಂತರ ಎಣ್ಣೆಯ ಲೇಪನದಿಂದ ಬಣ್ಣ ಹೊಳೆಯುವ ಕಡುಗಪ್ಪಾಗಿ ಕಾಣುತ್ತದೆ. ಮೊದಲು ಇದು ಗಂಗರ ಆಡಳಿತಕ್ಕೆ ಒಳಪಟ್ಟಿದ್ದಿತೆಂದೂ, ಮುಂದೆ ಕ್ರಿ.ಶ.೧೧ನೆ ಶತಮಾನದಲ್ಲಿ ಚೋಳರು ಗಂಗರನ್ನು ಗೆದ್ದ ಮೇಲೆ ಇದು ಶೈವಕ್ಷೇತ್ರವಾಗಿ ಪರಿವರ್ತಿಸಲಾಯಿತೆಂದು ತಿಳಿದುಬರುತ್ತದೆ. ಇದಕ್ಕೆ ಪುಷ್ಟಿ ಕೊಡುವಂತೆ ಬೆಟ್ಟದ ಮೇಲಿರುವ ಯೋಗನಂದೀಶ್ವರನಿಗೆ ಕ್ರಿ.ಶ.೧೦೪೪ರಲ್ಲಿ ಚೋಳರ ದೊರೆಯೊಬ್ಬ ಬಂಗಾರದ ಫಲಕವನ್ನು ನೀಡಿದ ಪ್ರಸ್ತಾಪವು ಚಿಕ್ಕಬಳ್ಳಾಪುರದ ೨೧ನೇ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ. ಇಂಥದೇ ಕಾಣಿಕೆಯನ್ನು ಭೋಗ ನಂದೀಶ್ವರನಿಗೆ ಕ್ರಿ.ಶ.೧೦೯೨ರಲ್ಲಿ ನೀಡಿದ ಪ್ರಸ್ತಾಪ ಚಿಕ್ಕಬಳ್ಳಾಪುರದ ೨೯ನೇ ಶಾಸನದ ರೀತ್ಯ ತಿಳಿದುಬರುತ್ತದೆ.

ಮೊದಲು ಒಂದು ಅಂಕಣದ ಚಿಕ್ಕ ಗುಡಿಯಲ್ಲಿ ಕಣಿವೆ ಬಸವನನ್ನು ಸ್ಥಾಪಿಸಲಾಗಿದ್ದಿತು. ಆಗ ಈ ಮೂರ್ತಿಯು ಚಿಕ್ಕದಾಗಿದ್ದಿತು. ಆದರೆ ಕಾಲಾನಂತರ ಈ ಕಲ್ಲು ಬಸವ ಬೆಳೆಯತೊಡಗಿದೆ. ಬರುಬರುತ್ತಾ ಒಂದಂಕಣದ ಗುಡಿಯು ತುಂಬಿ ಹೋಗಿ ಪ್ರದಕ್ಷಿಣೆ ಬರಲು ಸ್ಥಳ ಇಲ್ಲದಾಯಿತು.

ಪ್ರಳಯದ ಭವಿಷ್ಯವಾಣಿಯು ಆಗಲೇ ಜನಮನದಲ್ಲಿ ತುಂಬಿಕೊಂಡಿದ್ದುದರಿಂದ ಭೀತಗೊಂಡು ಬಸವ ಬೆಳೆಯುವುದನ್ನು ಸ್ಥಗಿತಗೊಳಿಸಲೆಂದೇ ಅದರ ಬೆನ್ನಿನ ಮೇಲೆ ಉದ್ದದ ಗಡಾರಿಗಳನ್ನು ನಾಟು ಹಾಕಲಾಗಿದೆ ಎಂಬುದು ಸ್ಥಳೀಯವಾಗಿ ರೂಢಿಯಲ್ಲಿರುವ ನಂಬಿಕೆ. ಇದು ನಿಜವೇ ಇರಬೇಕು ಎನ್ನುವಂತೆ ಬಸವನ ಬೆನ್ನಿನ ಮೇಲೆ ಒಂದೇ ನೇರದಲ್ಲಿ ನಾಲ್ಕು ಕುಳಿಗಳು ಈಗಲೂ ಕಾಣುತ್ತವೆ. ಅಲ್ಲಿಯೇ ಗಡಾರಿಗಳನ್ನು ನಾಟು ಹಾಕಲಾಗಿದೆ ಎಂದು ಹೇಳಲಾಗುತ್ತದೆ. ಹೀಗೆ ಗಡಾರಿ ನಾಟು ಹಾಕಿದ ಮೇಲೆ ಬಸವ ಈಗಲೂ ಅಡ್ಡಡ್ಡ ಬೆಳೆಯುತ್ತಿದ್ದಾನೆ ಎಂಬ ನಂಬಿಕೆ ಬೇರೂರಿದೆ. ಕಣಿವೆ ಬಸವನನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದರ ವಿಲಕ್ಷಣ ಅಡ್ಡಾಗಲ ಈ ನಂಬಿಕೆ ನಿಜವಿರಬಹುದೇನೋ ಎಂಬ ಸಂಶಯವನ್ನು ಮೂಡಿಸುವಂತಿದೆ.

ರಕ್ಷಣ ವಾಸ್ತುಶಿಲ್ಪ

ಕೋಟೆ ಎಂದರೆ ರಕ್ಷಣಾ ಆವರಣವುಳ್ಳ ಪ್ರದೇಶ ಎಂದರ್ಥ. ಕೋಟೆಯು ಒಳಗಿರುವ ವ್ಯಕ್ತಿಗಳಿಗೆ, ವಸ್ತುಗಳಿಗೆ ಭದ್ರತೆ ಮತ್ತು ರಕ್ಷಣೆಯನ್ನು ಒದಗಿಸಿಕೊಡುವಂತಹದ್ದಾಗಿದೆ. ಮುಖ್ಯವಾಗಿ ರಾಜನಿಗೆ ಮತ್ತು ರಾಜ್ಯಕ್ಕೆ ರಕ್ಷಣೆ ಒದಗಿಸುವ ಮಹತ್ವವಾದ ಸ್ಥಳವಾಗಿದೆ.[೭] ಶಿಲಾಯುಗ ಕಾಲದಿಂದಲೂ ಮಾನವನು ಗುಹೆಗಳಲ್ಲಿ ವಾಸವಾಗಿದ್ದು, ತನ್ನ ರಕ್ಷಣೆಗಾಗಿ ಸುತ್ತಲೂ ಪ್ರಕೃತಿದತ್ತವಾದ ಕಲ್ಲುಬಂಡೆಗಳಿಂದ ಆವೃತ್ತವಾದ ಸುರಕ್ಷಿತ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ವಾಸಿಸುತ್ತಿದ್ದ ರೀತಿಯನ್ನು ನಾವು ಕಾಣುತ್ತೇವೆ. ಅದೇ ರೀತಿ ರಾಜ್ಯಗಳು ಅಸ್ತಿತ್ವಕ್ಕೆ ಬರುವುದಕ್ಕಿಂತ ಮೊದಲು ಜನರು ಸಣ್ಣ ಪ್ರಾಂತ್ಯಗಳಲ್ಲಿ ವಾಸಿಸುತ್ತಿದ್ದರು. ತಮ್ಮನ್ನು ತಮ್ಮ ಸಂಪತ್ತನ್ನು ದರೋಡೆಕಾರರಿಂದ, ವೈರಿಗಳಿಂದ ಕಾಡು ಮೃಗಗಳಿಂದ ರಕ್ಷಿಸಿಕೊಳ್ಳಲು ಅವರು ತಮ್ಮ ಪ್ರಾಂತ್ಯದ ಸುತ್ತಲೂ ಎತ್ತರವಾದ ಗೋಡೆ ಕಟ್ಟಲಾರಂಭಿಸಿದರು. ಅದಕ್ಕೂ ಮೊದಲು ಮರದ ಕೊಂಬೆಗಳಿಂದಲೂ ನಂತರ ಕಾಲದಲ್ಲಿ ಮಣ್ಣಿನ ಗೋಡೆಯನ್ನು ಕಟ್ಟಲಾರಂಭಿಸಿದರು. ನಂತರ ಗ್ರಾಮಗಳು ಬೆಳೆದು ಪಟ್ಟಣಗಳಾದಂತೆ, ಇವುಗಳೆಲ್ಲವೂ ಒಟ್ಟಾಗಿ ರಾಜ್ಯ ಸ್ಥಾಪನೆಯಾದ ಮೇಲೆ ಆಳುವ ರಾಜ ತನ್ನ ರಾಜ್ಯವನ್ನು ರಕ್ಷಿಸಿಕೊಳ್ಳಲು ಕೋಟೆಗಳನ್ನು ಕಟ್ಟಲಾರಂಭಿಸಿದರು. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ರಾಜ್ಯಕ್ಕೆ ಅತ್ಯವಶ್ಯಕವಾಗಿ ಸಪ್ತಾಂಗಗಳು ಬೇಕು ಎಂದು ತಿಳಿಸಿದ್ದಾರೆ. ಅವುಗಳೆಂದರೆ ಅರಸ, ಅಮಾತ್ಯ, ದುರ್ಗ, ಕೋಶ(ಖಜಾನೆ) ರಾಷ್ಟ್ರ, ದಂಡ(ಸೈನ್ಯ) ಮತ್ತು ಮಿತ್ರ ಅಥವಾ ನೆರೆಯ ರಾಜ್ಯಗಳಾಗಿವೆ. ಒಂದು ರಾಜ್ಯವನ್ನು ಕಟ್ಟಲು ಈ ಏಳು ಮೂಲತತ್ವಗಳಲ್ಲಿ ಕೋಟೆ ಮುಖ್ಯವೆಂದು ಭಾವಿಸಲಾಗಿದೆ. ಕೋಟೆಯನ್ನು ಸಂಸ್ಕೃತದಲ್ಲಿ ದುರ್ಗ ಎಂದು ಕರೆಯಲಾಗಿದೆ. ಇದರ ಅರ್ಥ ಕ್ರೂರ ಪ್ರಾಣಿಗಳಿಂದ ಹೊರಗಿನ ಶತ್ರುಗಳಿಂದ ರಕ್ಷಿಸಿಕೊಳ್ಳಬಹುದಾದ ಸ್ಥಳ ಎಂಬುದಾಗಿದೆ. ದುರ್ಗ ಎಂಬ ಪದವು ಅಜೇಯ ಅಥವಾ ಗೆಲ್ಲಲಾಗದ ಕೋಟೆಗಳನ್ನು ಸೂಚಿಸಬಹುದಾಗಿದೆ.[೮] ಹೊಸಗನ್ನಡದಲ್ಲಿ ಕೋಟೆ ಎಂದು ಕರೆಯುವ ಈ ಪದವನ್ನು ಹಳಗನ್ನಡದಲ್ಲಿ ಕೊಂಟೆ ಎಂದೂ,

ಇಂಗ್ಲೀಷಿನಲ್ಲಿ(ಫೋರ್ಟ್) ಎಂತಲೂ ಕರೆಯುತ್ತಾರೆ. ಕೋಟೆಗೆ ದುರ್ಗ, ಜಿಲ್ಲೆ, ವಾಡಿ, ಪ್ರಾಕಾರ, ಗಡ, ಪುರ ಎಂಬ ಪದಗಳಿಂದ ಸೂಚಿಸಲಾಗುತ್ತದೆ ಕೋಟೆ ಎನ್ನುವುದು ರಕ್ಷಣೆಯ ಮತ್ತೊಂದು ಮುಖವೆಂದು ಅರ್ಥೈಸಬಹುದು. ರಾಜ್ಯಕ್ಕೆ ಮತ್ತು ರಾಜನಿಗೆ ಹಾಗೂ ರಾಜ್ಯದ ಜನತೆಗೆ ಭದ್ರತೆಯನ್ನು ಒದಗಿಸುವ ಕವಚವೆಂದರೆ ಅದು ಕೋಟೆ ಎಂದು ಹೇಳಬಹುದು. ರಕ್ಷಣೆಯ ದೃಷ್ಟಿಯಿಂದ ಕೋಟೆಗಳು ಪ್ರಾಚೀನ ಕಾಲದಿಂದಲೂ ಮಹತ್ವದ ಪಾತ್ರವಹಿಸಿದ್ದವು. ಕೋಟೆಯ ಬಗ್ಗೆ ಕಾಮಾಂಧಕನ ನೀತಿಸಾರ, ಕನಕದಾಸರ ಮೋಹನ ತರಂಗಿಣಿ, ಶುಕ್ರನೀತಿಸಾರ, ಲಿಂಗಣ್ಣ ಕವಿಯ ಕೆಳದಿ ನೃಪವಿಜಯ, ಕೌಟಿಲ್ಯನ ಅರ್ಥಶಾಸ್ತ್ರ ಮುಂತಾದ ಕೃತಿಗಳಲ್ಲಿ ಕೋಟೆಗಳ ನಿರ್ಮಾಣ ಮತ್ತು ಅವುಗಳ ಮಹತ್ವದ ಕುರಿತು ವಿವರ ನೀಡುತ್ತವೆ. ರಾಜನು ತನ್ನ ರಾಣಿ, ಪ್ರಜೆಗಳ ಮತ್ತು ಸಂಪತ್ತಿನ ರಕ್ಷಣೆಗಾಗಿ ಭದ್ರವಾದ ಗೋಡೆ ಮತ್ತು ಬಾಗಿಲುಗಳುಳ್ಳ ಕೋಟೆಯನ್ನು ಅವಶ್ಯಕವಾಗಿ ಕಟ್ಟಲೇಬೇಕೆಂದು ರಾಜನೀತಿ ಪ್ರಕಾಶನದಲ್ಲಿ ಬೃಹಸ್ಪತಿಯ ವಚನ ಉಲ್ಲೇಖಿಸುತ್ತದೆ.[೯] ಕೌಟಿಲ್ಯನ ಅರ್ಥಶಾಸ್ತ್ರವು ರಾಜನು ತನ್ನ ರಾಜ್ಯದ ಎಲ್ಲೆಯ ನಾಲ್ಕು ದಿಕ್ಕುಗಳಲ್ಲಿ ಶತೃಗಳನ್ನು ತಡೆಗಟ್ಟಲು ಸೂಕ್ತವಾದ ಕೋಟೆಗಳನ್ನು ಕಟ್ಟಬೇಕೆಂದು ತಿಳಿಸಿದ್ದಾನೆ.[೧೦] ಅಲ್ಲದೆ ಕೋಟೆಯು ಕೋಶಕ್ಕಿಂತಲೂ ಮಿಗಿಲಾದುದೆಂದು ಹೇಳುತ್ತಾನೆ. ಯುದ್ಧದಲ್ಲಿ ಸಾವಿರಾರು ಆನೆಗಳಿಂದ ಲಕ್ಷಾಂತರ ಕುದುರೆಗಳಿಂದ ನಿರ್ವಹಿಸಲಾಗದ ಕಾರ್ಯವನ್ನು ಒಬ್ಬ ರಾಜ ಕೋಟೆಯ ಸಹಾಯದಿಂದ ನಿರ್ವಹಿಸಬಲ್ಲನು ಎಂದು ಪಂಚತಂತ್ರ ತಿಳಿಸುತ್ತದೆ.[೧೧] ಮನು ಕೋಟೆಯಲ್ಲಿರುವ ಒಬ್ಬ ಯೋಧನು ಹೊರಗಿನ ನೂರು ಜನ ಯೋಧರೊಂದಿಗೂ, ನೂರು ಜನಯೋಧರು ಹತ್ತು ಸಾವಿರ ಯೋಧರೊಂದಿಗೆ ಸರಿಸಮನಾಗಿ ಕಾದಾಡಬಲ್ಲರು[೧೨] ಎಂದಿದ್ದಾನೆ. ಒಟ್ಟಾರೆ ಹೇಳುವುದಾದರೆ ಅಂದಿನ ರಾಜಕೀಯ ಮತ್ತು ಸಾಮಾಜಿಕ ಜೀವನದ ಅವಿಭಾಜ್ಯ ಅಂಗಗಳಾಗಿ ಕೋಟೆಗಳು ತಮ್ಮದೇ ಆದ ಮುಖ್ಯಪಾತ್ರವಹಿಸುತ್ತಿದ್ದನ್ನು ಕಾಣಬಹುದು.

ಕರ್ನಾಟಕವನ್ನಾಳಿದ ಅನೇಕ ರಾಜವಂಶಗಳ ಏಳಿಗೆ ಮತ್ತು ವಿನಾಶಕ್ಕೆ ಮುಖ್ಯ ಕಾರಣ ಕೋಟೆಗಳನ್ನು ವಶಪಡಿಸಿಕೊಳ್ಳುವುದಾಗಿದೆ. ಭೌಗೋಳಿಕ ಪರಿಸರಕ್ಕೆ ತಕ್ಕಂತೆ ಭೂಮಿಯ ಮೇಲೆ, ಬೆಟ್ಟದ ಮೇಲೆ, ವನದ ಮಧ್ಯೆ, ಜಲದ ಮಧ್ಯೆ ಕೋಟೆಗಳನ್ನು ಕಟ್ಟುತ್ತಿದ್ದರು. ಕೌಟಿಲ್ಯನು ನಾಲ್ಕು ಪ್ರಕಾರದ ಕೋಟೆಗಳ ಬಗ್ಗೆ ಹೇಳಿದರೆ, ಶುಕ್ರನೀತಿಸಾರ ಒಂಬತ್ತು ಬಗೆಯನ್ನು, ಮಾನಾಸಾರ ೮ ಬಗೆಯನ್ನು, ಮನುಸ್ಮೃತಿಯು ೬ ಮತ್ತು ಪಂಚತಂತ್ರವು ೮ ಬಗೆಯ ಕೋಟೆಯನ್ನು, ಮಾನಸೋಲ್ಲಾಸವು ೯ ಬಗೆಯ ಕೋಟೆಗಳನ್ನು ತಿಳಿಸುತ್ತದೆ. ವನದುರ್ಗ, ಗಿರಿದುರ್ಗ, ಜಲದುರ್ಗ, ರಾಜಧಾನಿದುರ್ಗಗಳು ಹೀಗೆ ಜನಪ್ರಿಯವಾದ ಕೋಟೆಯ ವಿಧಗಳನ್ನು ಅಥವಾ ಬಗೆಗಳನ್ನು ಕಾಣಬಹುದು.

ಕೋಟೆಯ ವಾಸ್ತುಕಲೆಯ ನಿರ್ಮಾಣದಲ್ಲಿ ಭೌಗೋಳಿಕ ನೆಲೆಯ ಹಿನ್ನೆಲೆ ಒಂದು ರೀತಿಯಾದರೆ ಆ ಕಾಲದ ರಾಜ್ಯದ ತಂತ್ರಗಾರಿಕೆ, ರಾಜಕೀಯ ಪ್ರತಿಷ್ಠೆ ಮತ್ತೊಂದು ರೀತಿಯಾಗಿದೆ. ಪ್ರಕೃತಿಯ ಸಮೃದ್ಧಿ,

ಆರ್ಥಿಕ ಸ್ಥಿತಿಗತಿ, ಸಮಕಾಲೀನ ವಾಸ್ತುಶೈಲಿಗಳ ಪರಿಚಯ, ಕಲಾಭಿರುಚಿ, ಸ್ಥಳೀಯವಾಗಿ ಲಭ್ಯವಿದ್ದ ಕಲ್ಲು, ಇಟ್ಟಿಗೆ, ಮಣ್ಣನ್ನು ಬಳಸಿ ಕೋಟೆ ನಿರ್ಮಾಣ ಮಾಡಲಾಗುತ್ತಿತ್ತು. ದೇಗುಲ ವಾಸ್ತುಕಲೆಯಂತೆ ಇದೂ ಸಂಕೀರ್ಣವಾದುದು. ಒಂದು ಕೋಟೆ ನಿರ್ಮಾಣ ಮಾಡಬೇಕಾದರೆ ನಿವೇಶನದ ಆಯ್ಕೆ, ರಕ್ಷಕಭಿತ್ತಿ, ಬುರುಜು, ಕೊಡೆತೆನೆ, ಕಂದಕ, ನೀರಿನ ಸರಬರಾಜು, ಬಳಸಿದ ಕಲ್ಲು, ಗೋಡೆ ಎತ್ತರ, ಮದ್ದಿನ ಮನೆ, ಅರಮನೆ, ನೀರಿನ ವ್ಯವಸ್ಥೆ ಈ ಎಲ್ಲಾ ಸೌಕರ್ಯಗಳು ಬೇಕಾಗಿದ್ದವು. ಕೋಟೆಗಳನ್ನು ವಾತಾವರಣ ಮತ್ತು ಸ್ಥಳಕ್ಕೆ ಅನುಗುಣವಾಗಿ ಚೌಕಾಕಾರವಾಗಿ, ವೃತ್ತಕಾರವಾಗಿ ನಿರ್ಮಿಸಿರುವುದನ್ನು ಕಾಣಬಹುದು.

ನಂದಿಬೆಟ್ಟದಲ್ಲಿ ಕಂಡುಬರುವ ಕೋಟೆಯ ಚಿಕ್ಕಬಳ್ಳಾಪುರದ ಪಾಳೇಗಾರರ ಕಾಲದಲ್ಲಿ ನಿರ್ಮಾಣವಾಗಿದೆ. ಈ ಕೋಟೆ ಈಗಲೂ ತನ್ನ ಸುಂದರ ಜೀವಂತಿಕೆಯನ್ನು ಉಳಿಸಿಕೊಂಡಿರುವುದನ್ನು ಕಾಣಬಹುದು. ಇದು ಜಿಲ್ಲಾ ಕೇಂದ್ರವಾದ ಚಿಕ್ಕಬಳ್ಳಾಪುರದಿಂದ ಸುಮಾರು ೧೩ ಕಿ.ಮೀ. ದೂರದಲ್ಲಿದೆ. ಬೆಂಗಳೂರು ಮತ್ತು ಹೈದರಬಾದ್ ರಾಷ್ಟ್ರೀಯ ಹೆದ್ದಾರಿ (NH೭) ೭ರಲ್ಲಿರುವ ಪುಟ್ಟನಗರ. ರೈಲ್ವೆ ರಸ್ತೆಯಿಂದ ಸುಮಾರು ೪ ಕಿ.ಮೀ. ದೂರದಲ್ಲಿದೆ. ನಂದಿಬೆಟ್ಟ ಕೋಟೆಯು ಗಿರಿದುರ್ಗವಾಗಿದ್ದು, ಈ ಬೆಟ್ಟವು ಮೊದಲು ಅಷ್ಟೊಂದು ಎತ್ತರವಾಗಿಲ್ಲ. ಆದರೆ ವಿಶಾಲವಾದ ೯೭ ಹೆಕ್ಟೇರ್ ವಿಸ್ತೀರ್ಣತೆಯಿಂದ ಕೂಡಿದೆ. ಈ ಬೆಟ್ಟವು ಉತ್ತರ-ದಕ್ಷಿಣವಾಗಿ ಸುಮಾರು ೧೬ ಕಿ.ಮೀ. ಪೂರ್ವ-ಪಶ್ಚಿಮವಾಗಿ ಸುಮಾರು ೧೭ ಕಿ.ಮೀ ವಿಸ್ತೀರ್ಣವನ್ನು ಹೊಂದಿದೆ. ಈ ಬೆಟ್ಟವು ಸಮುದ್ರ ಮಟ್ಟದಿಂದ ೪೮೫೦ ಅಡಿ ಎತ್ತರದಲ್ಲಿದೆ. ಶಾಸನಗಳಲ್ಲಿ ನಂದಿಬೆಟ್ಟವನ್ನು ನಂದಿಗಿರಿ, ನಂದಿದುರ್ಗ, ಕುಷ್ಮಾಂಡಗಿರಿ ಮುಂತಾದ ಹೆಸರುಗಳಿಂದ ಕರೆಯಲಾಗಿದೆ.

ನಂದಿಬೆಟ್ಟದಲ್ಲಿ ನಿರ್ಮಾಣವಾಗಿರುವ ಕೋಟೆಯನ್ನು ಮೊಟ್ಟ ಮೊದಲು ಚಿಕ್ಕಬಳ್ಳಾಪುರದ ಪಾಳೆಗಾರರಿಂದ ನಿರ್ಮಾಣವಾಗಿದ್ದು, ಸುಮಾರು ೧೫೫೨-೧೫೫೩ ಇದರ ಕಾಲವೆಂದು ಗುರುತಿಸಲಾಗಿದೆ. ಅನಂತರ ಹೈದರ್ ಮತ್ತು ಟಿಪ್ಪು ಸುಲ್ತಾನ್ ಕೋಟೆಯನ್ನು ಕಟ್ಟಿದರು. ಸ್ವಲ್ಪ ಕಾಲದವರೆಗೆ ಇದು ಮರಾಠರ ಅಧೀನದಲ್ಲಿತ್ತು. ೧೭೯೧ರಲ್ಲಿ ದುರ್ಗಮವಾದ ಈ ಕೋಟೆಯನ್ನು ಲಾರ್ಡ್‌ಕಾರ್ನ್‌ವಾಲೀಸ್‌ನ ನೇತೃತ್ವದಲ್ಲಿ ಬ್ರಿಟೀಷರು ಆಕ್ರಮಿಸಿಕೊಂಡರು. ನಂತರದ ಕಾಲದಲ್ಲಿ ಈ ಬೆಟ್ಟಕ್ಕೆ ೧೪೦೦ ಮೆಟ್ಟಿಲುಗಳ ರಸ್ತೆ ನಿರ್ಮಾಣವಾಯಿತು. ಅದಾದ ನಂತರ ಮೋಟಾರು ಗಾಡಿಗಳ ಓಡಾಟಕ್ಕೆ ಮಣ್ಣಿನ ರಸ್ತೆ ಕೂಡ ಇವರ ಕಾಲದಲ್ಲಿ ಅನುಷ್ಠಾನಕ್ಕೆ ಬಂದಿತು.

ಕೋಟೆಯ ರಚನೆ

ನಂದಿಬೆಟ್ಟದ ಕೋಟೆಯು ವ್ಯವಸ್ಥಿತವಾದ ರೀತಿಯಲ್ಲಿ ನಿರ್ಮಾಣಗೊಂಡಿದೆ. ನಮಗೆ ಸಿಕ್ಕಿರುವ ಮಾಹಿತಿಯ ಪ್ರಕಾರ ಇದರ ನಿರ್ಮಾಣ ಕಾರ್ಯ ೧೫ನೇ ಶತಮಾನ. ಈ ಕೋಟೆಯ ನಿರ್ಮಾಣಕ್ಕೆ

ಸ್ಥಳೀಯವಾಗಿ ದೊರೆಯುವಂತಹ ಗ್ರ್ಯಾನೈಟ್ ಕಲ್ಲುಗಳನ್ನು ಬಳಸಿದ್ದಾರೆ. ಕಲ್ಲು, ಗಾರೆ ಮತ್ತು ಇಟ್ಟಿಗೆಗಳನ್ನು ಬಳಸಿ ಕಟ್ಟಲಾಗಿದೆ. ಕೋಟೆಯ ನಿರ್ಮಾಣದಲ್ಲಿ ಒಂದು ವಿಶೇಷತೆಯನ್ನು ಇಲ್ಲಿ ಗಮನಿಸಬಹುದು. ಏನೆಂದರೆ ಇದು ಎರಡು ಸುತ್ತಿನಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಕೋಟೆಯ ಮುಖ್ಯ ದ್ವಾರದ ರಚನೆ ಮುಸ್ಲಿಂ ವಾಸ್ತುಶೈಲಿಯನ್ನು ಒಳಗೊಂಡಿದೆ. ದ್ವಾರದ ಹೊರಭಾಗವನ್ನು ಇಟ್ಟಿಗೆಯನ್ನು ಒಳಭಾಗಕ್ಕೆ ಕಲ್ಲುಗಳನ್ನು ಬಳಸಿ ಮುಖ್ಯದ್ವಾರವನ್ನು ಕಟ್ಟಲಾಗಿದೆ. ಮುಖ್ಯದ್ವಾರವನ್ನು ದಾಟಿ ಮುಂದಕ್ಕೆ ಹೋದಾಗ ಎದುರಾಗುವ ಎರಡನೆ ಹಂತ ಅಥವಾ ಸುತ್ತಿನ ಕೋಟೆಯಲ್ಲಿ, ಹೊರಭಾಗಕ್ಕೆ ಕಲ್ಲುಗಳನ್ನು ಮತ್ತು ಒಳಭಾಗಕ್ಕೆ ಇಟ್ಟಿಗೆಯನ್ನು ಬಳಸಿ ಕಟ್ಟಲಾಗಿರುವುದು ಕಂಡುಬರುತ್ತದೆ. ಮುಖ್ಯದ್ವಾರದ ಗೋಡೆಯ ಎತ್ತರ ಸುಮಾರು ೨೫ ಅಡಿ ಎತ್ತರವಾಗಿದೆ. ಸುತ್ತಲಿನ ಕೋಟೆ ಗೋಡೆಯ ಎತ್ತರ ೬ ೧/೨ ಅಡಿ ಎತ್ತರವಾಗಿದೆ. ಇದರಿಂದ ತಿಳಿದುಬರುವ ಅಂಶವೆಂದರೆ ಈ ಬೆಟ್ಟದ ಕೋಟೆಯನ್ನು ಒಂದೇ ರಾಜ್ಯವಂಶ ಆಳ್ವಿಕೆ ಕಾಲದಲ್ಲಿ ನಿರ್ಮಾಣವಾಗಿಲ್ಲ. ಬದಲಾಗಿ ಹಲವಾರು ರಾಜವಂಶಗಳು ಇಲ್ಲಿ ಆಳ್ವಿಕೆ ನಡೆಸಿದ್ದು, ಅವರ ಕಾಲದಲ್ಲಿ ಕೋಟೆಯನ್ನು ಭದ್ರಗೊಳಿಸಲು ಎರಡು ರೀತಿಯಲ್ಲಿ ಕೋಟೆಗೆ ಹೊಂದಿಕೊಂಡಂತೆ ಲಭ್ಯವಿರುವ ಸಾಮಗ್ರಿಗಳನ್ನು ಬಳಸಿ ಕೋಟೆ ಕಟ್ಟಿರುವುದು ಕಂಡುಬರುತ್ತದೆ. ಕೋಟೆಯು ಸುಮಾರು ೪ ಅಡಿ ಅಗಲವನ್ನು ಹೊಂದಿದೆ. ಕೆಳಭಾಗದಿಂದ ಮೇಲ್ಭಾಗದವರೆಗೂ ಒಂದೇ ಗಾತ್ರದಿಂದ ಕೂಡಿದ ಕಲ್ಲು ಮತ್ತು ಇಟ್ಟಿಗೆಯ ಬಳಸಿರುವುದು ಮಧ್ಯದಲ್ಲಿ ಗಾರೆಯನ್ನು ಉಪಯೋಗಿಸಿರುವುದು ಕಂಡುಬರುತ್ತದೆ.[೨] ಈ ಕೋಟೆಗೆ ಬಳಸಿರುವ ಇಟ್ಟಿಗೆಯ ಉದ್ದ ೧/೩ ಅಡಿ ಉದ್ದ ಅಗಲ ೧/೨ ಅಡಿ ಅಗಲದ ಸುಟ್ಟ ಇಟ್ಟಿಗೆ ಮತ್ತು ಗಾರೆಯನ್ನು ಬಳಸಲಾಗಿದೆ. ಕೋಟೆಯ ಒಳಭಾಗದಲ್ಲಿ ಪಹರೆ ಕಾಯಲು ಇಟ್ಟಿಗೆ ಮತ್ತು ಗಾರೆಯಿಂದ ಕೈಪಿಡಿ ಗೋಡೆಯನ್ನು ರಚಿಸಿದ್ದು, ಇದರಲ್ಲಿ ಅಂಬುಕಿಂಡಿ, ಬಂದೂಕು ಕಿಂಡಿಗಳನ್ನು ರಚಿಸಿದ್ದಾರೆ. ಆಯಕಟ್ಟಿನ ಪ್ರದೇಶಗಳಲ್ಲಿ ಬುರುಜುಗಳ ರಚನೆ ಕಂಡುಬರುತ್ತದೆ.[೩] ಇಲ್ಲಿ ಸುಮಾರು ೧೦ ಬುರುಜುಗಳನ್ನು ಕಾಣಬಹುದಾಗಿದೆ. ಇವುಗಳಲ್ಲಿ ಫಿರಂಗಿಗಳನ್ನು ಇಟ್ಟುಕೊಂಡು ಫಿರಂಗಿ ಕಿಂಡಿಗಳು ಕಂಡುಬರುತ್ತದೆ.

ಇತರೆ ಕಟ್ಟಡಗಳು

ಟಿಪ್ಪು ಸುಲ್ತಾನನ ವಸತಿ ಗೃಹ

ನಂದಿದುರ್ಗದ ಮೇಲೆ ನಿರ್ಮಿಸಲಾಗಿರುವ ವಸತಿಗೃಹ ಟಿಪ್ಪುಸುಲ್ತಾನನ ಬೇಸಿಗೆ ಅರಮನೆಯಾಗಿತ್ತು. ನಂದಿದುರ್ಗವು ಸೈನ್ಯವನ್ನು ಇರಿಸಲು ಅನುಕೂಲಕರವಾದ, ಹೆಸರುವಾಸಿಯಾದ ಕೋಟೆಯಿರುವ ಸ್ಥಳ. ಇದು ಸಮುದ್ರಮಟ್ಟದಿಂದ ಸುಮಾರು ೪೮೫೦ ಅಡಿ (೧೪೭ ಮೀ) ಎತ್ತರದಲ್ಲಿದೆ. ಈ ಬೆಟ್ಟದಲ್ಲಿ ಮತ್ತು ಇದರ ಸುತ್ತಮುತ್ತ ಪಂಚನದಿಗಳು ಹುಟ್ಟಿಹರಿಯುತ್ತವೆ. ಇಲ್ಲಿರುವ ಶ್ರವಣತೀರ್ಥ ಎಂಬ

ಕೊಳದ ಆಧಾರದ ಮೇಲೆ ಇದರ ಪ್ರಾಚೀನತೆಯನ್ನು ಚೈನ ಕಾಲದ್ದೆಂದು ದೃಢೀಕರಿಸಲಾಗಿದೆ. ಬೆಟ್ಟದ ಮೇಲೆ ಚಿಕ್ಕ ಬಳ್ಳಾಪುರದ ಪ್ರಧಾನ ಅಧಿಕಾರಿಗಳು ಕೋಟೆಯನ್ನು ಕಟ್ಟಿ ಬಲಪಡಿಸಿದರು. ನಂತರ ಹೈದರಾಲಿ ಮತ್ತು ಟಿಪ್ಪು ಇಬ್ಬರೂ ಕ್ರಿ.ಶ.೧೭೭೦ರಲ್ಲಿ ಈ ಕೋಟೆಯನ್ನು ಮರಾಠರ ಮಾದವರಾವ್ ರವರಿಂದ ವಶಪಡಿಸಿಕೊಂಡ ಮೇಲೆ ಮತ್ತಷ್ಟು ಬಲಪಡಿಸಿದರು.

ಟಿಪ್ಪುವಿನ ವಸತಿ ಗೃಹವು ಕೋಟೆಯ ಒಳಗಡೆ ಬೆಟ್ಟದ ಒಂದು ಶಿಖರದ ಮೇಲೆ ಕಟ್ಟಿದ್ದು, ಎರಡು ಅಂತಸ್ತಿನ ಆಯತಕಾರದ ೧೨x೭ ಮೀ ಮತ್ತು ೪೦ x ೨೩ ಅಡಿ ಅಳತೆಯ ಕಟ್ಟಡವಾಗಿದೆ. ಇಟ್ಟಿಗೆ, ಗಾರೆ ಮತ್ತು ಮರದಿಂದ ನಿರ್ಮಿಸಿರುವ ಈ ಕಟ್ಟಡವು ವಿಭಾಜಕಗಳಿಂದ ಕೂಡಿದ ಸಂಕೀರ್ಣವಾಗಿದೆ. ಪೂರ್ವದ ಕೊನೆಯಲ್ಲಿರುವ ಮೆಟ್ಟಿಲುಗಳು ವರಾಂಡಕ್ಕೆ ಮತ್ತು ಅದರ ಮೂಲಕ ಉತ್ತರದಲ್ಲಿರುವ ಕೊಠಡಿಗಳಿಗೆ ಹೋಗುತ್ತದೆ. ಗೂಡುಗಳುಳ್ಳ ಗೋಡೆಗಳ ಮೇಲೆ ವರ್ಣಚಿತ್ರಗಳನ್ನು ಬಿಡಸಲಾಗಿತ್ತು. ಈಗ ಅವುಗಳೆಲ್ಲ ಮಾಸಿ ಹೋಗಿವೆ. ಟಿಪ್ಪು ಸುಲ್ತಾನನು ಬೇಟೆಗಾಗಿ ಬಂದಾಗ ಇಲ್ಲಿ ಉಳಿದುಕೊಳ್ಳುತ್ತಿದ್ದನು.

ಗಾಂಧಿನಿಲಯ

ನಂದಿಬೆಟ್ಟದಲ್ಲಿ ನಿರ್ಮಾಣವಾಗಿರುವ ಗಾಂಧಿನಿಲಯಕ್ಕೆ ತನ್ನದೇ ಆದ ಇತಿಹಾಸವಿದೆ. ೧೭೯೧ರಲ್ಲಿ ನಂದಿಬೆಟ್ಟವು ಬ್ರಿಟಿಷರ ವಶವಾದ ನಂತರ ಸಾಕಷ್ಟು ಬದಲಾವಣೆಯನ್ನು ಕಂಡಿತು. ರಸ್ತೆಯ ನಿರ್ಮಾಣ ಇದರ ಕಾಲದಲ್ಲೆ ಮಾಡಲಾಯಿತು. ಬ್ರಿಟಿಷ್ ಅಧಿಕಾರಿಗಳು ತಮ್ಮ ಸೇನಾ ತುಕಡಿಗಳನ್ನು ಇಟ್ಟುಕೊಂಡು ವಾಸಿಸಲು ಪ್ರಾರಂಭಿಸಿದುದರ ಪರಿಣಾಮವಾಗಿ, ತಮ್ಮ ವಾಸಕ್ಕಾಗಿ ವಸತಿ ಗೃಹಗಳನ್ನು ನಿರ್ಮಿಸಿದರು. ಹೀಗೆ ನಿರ್ಮಿಸಿದ ವಸತಿ ಗೃಹಗಳಲ್ಲಿ ಕನ್ನಿಂಗ್ ಹ್ಯಾಂಲಾಡ್ಜ್ ಒಂದು. ೧೯೩೬ರಲ್ಲಿ ಹರಿಜನೋದ್ಧಾರ ನಿಧಿ ಸಂಗ್ರಹಣೆಗಾಗಿ ದಕ್ಷಿಣ ಭಾರತದಲ್ಲಿ ಪ್ರವಾಸ ಕೈಗೊಂಡಿದ್ದ ಗಾಂಧೀಜಿ, ಅನಾರೋಗ್ಯ ನಿಮಿತ್ತ ವಿಶ್ರಾಂತಿ ಪಡೆಯಲೆಂದು ೧೯೩೬ರ ಮೇ ೧೧ ರಂದು ಗಾಂಧಿ ನಂದಿಬೆಟ್ಟಕ್ಕೆ ಭೇಟಿ ನೀಡಿ ಕನ್ನಿಂಗ್ಹಾಮ್ ಲಾಡ್ಜ್‌ನಲ್ಲಿ ೧೫ ದಿನಗಳ ಕಾಲ ವಿಶ್ರಾಂತಿಗಾಗಿ ಉಳಿದುಕೊಂಡಿದ್ದರ ನೆನಪಿಗಾಗಿ ಕನ್ನಿಂಗ್ಹಾಮ್ ಲಾಡ್ಜ್‌ಗೆ ಗಾಂಧಿನಿಲಯ[೧೪] ಎಂಬ ಹೆಸರು ಬಂದಿದೆ.

ಇತ್ತೀಚೆಗೆ ಗಾಂಧಿನಿಲಯದ ಪಕ್ಕದಲ್ಲಿ ಮತ್ತೊಂದು ವಸತಿಗೃಹ ನಿರ್ಮಾಣ ಮಾಡಲಾಗಿದ್ದು, ಅದಕ್ಕೆ 'ನೆಹರು ನಿಲಯ'ವೆಂದು ಕರೆಯಲಾಗುತ್ತದೆ. ನಂದಿಬೆಟ್ಟಕ್ಕೆಂದು ಬರುವ ಪ್ರವಾಸಿಗರಿಗೆ ಉಳಿದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅದಕ್ಕೆ ನಿಗಧಿತ ಬಾಡಿಗೆಯನ್ನು ವಿಧಿಸಲಾಗುತ್ತದೆ.

ಗಾಂಧಿನಿಲಯ ಮತ್ತು ನೆಹರು ನಿಲಯದಿಂದ ಸ್ವಲ್ಪ ದೂರದಲ್ಲಿ ಬೆಟ್ಟದ ಮೇಲೆ ಒಂದು ಉಪಹಾರ ಮಂದಿರವನ್ನೂ ಇತ್ತೀಚೆಗೆ ನಿರ್ಮಿಸಲಾಗಿದ್ದು, ಬೆಟ್ಟಕ್ಕೆ ಬರುವ ನಿಸರ್ಗ ಪ್ರೇಮಿಗಳಿಗೆ ಊಟ

ಉಪಚಾರದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಹಾಗೂ ಮಕ್ಕಳ ಮನರಂಜನೆಗೆಂದು ಆಟದ ಸಾಮಗ್ರಿಗಳನ್ನು ಒಳಗೊಂಡ ಚಿಕ್ಕದಾದ ಪಾರ್ಕ ಅಥವಾ ಉದ್ಯಾನವನವನ್ನು ಇಲ್ಲಿ ಕಾಣಬಹುದು. ಬೆಟ್ಟದ ವೀಕ್ಷಣೆ ಅಥವಾ ವಿಹಾರಕ್ಕೆಂದು ಬರುವ ಜನರಿಗೆ ರಕ್ಷಣೆಯನ್ನು ಒದಗಿಸುವ ಸಲುವಾಗಿ ಆರಕ್ಷಕ ಠಾಣೆಯಿದ್ದು, ಅವರಿಗೆ ಪ್ರತ್ಯೇಕ ಕೊಠಡಿಯ ವ್ಯವಸ್ಥೆಯನ್ನು ಇಲ್ಲಿ ಕಾಣಬಹುದು.[೧೫] ಸರ್ಕಾರ ತೋಟಗಾರಿಕೆ ಇಲಾಖೆಯನ್ನು ಸ್ಥಾಪಿಸಿ ವಿವಿಧ ಬಗೆಯ ಸಸ್ಯಗಳನ್ನು ಬೆಳೆಸುವ ನರ್ಸರಿಯನ್ನು ಇಲ್ಲಿ ಪ್ರಾರಂಭಿಸಲಾಗಿದೆ.

ಕೋಟೆಗೆ ಹೊಂದಿಕೊಂಡಂತೆ ಕೋಟೆಯ ಒಳಭಾಗದಲ್ಲಿ ಪಾಳೆಗಾರರ ಕಾಲದಿಂದಲೂ ಮದ್ದುಗುಂಡುಗಳನ್ನು ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಡಲು ಮನೆಗಳನ್ನು ನಿರ್ಮಾಣ ಮಾಡಲಾಗಿದ್ದು, ಅವೆಲ್ಲ ಇಂದು ಬೆಟ್ಟದಲ್ಲಿ ವಾಸ ಮಾಡುವ ಜನರ ವಾಸದ ಮನೆಗಳನ್ನಾಗಿ ಪರಿವರ್ತಿಸಿ ಕೊಳ್ಳಲಾಗಿದೆ. ನೆಲ್ಲಿಕಾಯಿ ಬಸವಣ್ಣನ ಮಂಟಪಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಬರುವ ಬ್ರಹ್ಮಾಶ್ರಮವು ಬೃಹದಾಕಾರದ ಹೆಬ್ಬಂಡೆಯಿದ್ದು ಅದನ್ನು ಕೊರೆದು ನಿರ್ಮಿಸಿರುವ ಅಶ್ರಮವೇ ಬ್ರಹ್ಮಾಶ್ರಮ. ಈ ಗುಹೆಯಲ್ಲಿ ಶ್ರೀ ರಾಮಕೃಷ್ಣಾನಂದ ಸ್ವಾಮೀಜಿಯವರು ಸುಮಾರು ಒಂದು ತಿಂಗಳುಗಳ ಕಾಲ ಧ್ಯಾನದಲ್ಲಿದ್ದರೆಂಬ ಪ್ರತೀತಿ ಇದೆ.[೧೬] ಈ ಬಂಡೆ ಸುಮಾರು ೮೦ ರಿಂದ ೯೦ ಅಡಿ ಎತ್ತರವಾಗಿದ್ದು ಕಡಿದಾಗಿದೆ. ನಂದಿಬೆಟ್ಟ ಸುಮಾರು ೯೭ ಎಕರೆ ವಿಸ್ತೀರ್ಣ ಹೊಂದಿದ್ದು ಈ ಬೆಟ್ಟ ಮೇಲೆ ಕಂಡುಬರುವ ಕಟ್ಟಡಗಳನ್ನು ಮೇಲ್ಕಂಡಂತೆ ವಿವರಿಸಲಾಗಿದೆ.[೧೭]

ಅಡಿಟಿಪ್ಪಣಿಗಳು

೧. **ಕೌಟಿಲ್ಯನ ಅರ್ಥಶಾಸ್ತ್ರ**, ಪು.೧೦೨

೨. ಅದೇ, ಪು.೪೫

೩. ರಾಮಶೇಷನ್ ಬಿ.ಕೃ., ೧೯೮೦, **ಕರ್ನಾಟಕದ ಕೋಟೆ ಕೊತ್ತಲಗಳು**, ಪು.೯

೪. ಆರ್. ಗೋಪಾಲ್ (ಸಂ), ೨೦೦೪, **ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ನಿರ್ದೇಶಕರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ**, ಪು.೯೩

೫. ಡಾ.ಎಂ.ಎಸ್.ಕೃಷ್ಣಮೂರ್ತಿ, ೨೦೦೪, **ನಂದಿಯ ಭೋಗನಂದೀಶ್ವರ, ಅರುಣಾಚಲೇಶ್ವರ ದೇವಾಲಯಗಳು ಒಂದು ಮರುಚಿಂತನೆ**, ಪು.೯೦

೬. **ಚಿತ್ತರಂಜನ್ ಎಚ್.(ಸಂ), ಕೋಲಾರ ಜಿಲ್ಲೆ ಗೆಜೆಟಿಯರು**, ಪು.೮೮೧

೭. ರಾಮಕೃಷ್ಣ ಮೂರ್ತಿ, ೧೯೯೦, **ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ**

೮. ಪ್ರಭಾಕರ್ ಎಂ.ಎಸ್., ೧೯೯೯, **ದೇವಾಲಯಗಳ ವಾಸ್ತು ಚಂದ್ರಿಕೆ**, ಪು.೨೭

೯. ಕೃಷ್ಣ ಎಂ.ಹೆಚ್., **ಮೈಸೂರು ಗೆಜೆಟಿಯರ್**, ೧೯೩೨, ಪು.೩೫೦

೧೦. ಈಶ್ವರಶಾಸ್ತ್ರಿ ಚಿ.(ಅನು), ೧೯೮೭, ಮನುಸ್ಮೃತಿ, ಪು.೨೭೦

೧೧. ರಮೇಶ್ ಚಿ.ಗೂ, ೧೯೭೭, ಕರ್ನಾಟಕ ವಾಸ್ತುಶಿಲ್ಪ, ಪು.೩೧

೧೨. ತುಷಾರ್, ಸೆಪ್ಟೆಂಬರ್, ೨೦೦೯

೧೩. ಚಂದ್ರಶೇಖರಯ್ಯ ಬಿ.ಎಂ., ಕರ್ನಾಟಕ ಸಾಂಸ್ಕೃತಿಕ ಇತಿಹಾಸ ಪರಂಪರೆ, ೨೦೦೫, ಪು.೧೬೬

೧೪. ಜ್ಞಾನಂದ ಜಿ., ೨೦೦೨, ಶಿಲ್ಪದರ್ಶಿ ಸಂಪುಟ-೨, ಪು.೧೭

೧೫. ಅಪರ್ಣ ಕೂ.ಸ., ೧೯೯೯, ದೇವಾಲಯ ವಾಸ್ತುಶಿಲ್ಪ ಪರಿಚಯ, ಪು.೨

೧೬. ರಾಧಾಕೃಷ್ಣಮೂರ್ತಿ, ಇತಿಹಾಸದರ್ಶನ, ಪು.೧೫೮

೧೭. ತಿಪ್ಪೇಸ್ವಾಮಿ ಎಸ್., ರಕ್ಷಣಾ ವಾಸ್ತುಶಿಲ್ಪ, ೨೦೦೪, ಪು.೮,೧೨

ಅಧ್ಯಾಯ ೫

ಮೂರ್ತಿಶಿಲ್ಪ

೫

ಮೂರ್ತಿಶಿಲ್ಪ

ದೇವತಾರಾಧನೆ ಮತ್ತು ದೇವಾಲಯಗಳ ನಿರ್ಮಾಣಕಾರ್ಯ ಭಾರತದಲ್ಲಿ ಯಾವಾಗ ಆರಂಭವಾಯಿತೋ ಅಂದಿನಿಂದಲೂ, ದೇವತಾಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ನಡೆದುಕೊಂಡುಬಂದಿದೆ ಎಂದು ಹೇಳಬಹುದು. ವಾಸ್ತುಶಿಲ್ಪಗಳಷ್ಟೇ ಪ್ರಾಮುಖ್ಯತೆಯನ್ನು ಮೂರ್ತಿಶಿಲ್ಪಗಳು ಸಹ ಹೊಂದಿವೆ. ದೇವಾಲಯಗಳ ಸೌಂದರ್ಯವನ್ನು ಹೆಚ್ಚಿಸಲು ಶಿಲ್ಪಗಳು ತುಂಬಾ ಸಹಕಾರಿಯಾಗಿವೆ. ಇವು ಸಹಮತ ಧರ್ಮಗಳ ತಳಹದಿಯ ಮೇಲೆ ಹುಟ್ಟಿಕೊಂಡಿರುವಂತಹವು. ಒಂದು ನೈಜ ಅಥವಾ ಕಾಲ್ಪನಿಕ ಆಕೃತಿಯನ್ನು ರಚಿಸಲು ಒಂದು ಮಾಧ್ಯಮ ಅವಶ್ಯಕ. ಶಿಲ್ಪವನ್ನು ಕಂಡರಿಸುವುದರ ಮೂಲಕ ಕಲ್ಪನೆಯು ನೈಜತೆಯನ್ನು ಪಡೆಯುತ್ತದೆ. ಶಿಲ್ಪವೆನ್ನುವುದು ಉದ್ದ, ಅಗಲ ಹಾಗೂ ದಪ್ಪಗಳೆಂಬ ಮೂರು ಮಾನಗಳನ್ನು ಹೊಂದಿರುತ್ತದೆ. ಇವುಗಳಲ್ಲಿ ಬಿಡಿ ಶಿಲ್ಪಗಳು, ಕಂಬ, ಭಿತ್ತಿ ಹಾಗೂ ಶಿಖರಗಳಲ್ಲಿರುವ ಉಬ್ಬುಶಿಲ್ಪಗಳು ಹಾಗೂ ಶಿಲಾಫಲಕಗಳು ಮೇಲೆ ಕೆತ್ತಿದ ಆಕೃತಿಗಳೆಲ್ಲವೂ ಶಿಲ್ಪಗಳಲ್ಲಿಯೇ ಬರುತ್ತವೆ. ಶಿಲ್ಪಗಳನ್ನು ಮುಖ್ಯವಾಗಿ ಶಿಲೆ, ಮರ, ಲೋಹ, ಮಣ್ಣು ಹಾಗೂ ಮೇಣಗಳಿಂದ ತಯಾರಿಸುತ್ತಾರೆ. ಮೂರ್ತಿಶಿಲ್ಪಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಮೂರ್ತಿಶಾಸ್ತ್ರ ಎಂದು ಕರೆಯುತ್ತಾರೆ. ಮೂರ್ತಿಶಿಲ್ಪವನ್ನು ಬಿಂಬ, ಪ್ರತಿಕೃತಿ, ವಿಗ್ರಹ, ಪ್ರತಿಮಾ, ಶಿಲ್ಪ, ಮೂರ್ತಿ ಮುಂತಾದ ಸಮಾನಾರ್ಥ ಪದಗಳಿಂದ ಕರೆಯುತ್ತಾರೆ. ಶಾಸ್ತ್ರೀಯ ನಿರೂಪಣೆಯ ಪ್ರಕಾರ ಮೂರ್ತಿಯ ಒಂದು ರೂಪ ಒಂಬತ್ತು ಅಂಗಗಳನ್ನು ಒಳಗೊಂಡಿರುತ್ತದೆ. ಅವೆಂದರೆ ನ್ಯಾಸ, ಅಲಂಕಾರ, ಮುದ್ರಾ, ಆಯುಧ ಭಾಘ್ರು, ಕಕ್ಷವಾಹನ, ಉಪದೇವ್ ಶಾಸ್ತ್ರೀಯ ಸಂಪ್ರದಾಯಕ್ಕನುಗುಣವಾಗಿ ದೇವತಾ ಮೂರ್ತಿಗಳು ರೂಪುಗೊಳ್ಳುತ್ತವೆ. ಶಿಲ್ಪಗಳಿಗೆ ದೇವಾಲಯಗಳಿಗಿಂತ ಪುರಾತನವಾದ ಇತಿಹಾಸವಿದೆ. ಮೂರ್ತಿ ಎಂಬ ಪದವನ್ನು ಸಾಮಾನ್ಯವಾಗಿ ದೇವತಾ ವಿಗ್ರಹಗಳಿಗೆ ಪರ್ಯಾಯವಾಗಿ ಬಳಸಲಾಗುತ್ತದೆ. ಆದರೆ 'ಶಿಲ್ಪ' ದೇವತೆಗಳ ವಿಗ್ರಹವನ್ನು ರೂಪಿಸುವ ಅಥವಾ ಪ್ರತಿಮೆ (ಪ್ರತಿರೂಪ) ಅಸ್ತಿತ್ವದಲ್ಲಿರುವುದಾಗಿದೆ. ಶಿಲ್ಪಗಳು ಜೀವಂತ ಇಲ್ಲವೆ ಜಡ ವಸ್ತುಗಳ ಬಾಹ್ಯ ಆಕೃತಿಯನ್ನು ಸೂಚಿಸುತ್ತದೆ. ಮುಖ್ಯವಾಗಿ ಶಿಲ್ಪಗಳನ್ನು ಪೂಜೆ ಪುನಸ್ಕಾರಗಳಿಗೆ, ಕಲೆಗಾಗಿ ಹಾಗ೧ ಜನಸಾಮಾನ್ಯರ ಮನದನಿಯನ್ನು ತಣಿಸಲು ನಿರ್ಮಾಣ ಮಾಡುತ್ತಿದ್ದರು. ವಾಸ್ತುಶಿಲ್ಪಗಳಂತೆ

ಮೂರ್ತಿಶಿಲ್ಪಗಳನ್ನೂ ಸಹ ಕಾಲ ಹಾಗೂ ಶೈಲಿಯ ಅನ್ವಯ ಆಯಾ ಅರಸು ಮನೆತನಗಳ ಜೊತೆಗೆ ವಿವರಿಸಲಾಗಿದೆ.

ಮೂರ್ತಿಶಿಲ್ಪಗಳು ನಿರ್ದಿಷ್ಟ ಉಗಮ ಇತಿಹಾಸವನ್ನು ಗುರುತಿಸುವುದು ಕಷ್ಟ ಸಾಧ್ಯವಾದುದು. ನಡೆದ ಅಧ್ಯಯನಗಳ ಅನ್ವಯ ಭಾರತೀಯ ಶಿಲ್ಪಗಳ ಇರುವಿಕೆಯನ್ನು ಸಿಂಧೂ ನದಿಯ ಸಂಸ್ಕೃತಿಯ ನೆಲೆಗಳೊಂದಿಗೆ ಗುರುತಿಸಿದ್ದಾರೆ. ಸುಮಾರು ೫೦೦೦ ವರ್ಷಗಳ ಅವಧಿಯ ಚರಿತ್ರೆಯಿದೆ. ಈ ಅವಧಿಯಲ್ಲಿ ವಿವಿಧ ಮಾತೃವಿಗ್ರಹಗಳು, ಪಶುಪತಿ ಮೊದಲಾದ ದೇವರ ಮೂರ್ತಿಗಳ ಹಾಗೆ ವಿವಿಧ ಸ್ತ್ರೀಯರ ಮಣ್ಣಿನಿಂದ ಮಾಡಲ್ಪಟ್ಟ ವಿಗ್ರಹಗಳನ್ನು ಕಾಣಬಹುದು. ಇವು ನಂತರದ ಭಾರತೀಯ ಮೂರ್ತಿಶಿಲ್ಪಗಳ ಬೆಳವಣಿಗೆಗೆ ಪ್ರೇರಕವಾದವು. ವೇದಗಳ ಕಾಲದಲ್ಲಿ ಪ್ರಕೃತಿಯನ್ನು ಪೂಜಿಸುತ್ತಿದ್ದರೂ ಇಂದ್ರ, ವರುಣ, ರುದ್ರ ಮೊದಲಾದ ದೇವತೆಗಳಿಗೆ ಮನುಷ್ಯಾಕೃತಿಯ ಕಲ್ಪನೆಯನ್ನು ನೀಡಿರುವುದು ತಿಂದುಬರುತ್ತದೆ.[೨] ರಾಮಾಯಣ ಹಾಗೂ ಮಹಾಭಾರತಗಳಲ್ಲಿ ದೇವಾಲಯಗಳ ಉಲ್ಲೇಖವಿರುವುದರಿಂದ ಆ ಕಾಲದಲ್ಲಿ ವಿಗ್ರಹರಾಧನೆ ಸ್ವಲ್ಪಮಟ್ಟಿಗೆ ಪ್ರಚಲಿತದಲ್ಲಿತ್ತೆಂದು ಪ್ರಾಕ್ತನ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ.[೩]

ಸಂಸ್ಕೃತದ ಪ್ರಾಚೀನ ಗ್ರಂಥಗಳಲ್ಲಿ ಶಿಲ್ಪಶಬ್ದವು ವಿಭಿನ್ನ ಅರ್ಥಗಳನ್ನು ಹೊಂದಿದೆ. ಪಾಣಿನಿಯ (ಕ್ರಿ.ಪೂ.೫೦೦) ಅಷ್ಟಧ್ಯಾಯದಲ್ಲಿ ಶಿಲ್ಪವನ್ನು 'ಚಾರು' ಎಂತಲೂ, ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ಧರ್ಮಸ್ಥಿತಿಯ' ಎಂಬ ಹೆಸರಿನ ಅಧಿಕರಣದಲ್ಲಿ 'ಕಾರುಕ'(ಶಿಲ್ಪ) ಶಿಲ್ಪಗಳ ಹೆಸರನ್ನು ಮತ್ತು ಅದರ ಕಾರ್ಯಗಳನ್ನು ಸೂಚಿಸಲಾಗಿದೆ.[೪] ನಂದಿಬೆಟ್ಟದ ಪರಿಸರವು ಪ್ರಾಚೀನ ಕಾಲದಿಂದಲೂ ಆಧ್ಯಾತ್ಮಿಕ ಮತ್ತು ದೈವಭಕ್ತಿಯನ್ನು ಜನತೆ ಒಳಗೊಂಡಿದ್ದಾರೆ ಎಂಬುದಕ್ಕೆ ಇಲ್ಲಿ ದೊರೆತಿರುವ ಮೂರ್ತಿಶಿಲ್ಪಗಳು ಸಾಕ್ಷಿಯಾಗಿವೆ. ಜೈನ ಶೈವ ಮತ್ತು ವೈಷ್ಣವ ಪಂಥಗಳಿಗೆ ಸೇರಿದ ವಿವಿಧ ಮೂರ್ತಿ ಶಿಲ್ಪಗಳು ಕಂಡುಬಂದಿದ್ದು, ಇವುಗಳನ್ನು ಶಿಲೆ, ಗಾರೆ ಮತ್ತು ಕಂಚಿನಿಂದ ಕೆತ್ತಲಾಗಿದೆ.

ಆದಿ ಇತಿಹಾಸ ಕಾಲದಲ್ಲಿ ಮೌರ್ಯರ ಶಿಲ್ಪಾಕೃತಿಗಳು ಅತ್ಯಂತ ಪ್ರಾಚೀನವಾದವು. ತನ್ನ ಪೂರ್ವಿಕರಿಗಿಂತ ಭಿನ್ನವಾಗಿ ಅಶೋಕ ಶಿಲಾಮಾಧ್ಯಮಕ್ಕೆ ಆಧ್ಯತೆಯನ್ನು ನೀಡಿದನು. ಕಲ್ಲಿನಿಂದ ಮಾಡಿದ ಮೂರ್ತಿಗಳಲ್ಲಿ ಸ್ತಂಭಗಳ ಮೇಲ್ಭಾಗದಲ್ಲಿ ವೃಷಭ, ಆನೆ, ಸಿಂಹ, ಕುದುರೆಯ ಆಕೃತಿಗಳು ಮುಖ್ಯವಾದುದಾಗಿವೆ.[೫] ಮೌರ್ಯರ ನಂತರ ಶುಂಗರು, ಕುಶಾನರು, ಕಳಿಂಗರು ಹಾಗೂ ಗುಪ್ತರ ಕಾಲದಲ್ಲಿ ಮೂರ್ತಿಶಿಲ್ಪಗಳ ರಚನೆಗೆ ಹೆಚ್ಚು ಪ್ರೋತ್ಸಾಹ ನೀಡಿದರು. ಇದೇ ಕಾಲದಲ್ಲಿ ವಿವಿಧ ಸಂಸ್ಕೃತಿಗಳ ಸಂಗಮವಾದ ಗಾಂಧಾರಶಿಲ್ಪ ಕಲೆಯು ಬೆಳವಣಿಗೆಯಾಯಿತು.[೬] ಕರ್ನಾಟಕದಲ್ಲಿ ಮೂರ್ತಿಶಿಲ್ಪ ಬೆಳವಣಿಗೆಯ ಪ್ರಾಚೀನತೆಯನ್ನು ಗಮನಿಸುವುದಾದರೆ ಕುಪ್ಪಗಲ್, ಪಿಕ್ಲಿಹಾಳ್, ಸಂಗನಕಲ್ಲು, ತೆಕ್ಕಲಕೋಟೆ, ಮುಂತಾದ ನೆಲೆಗಳಲ್ಲಿ ನಡೆಸಿದ ಉತ್ಖನನಗಳಿಂದ ನೂತನ ಶಿಲಾಯುಗ ಕಾಲದ ಸುಡಾವೆ

ಮಣ್ಣಿನ ಗೊಂಬೆಗಳು ದೊರೆತಿವೆ.[೭] ದಕ್ಷಿಣ ಭಾರತದಲ್ಲಿ ಐತಿಹಾಸಿಕ ಯುಗದಲ್ಲಿ ಶಾತವಾಹನ ಕಾಲದ ಗುಡಿಮಲ್ಲಂ, ಶಿವಲಿಂಗಂ, ಅತ್ಯುತ್ತಮ ಕೊಡುಗೆಯಾಗಿದೆ.[೮] ಮೂರ್ತಿಶಿಲ್ಪ ಕಲೆಗೆ ವಿಜಯನಗರದ ಅರಸರು, ಹೊಯ್ಸಳರು ಹಾಗೂ ಸ್ಥಳೀಯ ಪಾಳೆಯಗಾರರು ನೀಡಿದ ಕಾಣಿಕೆ ಗಣನೀಯವಾದುದು, ಆರಂಭದಿಂದಲೂ ಮಾನವನು ಶಿಲೆಯೊಂದಿಗೆ ನಿಕಟಸಂಬಂಧ ಹೊಂದಿದ್ದು, ಹಿಂದಿನಿಂದಲೂ ಶಿಲೆಯಿಂದ ಮೂರ್ತಿಗಳ ನಿರ್ಮಾಣ ಕಾರ್ಯ ಕೈಗೊಳ್ಳುತ್ತಾ ಬಂದಿದ್ದಾನೆ. ಮತ್ಸ್ಯ ಪುರಾಣ ಕಲ್ಲಿನ ಮೂರ್ತಿಯ ತಯಾರಿಕೆಯ ಬಗ್ಗೆ ನಿರ್ಧರಿಸಿದೆ. ಶಿಲೆಗಳಲ್ಲಿ ಪುರುಷಶಿಲೆ, ಸ್ತ್ರೀಶಿಲೆ, ನಪುಂಸಕಶಿಲೆಗಳಿದ್ದು ಅವುಗಳನ್ನು ಕ್ರಮವಾಗಿ ಮುಖ್ಯಮೂರ್ತಿ, ಪೀಠ ಪಿಂಡಕ ಅಥವಾ ಕೆಳಭಾಗದ ರಚನೆಗೆ ಬಳಸಬೇಕೆಂದು ತಿಳಿಸಲಾಗಿದೆ. ನಂದಿಬೆಟ್ಟ ಪರಿಸರದಲ್ಲಿ ಶಿಲೆಯಿಂದ ರಚನೆಗೊಂಡಂತಹ ಹಲವು ಮೂರ್ತಿಶಿಲ್ಪಗಳನ್ನು ನಾವು ಕಾಣಬಹುದು. ಇವುಗಳು ವಿವಿಧ ಅರಸರ ಕಾಲದಲ್ಲಿ ರಚನೆಗೊಂಡಂತಹವುಗಳಾಗಿವೆ. ಈ ಪರಿಸರದಲ್ಲಿ ಹೆಚ್ಚಾಗಿ ಶೈವಪಂಥ, ವೈಷ್ಣವ ಪಂಥಕ್ಕೆ ಸಂಬಂಧಿಸಿದ ಮೂರ್ತಿಶಿಲ್ಪಗಳು ಕಂಡುಬಂದಿವೆ. ಒಂದು ದೇವಾಲಯದ ಸೌಂದರ್ಯವನ್ನು ಇಮ್ಮಡಿಗೊಳಿಸಬೇಕೆಂದರೆ ಆ ದೇವಾಲಯದಲ್ಲಿ ಕಂಡುಬರುವ ಉಬ್ಬುಶಿಲ್ಪ ಮತ್ತು ಬಿಡಿಶಿಲ್ಪಗಳು ಬಹಳ ಪ್ರಮುಖ ಪಾತ್ರವಹಿಸುತ್ತವೆ. ಅದೇ ರೀತಿ ನಂದಿಬೆಟ್ಟ ಪರಿಸರದಲ್ಲಿ ಕಂಡುಬರುವ ದೇವಾಲಯದಲ್ಲಿ ಉಬ್ಬುಶಿಲ್ಪ ಮತ್ತು ಬಿಡಿಶಿಲ್ಪಗಳು ಹೆಚ್ಚಾಗಿ ಕಂಡುಬರುತ್ತವೆ. ರಂಗಸ್ಥಳದ ರಂಗನಾಥಸ್ವಾಮಿ ದೇವಾಲಯದಲ್ಲಿ ಕಂಡುಬರುವ ಕಂಗಳಲ್ಲಿ ಮೂರು ಹಂತದ ಚಿತ್ರ ಪಿಟೀಪುಗಳಿದ್ದು, ಇವುಗಳ ಮೇಲೆ ಆಳ್ವಾರರು, ಯೋಗನರಸಿಂಹ, ಬಾಲಕೃಷ್ಣ, ರಾಮ, ಲಕ್ಷ್ಮಣ, ಸೀತೆ, ಆಂಜನೇಯ, ವಿಷ್ವಕ್ಸೇನ, ಋಷಿಗಳು ಮುಂತಾದ ಉಬ್ಬುಶಿಲ್ಪಗಳು ಆಕರ್ಷಿಸುತ್ತವೆ. ದೇವಾಲಯದ ಮಹಾದ್ವಾರ ೧೮ ಅಡಿಗಳಿದ್ದು, ಒಳ ಮತ್ತು ಹೊರ ಅಂಚಿಗೆ ಜೋಡಿ ದ್ವಾರಬಂಧಗಳನ್ನು ಕೂಡಿಸಲಾಗಿದೆ. ಈ ದ್ವಾರ ಬಂಧಗಳ ಮೇಲೆ ಜಯ ವಿಜಯರ, ಗೋವರ್ಧನ ಗಿರಿಧಾರಿ ಕೃಷ್ಣ ಹಾಗೂ ಸುರುಳಿ ಬಳ್ಳಿಗಳ ಮಧ್ಯೆ ಗೋಪಿಕೆಯರ ಉಬ್ಬು ಚಿತ್ರಗಳನ್ನು ನಾಜೂಕಾಗಿ ಬಿಡಿಸಲಾಗಿದೆ. ಭೋನಂದೀಶ್ವರ ಮತ್ತು ಯೋಗನಂದೀಶ್ವರ ದೇವಾಲಯಗಳಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿ ಉಬ್ಬುಶಿಲ್ಪ ಮತ್ತು ಬಿಡಿಶಿಲ್ಪಗಳನ್ನು ಕಾಣಬಹುದು. ದೇವಾಲಯದ ದ್ವಾರಬಾಗಿಲು, ಗೋಡೆ, ಕಂಬಗಳು, ಜಾಲಂಧ್ರ ಗಳಲ್ಲಿಯೂ ಈ ರೀತಿಯ ಶಿಲ್ಪಗಳು ಕಂಡಬರುತ್ತವೆ. ನಂದಿಬೆಟ್ಟದ ಪರಿಸರದ ಮೂರ್ತಿಶಿಲ್ಪಗಳ ಅಧ್ಯಯನವನ್ನು ಪ್ರಮುಖವಾಗಿ ಕೆಳಕಂಡಂತೆ ವಿಂಗಡಿಸಲಾಗಿದೆ.

ಬಿಡಿ ಮತ್ತು ಉಬ್ಬುಶಿಲ್ಪಗಳು

ಲೋಹಶಿಲ್ಪ

ಗಾರೆಶಿಲ್ಪ

ಮರದ ಪ್ರತಿಮೆಗಳು

ಲೋಹಶಿಲ್ಪ

ಮಿಶ್ರಲೋಹಗಳ ಸಂಮಿಶ್ರಣದಿಂದ ಲೋಹವನ್ನು ತಯಾರಿಸಲಾಗುತ್ತದೆ. ತಾಮ್ರ, ಬೆಳ್ಳಿ, ಬಂಗಾರ, ಹಿತ್ತಾಳೆ, ಬಿಳಿಸೀಸ ಮುಂತಾದ ಲೋಹಗಳಿಂದ ತಯಾರಿಸಲ್ಪಟ್ಟ ತಾಮ್ರಲೋಹವನ್ನು ಪಂಚಲೋಹವೆನ್ನುತ್ತಾರೆ.[೯] ಜೇಡಿಮಣ್ಣಿನ ಮೂರ್ತಿಗಳಿಗೆ ಮೇಣವನ್ನು ಲೇಪಿಸಿ ಅದನ್ನು ಬಿಸಿಲಿನಲ್ಲಿ ಒಣಗಿಸಿ ನಂತರ ಸುಟ್ಟಾಗ ಉತ್ತಮ ಮೂರ್ತಿಗಳು ಸಿದ್ಧವಾಗುತ್ತವೆಂದು, ಇದೇ ವಿಧಾನದ ಮೂಲಕ ಲೋಹ ಮೂರ್ತಿಗಳನ್ನು ತಯಾರಿಸಿ ನೀರಿನಿಂದ ತೊಳೆಯಬೇಕೆಂದು ಶಿಲ್ಪಶಾಸ್ತ್ರವು ತಿಳಿಸುತ್ತದೆ.[೧೦] ಭಾರತದಲ್ಲಿ ೨ನೇ ಶತಮಾನದಲ್ಲಿ ಹರಪ್ಪ ಸಂಸ್ಕೃತಿಯ ಸ್ತ್ರೀ ಶಿಲ್ಪವೊಂದು ದೊರೆತಿದ್ದರಿಂದ ಇದರ ಪ್ರಾಚೀನತೆಯನ್ನು ಗುರುತಿಸಬಹುದಾಗಿದೆ. ನಮ್ಮ ಪೂರ್ವಜರು ಲೋಹವನ್ನು ಪುನರ್ ಬಳಕೆಗಾಗಿ ಕರಗಿಸಿ ಉಪಯೋಗಿಸುತ್ತಿದ್ದರಿಂದ ಹಳೆಯ ಲೋಹದ ವಸ್ತುಗಳು ದೊರೆಯುವುದು ಅಪರೂಪ. ದಕ್ಷಿಣ ಭಾರತದಲ್ಲೂ ಲೋಹಕಲೆ, ಸಾಕಷ್ಟು ಪ್ರವರ್ಧಮಾನವಾಗಿ ಬೆಳೆದಿದ್ದು, ತಮಿಳುನಾಡಿನ ಆದಿಚೆನ್ನಲೂರು ಉತ್ಖನನದಲ್ಲಿ ದೊರೆತಿದೆ. ಇದು ಕ್ರಿ.ಪೂ. ೨೦೦೦ರಷ್ಟು ಹಳೆಯದಾದ ಮಾತೃದೇವತೆ ಎನ್ನಲಾಗಿದೆ.[೧೧] ಕರ್ನಾಟಕದಲ್ಲಿ ಗಂಗರು ಮತ್ತು ಕದಂಬರು ನೊಳಂಬರ ಕಾಲದ ಪ್ರತಿಮೆಗಳು ಹೆಚ್ಚಾಗಿ ದೊರೆತರೂ ಅಷ್ಟೊಂದು ಅಲಂಕಾರ ಕಂಡುಬರುವುದಿಲ್ಲ. ಚಾಲುಕ್ಯರು, ಹೊಯ್ಸಳರ ಕಾಲದಲ್ಲಿ ವಾಸ್ತುಶಿಲ್ಪದ ಪರ್ವಕಾಲವಾಗಿದ್ದು, ಹಲವು ಮೂರ್ತಿಗಳು ದೊರೆತಿವೆ. ಕರ್ನಾಟಕದಲ್ಲಿ ಲೋಹಶಿಲ್ಪಗಳ ಸುವರ್ಣಯುಗವು ವಿಜಯನಗರ ಕಾಲದಲ್ಲಿ ನೋಡಬಹುದಾಗಿದೆ.[೧೨] ಈ ಶೈಲಿಯು ಪಾಳೆಗಾರರ ಕಾಲದಲ್ಲೂ ಮುಂದುವರೆಯಿತು. ಇಂತಹ ಮೂರ್ತಿಗಳನ್ನು ನಂದಿಬೆಟ್ಟ ಪರಿಸರದಲ್ಲಿ ಕಾಣಬಹುದಾಗಿದೆ.

ನಂದಿಬೆಟ್ಟದ ಮೇಲೆ ನಿರ್ಮಾಣವಾಗಿರುವ ಯೋಗನಂದೀಶ್ವರ ದೇವಾಲಯದಲ್ಲಿ ಈ ದ್ವಾರ ಪಾಲಕ ಲೋಹ ಮೂರ್ತಿಗಳು ಕಂಡುಬರುತ್ತವೆ. ದೇವಾಲಯದ ಗರ್ಭಗುಡಿಯ ಬಾಗಿಲ ಎರಡೂ ಪಕ್ಕದಲ್ಲಿ ದ್ವಾರಪಾಲಕರ ರೂಪದಲ್ಲಿ ಲೋಹಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ಮೂರ್ತಿಗಳು ೫ ಅಡಿ ಎತ್ತರವಾಗಿದ್ದು ಚತುರ್ಭುಜಗಳನ್ನು ಹೊಂದಿದೆ. ಅದರ ಎರಡು ಕೈಗಳಲ್ಲಿ ಒಂದು ಮರದ ಹಸ್ತ ಮತ್ತೊಂದು ಅಭಯ ಹಸ್ತಗಳಾಗಿದ್ದು ಉಳಿದ ಎರಡು ಕೈಗಳಲ್ಲಿ ದಂಡವನ್ನು ಹಿಡಿದಂತೆ ಕಂಡುಬರುತ್ತದೆ. ತ್ರಿಭಂಗಿಯಲ್ಲಿ ನಿಂತಿದ್ದು ಕಿರೀಟ ಮುಕುಟ ಮಣಿಹಾರಗಳನ್ನು ಒಳಗೊಂಡಿದೆ.

ಲೋಹ ಶಿಲ್ಪಗಳಿಗೆ ಸಂಬಂಧಿಸಿದಂತೆ ಭೋಗನಂದೀಶ್ವರ ದೇವಾಲಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಿಲ್ಪಗಳು ಕಂಡುಬರುತ್ತವೆ. ಇವುಗಳನ್ನು ಕೇವಲ ಉತ್ಸವ ಮತ್ತು ದೇವರ ರಥೋತ್ಸವ ಸಂದರ್ಭದಲ್ಲಿ, ಜಾತ್ರೆಯ ಸಮಯದಲ್ಲಿ ಬಳಸಲಾಗಿದ್ದು, ಉಳಿದಂತೆ ದೇವಾಲಯದ ಆವರಣದ ಒಂದು ಭಾಗದಲ್ಲಿ ಇಡಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ದಶಕಂಠ ರಾವಣನ ವಾಹನ, ಹಂಸವಾಹನ, ನಂದಿವಾಹನ, ಅಶ್ವವಾಹನ, ಗಜವಾಹನದ ಮೂರ್ತಿಗಳು ಕಂಡುಬರುತ್ತವೆ. ಇವುಗಳನ್ನು ಪಂಚ ಲೋಹದಿಂದ

ನಿರ್ಮಿಸಲಾಗಿದೆ. ಪ್ರತಿವರ್ಷ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಶಿವರಾತ್ರಿಯ ಹಬ್ಬದಂದು ನಂದಿಜಾತ್ರೆ ಸುಮಾರು ೧೫ ದಿನಗಳವರೆಗೆ ನಡೆಯುತ್ತದೆ. ಈ ಜಾತ್ರೆಯ ಸಂದರ್ಭದಲ್ಲಿ ಮೇಲೆ ಉಲ್ಲೇಖಿಸಿದ ವಾಹನಗಳ ಉತ್ಸವ ಪ್ರತಿದಿನ ಒಂದೊಂದರಂತೆ ಮೆರವಣಿಗೆ ಮಾಡಲಾಗುತ್ತದೆ.

ಇದರಲ್ಲಿ ಲೋಹದಿಂದ ನಿರ್ಮಿಸಿರುವ ದಶಕಂಠನಾದ ರಾವಣನ ವಾಹನ ವಿಶೇಷವಾಗಿದೆ. ಇದು ಸುಮಾರು ೩ ಅಡಿ ಎತ್ತರವಾಗಿದ್ದು, ಹತ್ತು ತಲೆಗಳನ್ನು ಹೊಂದಿದೆ, ಮತ್ತು ನೋಡಲು ಆಕರ್ಷಕವಾಗಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ರಾವಣನ ಉತ್ಸವ ಇಲ್ಲಿ ವಿಶೇಷವಾಗಿದೆ. ಅದರಂತೆ ನಂದಿಯವಾಹನ ವಿಶಿಷ್ಟ ವಾಗಿ ಕಂಡುಬರುತ್ತದೆ. ಇದುವರೆಗೆ ನಾವು ನಂದಿಯನ್ನು ಬಸವನ ರೂಪದಲ್ಲಿ ಕಂಡಿದ್ದೆವು. ಆದರೆ ಇಲ್ಲಿ ನಂದಿಯ ಮುಖವನ್ನು ಹೊಂದಿ ಅದರ ಎರಡೂ ಪಕ್ಕಗಳಲ್ಲಿ ಮನುಷ್ಯನ ಮುಖವನ್ನು ಹೊಂದಿ ೨ ೧/೨ ಅಡಿ ಎತ್ತರವಾಗಿದ್ದು, ನಿಂತುಕೊಂಡಿದೆ. ಇದಕ್ಕೆ ನಾಲ್ಕು ಕೈಗಳನ್ನು ಕಾಣಬಹುದು. ಈ ಶಿಲ್ಪವನ್ನು ನಾಟ್ಯದ ಭಂಗಿಯಲ್ಲಿರುವಂತೆ ನಿರ್ಮಿಸಲಾಗಿದೆ.

ಇದೇ ಪರಿಸರದಲ್ಲಿ ಕಂಡುಬರುವ ಉಮಾಮಹೇಶ್ವರ ದೇವಾಲಯದ ಮೆರವಣಿಗೆಯ ಪ್ರತಿಮೆಯನ್ನು ಲೋಹದಿಂದ ನಿರ್ಮಿಸಲಾಗಿದೆ. ದೇವರ ಉತ್ಸವ, ಜಾತ್ರೆ, ರಥೋತ್ಸವ ಸಂದರ್ಭದಲ್ಲಿ, ಉಮಾಮಹೇಶ್ವರರ ಕಲ್ಯಾಣ ಮಾಡುವ ಸಂದರ್ಭದಲ್ಲಿ ಇದನ್ನು ಬಳಸಲಾಗುತ್ತದೆ. ಟಿಪ್ಪುಸುಲ್ತಾನನ ವಸತಿ ಗೃಹದಿಂದ ಕೆಳಭಾಗದಲ್ಲಿ ಬೆಟ್ಟಕ್ಕೆ ಹೊಂದಿಕೊಂಡಂತೆ ಒಂದು ಗುಹೆ ಇದ್ದು, ವೀರಭದ್ರಸ್ವಾಮಿ ದೇವಾಲಯವಿದ್ದು, ಇಲ್ಲಿ ಸುಮಾರು ೧ ೧/೨ ಅಡಿ ಎತ್ತರದ ಲಕ್ಷ್ಮಿಯ ಲೋಹ ಮೂರ್ತಿಗಳನ್ನು ಕಾಣಬಹುದು. ಇವು ವೀರಭದ್ರಸ್ವಾಮಿಯ ಸನ್ನಿಧಿಯಾಗಿ ಇಡಲಾಗಿದ್ದು, ಇದಕ್ಕೆ ಯಾವುದೇ ಇತಿಹಾಸವಿಲ್ಲವೆಂದು ತೋರುತ್ತದೆ. ಕಾರಣ ಭಕ್ತಾದಿಗಳ ಕೊಡುಗೆ ಎಂದು ಕಂಡುಬರುತ್ತದೆ.

ಗಾರೆಶಿಲ್ಪ

ಕಟ್ಟಡ, ಕೋಟೆ, ದೇವಾಲಯ, ಶಿಲ್ಪಗಳು ಮುಂತಾದವುಗಳನ್ನು ನಿರ್ಮಿಸಲು ಗಾರೆಯನ್ನು ಬಳಸಲಾಗುತ್ತದೆ. ವಿಜಯನಗರ ಕಾಲದಲ್ಲಿ ಗಾರೆಯನ್ನು ಹೆಚ್ಚಾಗಿ ಬಳಿಸಿರುವುದನ್ನು ಕಾಣಬಹುದಾಗಿದೆ. ಕಲಾಮಾಧ್ಯಮವಾಗಿ ಗಾರೆಯು ಬೆಳೆದುದ್ದನ್ನು ಪ್ರಾಚೀನ ಕಾಲದಿಂದಲೇ ನೋಡಬಹುದಾಗಿದೆ. ಹರಪ್ಪ ಮತ್ತು ಮೆಹೆಂಜೋದಾರೋಗಳಲ್ಲಿ ಗಾರೆಯನ್ನು ಬಳಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಗಾಂಧಾರ ಶೈಲಿಯನ್ನು ಪರಿಚಯಿಸಿದ ಕುಶಾನರ ಕಾಲದಲ್ಲಿ ಬೌದ್ಧಧರ್ಮಕ್ಕೆ ಸೇರಿದ ಹಲವು ಬಿಡಿ ಆಕೃತಿಗಳು ಮತ್ತು ಕಥಾನಕ ಆಕೃತಿಗಳು ಕಂಡುಬರುತ್ತವೆ.[೧೫] ಕರ್ನಾಟಕವನ್ನಾಳಿದ ಗುಪ್ತ, ವಾಕಟಕ, ಶಾತವಾಹನರು ನಿರ್ಮಿಸಿದ್ದ ಬೌದ್ಧ, ಚೈತ್ಯ ವಿಹಾರಗಳನ್ನು ಭಿತ್ತಿಚಿತ್ರಗಳ ಹಿನ್ನೆಲೆಯ ಲೇಪನವಾಗಿ ಗಾರೆಯನ್ನು ಬಳಸಿದ್ದಾರೆ. ನಂತರ ಕಾಲದಲ್ಲಿ ಶಿಲೆಯನ್ನು ಹೆಚ್ಚಾಗಿ ಬಳಸಿದ್ದರಿಂದ ಗಾರೆಯ ಬಳಕೆ ಕಡಿಮೆಯಾಯಿತು.

ಪುನಃ ೧೫ನೇ ಶತಮಾನದಲ್ಲಿ ಮುಸ್ಲಿಂ ಆಳ್ವಿಕೆಯ ಸಂದರ್ಭದಲ್ಲಿ ಗಾರೆಯನ್ನು ಹೆಚ್ಚು ಬಳಸಿದರು. ಅವರು ಕಟ್ಟಿದ ಮಸೀದಿ, ಗೋಡೆಗಳು, ಗುಮ್ಮಟ, ಮಹಾದ್ವಾರ, ದರ್ವಾಜಗಳ ಅಲಂಕರಣಕ್ಕೆ ಬಳಸಿದರು. ಗಾರೆಯ ಉಪಯೋಗ ಕಾಲಕ್ರಮೇಣ ವಿಜಯನಗರ ಕಾಲದಲ್ಲಿ ಶೀಲೆಗೆ ಪರ್ಯಾಯವಾಗಿ ಇಟ್ಟಿಗೆಯೊಂದಿಗೆ ಪ್ರಮುಖ ಮಾಧ್ಯಮವಾಗಿ ಬಳಸಿದರು. ಗಾರೆಯನ್ನು ಮುಖ್ಯವಾಗಿ ಸ್ಥಳೀಯವಾಗಿ ಲಭ್ಯವಿರುವ ಸುಣ್ಣ, ಮರಳು, ನೀರು ಮತ್ತು ಕೆಲವು ಅಂಟು ದ್ರವಗಳಿಂದ ಲೋಳೆರಸ ಬಿಟ್ಟು ಪತ್ರೆಕಾಯಿ, ಬೆಲ್ಲ ಅಥವಾ ಮೊಟ್ಟೆಯಿಂದ ಕೂಡಿದ ಅಂಟು ದ್ರಾವಣ ರೂಪದಲ್ಲಿ ತಯಾರಿಸಿಕೊಳ್ಳಲಾಗುತ್ತಿತ್ತು. ಇವೆಲ್ಲವನ್ನು ಹದಕ್ಕೆ ತಕ್ಕಂತೆ ಹಾಕಿ ಅರೆಯಬೇಕು, ಈ ವಿಧಾನದ ಮೂಲಕ ಗಾರೆಯನ್ನು ತಯಾರಿಸಿಕೊಳ್ಳುತ್ತಿದ್ದರು.[೧೪] ಪಾಳೆಗಾರರು ಹಾಗೂ ವಿಜಯನಗರ ಕಾಲದ ಕಲಾವಿದರು ಗಾರೆಯನ್ನು ಉಪಯೋಗಿಸಿ ಕಲಾತ್ಮಕವಾದ ಆಕೃತಿಗಳನ್ನು ನಿರ್ಮಿಸಿರುವುದನ್ನು ನೋಡಬಹುದಾಗಿದೆ. ಇವು ಬಿಡಿ ಆಕೃತಿಗಳಲ್ಲಿ ಗೋಡೆಗೆ ಅಂಟಿಕೊಂಡಂತೆ ರಚಿಸಿದ್ದಾರೆ. ಹೆಚ್ಚು ಉಬ್ಬುಶಿಲ್ಪಗಳ ಮಾದರಿಯ ರಚನೆಯನ್ನು ಕಾಣಬಹುದಾಗಿದೆ.

ನಂದಿಬೆಟ್ಟದ ಮೇಲೆ ಇರುವ ಯೋಗನಂದೀಶ್ವರ ದೇವಾಲಯದಲ್ಲಿ ಈ ನಂದಿ ವಿಗ್ರಹವು ಕಂಡುಬರುತ್ತದೆ. ದೇವಾಲಯಕ್ಕೆ ಎರಡು ದ್ವಾರಗಳಿದ್ದು, ಮುಂಭಾಗದಿಂದ ದೇವಾಲಯದ ಒಳಗಡೆ ಪ್ರವೇಶವನ್ನು ನೀಡಿ ನಂತರ ದೇವಾಲಯದ ಹಿಂದಿನ ಬಾಗಿಲಿನ ಅಥವಾ ದ್ವಾರದ ಮೂಲಕ ಹೊರ ಬರಬೇಕಾಗುತ್ತದೆ. ಹಿಂಭಾಗದಲ್ಲಿರುವ ದ್ವಾರದ ಮೇಲೆ ಎಡಭಾಗದಲ್ಲಿ ಗಾರೆಯಿಂದ ನಿರ್ಮಿಸಲಾಗಿರುವ ನಂದಿವಿಗ್ರಹವನ್ನು ಕಾಣಬಹುದಾಗಿದೆ. ಇಲ್ಲಿ ನಂದಿಯ ಒಂದೇ ವಿಗ್ರಹವಿದ್ದು ಬಹುಶಃ ಉಳಿದ ಇನ್ನೊಂದು ವಿಗ್ರಹ ಶಿಥಿಲವಾಗಿರಬಹುದು. ಇದೂ ಸಹ ಶಿಥಿಲಾವಸ್ಥೆಯಲ್ಲಿದೆ. ಈ ಮೂರ್ತಿಯು ತನ್ನ ಎರಡು ಮುಂಗಾಲುಗಳನ್ನು ಮಡಚಿದೆ. ಹಣೆಯಲ್ಲಿ ಹಣೆಪಟ್ಟಿ ರಚಿಸಿದ್ದು ಭುಜವನ್ನು ಎತ್ತರವಾಗಿ ರಚಿಸಲಾಗಿದೆ. ಕೊರಳಲ್ಲಿ ಗಂಟೆಯಿದ್ದು, ಭುಜವು ಅಲಂಕಾರಿಕ ಬಟ್ಟೆಯಿಂದ ಅಲಂಕರಿಸಿದ್ದಾರೆ. ಸುಮಾರು ೨ ೧/೨ ಅಡಿ ಎತ್ತರವಾಗಿದೆ.

ರಂಗಸ್ಥಳದ ರಂಗನಾಥದೇವಾಲಯದ ಪ್ರಾಕಾರದ ಗೋಡೆಯ ಮೇಲೆ ಗರುಡ ಶಿಲ್ಪವು ಕುಳಿತಿರುವಂತೆ ರಚಿಸಲಾಗಿದೆ. ಈ ಮೂರ್ತಿಯು ತನ್ನ ಎಡ ಕಾಲನ್ನು ಮಡಚಿಕೊಂಡು ತನ್ನ ಎರಡೂ ಕೈಗಳನ್ನು ಜೋಡಿಸಿ ಕೈಮುಗಿಯುವ ರೀತಿಯಲ್ಲಿ ರಚಿಸಲಾಗಿದೆ. ಕಿರೀಟ ಮುಕುಟ ದಾರಿಯಾದ ಈ ಮೂರ್ತಿಯು ಕೊರಳಲ್ಲಿ ಯಾವುದೇ ಹಾರ ಧರಿಸಿಲ್ಲ ದ್ವಿಭುಜಾರಿಯಾಗಿದ್ದು ಕೈಗಳಲ್ಲಿ ಕೈಗಡ ಧರಿಸಿರುವನು. ಸೊಂಟಕ್ಕೆ ವಸ್ತ್ರವಿದ್ದು, ಅದು ಮೊಣಕಾಲಿನವರೆಗೂ ಉಡಲಾಗಿದೆ. ಭುಜದ ಹಿಂಭಾಗದಲ್ಲಿ ಹಕ್ಕಿಯ ರೆಕ್ಕೆಗಳನ್ನು ಹೊಂದಿದೆ. ಕಾಲಲ್ಲಿ ಕಾಲ್ಕಡಗವನ್ನು ಕಾಣಬಹುದಾಗಿದೆ. ಒಟ್ಟಾರೆ ಈ ಮೂರ್ತಿಯನ್ನು ನೋಡಿದಾಗ ಭಕ್ತಿಯಿಂದ ನಮಸ್ಕರಿಸುವಂತೆ ಕಾಣುತ್ತದೆ.

ನಂದಿಬೆಟ್ಟದಿಂದ ಸುಮಾರು ೮ ಕಿ.ಮೀಟರ್ ದೂರದಲ್ಲಿ ಬರುವ ಕಂದವಾರ ಕೆರೆಯ ಏರಿಯ ಕೆಳಗೆ ೧/೨ ಫಾರ್ಲಾಗ್ ದೂರದಲ್ಲಿ ಕಂಡುಬರುವ ಈಶ್ವರ ಮತ್ತು ಚಾಮುಂಡೇಶ್ವರಿ ದೇವಾಲಯ ಒಂದೇ ಆವರಣದಲ್ಲಿ ಕಂಡುಬರುತ್ತದೆ. ಚಾಮುಂಡೇಶ್ವರಿ ದೇವಾಲಯದ ಮುಖ್ಯದ್ವಾರವು ಪಶ್ಚಿಮಕ್ಕಿದ್ದು, ದೇವಾಲಯದ ಗೋಡೆಯ ಮೇಲೆ ಎರಡೂ ಉತ್ತರದಕ್ಷಿಣವಾಗಿ ಮಲಗಿರುವ ಸಿಂಹದ ಗಾರೆ ಶಿಲ್ಪಗಳು ಕಾಣಸಿಗುತ್ತವೆ. ಈ ಮೂರ್ತಿಗಳು ಗರ್ಜಿಸುತ್ತಿರುವ ಭಂಗಿಯ ಮುಖಭಾಗವನ್ನು ಹೊಂದಿವೆ. ಈ ಶಿಲ್ಪಗಳ ಉದ್ದ ೨ ಅಡಿಗಳು, ಎತ್ತರ ೨ ಇದ್ದು, ನೋಡಲು ಸುಂದರವಾಗಿ ಕಾಣಿಸುತ್ತವೆ.

ಇದೇ ದೇವಾಲಯದ ಎಡ ಭಾಗಕ್ಕೆ ಶಿವನ ದೇವಾಲಯವಿದ್ದು ಈ ದೇವಾಲಯ ಗೋಡೆಯ ಮೇಲೆ ಶಿವನ ವಾಹನವಾದ ನಂದಿಯ ಎರಡು ಸುಂದರವಾದ ಗಾರೆ ಶಿಲ್ಪಗಳು ಕಂಡುಬರುತ್ತದೆ. ಈ ನಂದಿಯ ವಿಗ್ರಹವು ತನ್ನ ಎರಡು ಮುಂಗಾಲುಗಳನ್ನು ಮಡಚಿಕೊಂಡು ಮಲಗಿರುವಂತೆ ಕಂಡುಬರುತ್ತದೆ. ಈ ವಿಗ್ರಹಗಳ ಕೊರಳಿಗೆ ಮೂರು ಹಂತಗಳಲ್ಲಿ ಗೆಜ್ಜೆಯಿಂದ ಮಾಡಿದ ಸರವನ್ನು ಹಾಕಲಾಗಿದೆ. ಗಾರೆ ಶಿಲ್ಪಗಳ ಎತ್ತರ ಸುಮಾರು ೨ ಅಡಿಗಳು. ಉದ್ದ ೨ ಅಡಿ ಇದೆ.

ಭೋಗನಂದೀಶ್ವರ ದೇವಾಲಯದಲ್ಲಿ ಮತ್ತೊಂದು ಗಾರೆ ಶಿಲ್ಪ ಕಂಡುಬರುತ್ತದೆ. ಇದು ಕುಚಾಂಬ ದೇವಾಲಯದ ಮುಂಭಾಗ ಪ್ರಕಾರ ಗೋಡೆಯ ಮೇಲೆ ಪೂರ್ವಾಭಿಮುಖವಾಗಿದ್ದು, ತನ್ನ ಮುಂದಿನ ಕಾಲುಗಳನ್ನು ಮಡಚಿ ಮಲಗಿರುವ ರೀತಿ ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹ ಶಿಥಿಲಾವಸ್ಥೆಯಲ್ಲಿರುವುದರಿಂದ ಅದಕ್ಕೆ ಮಾಡಿರುವ ಅಲಂಕಾರಗಳು ಸ್ಪಷ್ಟವಾಗಿ ಕಂಡುಬರುವುದಿಲ್ಲ. ಇದರ ಉದ್ದ ೩ ೧/೨ ಅಡಿ, ಎತ್ತರ ೨ ಅಡಿಗಳಾಗಿದೆ.

ನಂದಿಬೆಟ್ಟ ಪರಿಸರದಲ್ಲಿ ಪ್ರತಿಯೊಂದು ಊರುಗಳಲ್ಲೂ ಹನುಮಂತನ ಮೂರ್ತಿಗಳನ್ನು ಕಾಣಬಹುದು. ಇವುಗಳೆಲ್ಲವೂ ಶಿಲೆಗಳಿಂದ ಕೆತ್ತಿದಂತಹ ಉಬ್ಬುಶಿಲ್ಪಗಳಾಗಿವೆ. ಇಲ್ಲಿ ಪ್ರಮುಖವಾಗಿ ಪಾಳೇಗಾರರ ಕಾಲದಲ್ಲಿ ನಿರ್ಮಿಸಲ್ಪಟ್ಟ ಬೆಟ್ಟದ ಮಧ್ಯದಲ್ಲಿ ಅಂಜನೇಯ, ಕುಡುವರ್ತಿಯ ಬಯಲಾಂಜನೇಯ, ಕುಪ್ಪಳ್ಳಿಯ ವೀರಾಂಜನೇಯ ಸ್ವಾಮಿ, ಕಂದವಾರದ ಆಂಜನೇಯ, ಮೂರ್ತಿಗಳು ಪ್ರಮುಖವಾಗಿವೆ. ಬೆಟ್ಟದ ಮಧ್ಯದಲ್ಲಿ ನಿರ್ಮಿಸಲಾಗಿರುವ ಆಂಜನೇಯ ಸ್ವಾಮಿ ೫, ಕುಡುವರ್ತಿಯ ಬಯಲಾಂಜನೇಯ ೧೦ ಅಡಿ, ಕುಪ್ಪಳ್ಳಿಯ ವೀರಾಂಜನೇಯಸ್ವಾಮಿ ೧೧ ಅಡಿ, ಕಂದವಾರದ ಆಂಜನೇಯ ೧೫ ಅಡಿ ಎತ್ತರವಾಗಿದೆ. ಸಾಮಾನ್ಯವಾಗಿ ಈ ಮೂರ್ತಿಗಳು ದಕ್ಷಿಣಾಭಿಮುಖವಾಗಿದ್ದು, ಪೂರ್ವಕ್ಕೆ ಮುಖತಿರುಗಿಸಿ ನಿಂತಿವೆ. ಇವೆಲ್ಲವೂ ಸುಂದರವಾಗಿದ್ದು, ಇವುಗಳ ಮೇಲ್ಭಾಗದಲ್ಲಿ ವೈಷ್ಣವ ಧರ್ಮವನ್ನು ಸೂಚಿಸುವ ಚಿಹ್ನೆಗಳು ಕಾಣಬಹುದು. ಈ ಮೂರ್ತಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಪ್ರಮುಖ ಲಕ್ಷಣಗಳೆಂದರೆ ಕಿವಿಯಲ್ಲಿ ಕುಂಡಲಗಳನ್ನು ಧರಿಸಿದ್ದು, ಕಂಠಿಹಾರ ಧರಿಸಿದ್ದು, ಸೊಂಟದಲ್ಲಿ ಸೊಂಟಪಟ್ಟಿ, ಹಾಗೂ ಕಂಠದಲ್ಲಿ ಹಲವು ಹಾರಗಳಿವೆ.[೧೫] ಮಣಿಸರಗಳಿಂದ ಅಲಂಕರಿಸಿದ ದೋತಿ,

ಯಜ್ಞೋಪವೀತ ಕಾಣಬಹುದು. ಭುಜದ ಮೇಲೆ ಮಣಿಸರಗಳಿಂದ ಅಲಂಕರಿಸಿದ ವಸ್ತ್ರವಿದೆ. ಕೈಯಲ್ಲಿ ಕೈಕಡಗ, ಭುಜಕೀರ್ತಿ ಕೇಯೂರಗಳನ್ನು ಹಾಗೂ ಕಾಲಲ್ಲಿ ಕಾಲ್ಕಡಗ ಪಾದ ಸರಗಳನ್ನು ಕೆತ್ತಲಾಗಿದೆ.

ಹೀಗೆ ನಂದಿಬೆಟ್ಟ ಪರಿಸರದಲ್ಲಿ ಪಲ್ಲವ ಕಾಲದಿಂದ ಚಿಕ್ಕಬಳ್ಳಾಪುರ ಮತ್ತು ಆವತಿ ಪಾಳೆಗಾರರ ಕಾಲಾವಧಿಯನ್ನು ನಿರ್ಮಿಸಲ್ಪಟ್ಟಂತಹ ಮೂರ್ತಿಶಿಲ್ಪಗಳಾಗಿವೆ. ಇವುಗಳನ್ನು ನಿರ್ಮಿಸಿದ್ದಂತಹ ಶಿಲೆ ಹಾಗೂ ಶಿಲ್ಪಗಳ ಲಕ್ಷಣಗಳಿಂದ ಅವುಗಳ ಕಾಲವನ್ನು ಕಾಣಬಹುದಾಗಿದೆ.

ಮರದ ಪ್ರತಿಮೆಗಳು

ಪ್ರಾಚೀನ ಕಾಲದಿಂದಲೂ ಮರದ ಪ್ರತಿಮೆಗಳಿಗೆ ಹೆಚ್ಚಿ ಪ್ರಾಮುಖ್ಯತೆ ಇರುವುದನ್ನು ಕಾಣಬಹುದು. ಜಾತ್ರೆ ರಥೋತ್ಸವ ಸಂದರ್ಭದಲ್ಲಿ ಮರದಿಂದ ನಿರ್ಮಿಸಿದ ಪ್ರತಿಮೆಗಳನ್ನು ಹೆಚ್ಚಾಗಿ ಬಳಸುತ್ತಿದ್ದರು. ವಿವಿಧ ಮರದಿಂದ ಮಾಡಿದ ವೈವಿಧ್ಯಮಯವಾದ ದೇವರ ಪ್ರತಿಮೆಗಳನ್ನು ಮಾಡುತ್ತಿದ್ದರು. ಉದಾಹರಣೆಗೆ ಶೇಷವಾಹನ, ಸಿಂಹವಾಹನ ಗಜವಾಹನ, ಅಶ್ವವಾಹನ, ನಂದಿವಾಹನ, ಋಷಿಭವಾಹನ, ಮುಂತಾದವುಗಳನ್ನು ಅಲಂಕಾರಿಕ ಮತ್ತು ಆಕರ್ಷಕವಾದ ರೂಪವನ್ನು ನೀಡುತ್ತಿದ್ದರು. ಇದಕ್ಕೆ ಹುಣಸೆ ಪುಡಿ ಮತ್ತು ಗಂಜಿಯನ್ನು ಮಿಶ್ರಣ ಮಾಡಿ ಲೇಪನ ಮಾಡುವ, ನಂತರ ಅದನ್ನು ಬಿಸಿಲಿನಲ್ಲಿ ಇಟ್ಟು ಒಣಗಿಸಿದ ನಂತರ ಆಕರ್ಷಕ ಬಣ್ಣಗಳನ್ನು ಬಳಕೆ ಮಾಡಿ ಎಲ್ಲರ ಗಮನ ಸೆಳೆಯುವಂತೆ ಮಾಡು ತ್ತಿದ್ದರು. ಹೀಗೆ ತಯಾರಿಸಿದ ಮರದ ಪ್ರತಿಮೆಗಳನ್ನು ಕುಟ್ಟೆ ಹಿಡಿಯದಂತೆ ಬಹಳ ದಿನಗಳ ಕಾಲ ಬಾಳಿಕೆ ಬರುವಂತೆ ಜಾಗರೂಕತೆ ವಹಿಸುತ್ತಿದ್ದರು.

ಆದರೆ ಕಾಲ ಕಳೆದಂತೆ ಆಧುನಿಕತೆಯನ್ನು ರೂಢಿಸಿಕೊಂಡು ಸಾಶ್ವತತೆಯ ದೃಷ್ಟಿಯಿಂದ ಇವುಗಳ ಸ್ಥಳದಲ್ಲಿ ಫೋಟೋಗಳನ್ನು ಮತ್ತು ಪಂಚಲೋಹದ ಮೂರ್ತಿಗಳನ್ನು ಮಾಡಿಕೊಳ್ಳಲು ಪ್ರಾರಂಭಿಸಿದರು. ಆದ ಕಾರಣ ಮರದ ಪ್ರತಿಮೆಗಳು ಈಗ ಎಲ್ಲೂ ಕಾಣಸಿಗುವುದಿಲ್ಲ. ಊರ ದೇವತೆ, ಗ್ರಾಮದೇವತೆಗಳು, ಕಾಳಿ, ಮಾರಮ್ಮ, ಮುಂತಾದ ದೇವಾಲಯಗಳಲ್ಲಿ ಸಣ್ಣ ಪುಟ್ಟ ವಿಗ್ರಹಗಳನ್ನು ಮರದಿಂದ ಮಾಡಿರುವುದನ್ನು ಹೊರತುಪಡಿಸಿದರೆ, ದೇವಾಲಯದಲ್ಲಿ ವಿಗ್ರಹರೂಪದಲ್ಲಿ ಮಾಡಿದ ಮರದ ಪ್ರತಿಮೆಗಳು ವಿರಳ. ಭೋಗನಂದೀಶ್ವರ ದೇವಾಲಯದಲ್ಲಿ ಮರದಿಂದ ಮಾಡಿದ ಪಲ್ಲಕ್ಕಿ, ರಥದ ಸಾಮಗ್ರಿಗಳು ಕಲ್ಲಿನ ರಥಕ್ಕೆ ಸಂಬಂಧಿಸಿದ ಮರದ ವಸ್ತುಗಳನ್ನು ಕಾಣಬಹುದು. ಒಟ್ಟಾರೆ ಆಧುನಿಕತೆ ಮತ್ತು ಶಾಶ್ವತತೆಯ ದೃಷ್ಟಿಯಿಂದ ಇಂದು ಮರದ ಪ್ರತಿಮೆಗಳು ಕಣ್ಮರೆಯಾಗಿವೆ.

ನಂದಿಬೆಟ್ಟ ಪರಿಸರದಲ್ಲಿ ಕ್ಷೇತ್ರಕಾರ್ಯ ಕೈಗೊಂಡಿದ್ದು ಯಾವ ಮರದ ಪ್ರತಿಮೆಯೂ ಕಾಣಸಿಗಲಿಲ್ಲ, ದೇವಸ್ಥಾನದಲ್ಲಿ ಇದ್ದಂತಹ ಮರದ ಪ್ರತಿಮೆಗಳ ಬದಲಾಗಿ ಲೋಹದ ಪ್ರತಿಮೆಗಳಿರುವುದು ನಮ್ಮ ಗಮನಕ್ಕೆ ಬಂದಿತು. ಆದ್ದರಿಂದ ಪ್ರಸ್ತುತ ಆ ಮರದ ಪ್ರತಿಮೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ ಎಂದೇ ಹೇಳಬಹುದು.

ಅಡಿಟಿಪ್ಪಣಿಗಳು

೧. ಕುಲಕರ್ಣಿ ಆರ್.ಎಚ್., *ವಿಜಯನಗರ ಕಾಲದ ಗಾರೆ ಕಲೆಯ ಒಂದು ಅವಲೋಕನ,* ವಿಜಯನಗರ ಅಧ್ಯಯನ, ಸಂಪುಟ-೪, ಪು.೧

೨. ಅದೇ, ಪು.೧

೩. ಲಕ್ಷ್ಮಣ್ ತೆಲಗಾವಿ(ಸಂ), *ಸಂಶೋಧನೆ,* ಕೃಷ್ಣಮೂರ್ತಿ ಎಂ., ಕರ್ನಾಟಕದ ಕಂಚುಶಿಲ್ಪಗಳು, ಪು.೧೪೦

೪. ರಾಮಚಂದ್ರರಾವ್ ಎಸ್.ಕೆ., ಪ್ರತಿಮಾಕೋಶ, ಸಂಪುಟ VI, ೧೯೯೨, ಪು.೨೧೩

೫. ರಾಜರಾಂ ಹೆಗಡೆ, ಪೂರ್ವೋಕ್ತ, ಪು.೭೨

೬. ಶಿವಮೂರ್ತಿ ಸಿ., ಸೌತ್ ಇಂಡಿಯನ್ ಬ್ರಾಂಜಸ್, ೧೯೭೮, ಪು.೨೨,

೭. ಗಂಗೋಲಿ ಬಿ.ಸಿ., ಸೌತ್ ಇಂಡಿಯನ್ ಬ್ರಾಂಜಸ್, ೧೯೭೮, ಪು.೨೨,

೮. ಶ್ರೀನಿವಾಸ್ ವಿ.ಆರ್., ಬುಲೆಟಿನ್ ಆಫ್ ದಿ, ಮದ್ರಾಸ್ ಗೌರ್ವನಮೆಂಟ್, ಮ್ಯೂಸಿಯಂ ಬ್ರಾಂಚ್ ಆಫ್ ಸೌತ್ ಇಂಡಿಯ, ಪು.೧೧

೯. ತಿಪ್ಪೇರುದ್ರಸ್ವಾಮಿ ಹೆಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.೬, ೨೭, ೬, ೨೭

೧೦. ರಾಜಾರಾಂ ಹೆಗಡೆ, *ಭಾರತೀಯ ಮೂರ್ತಿಶಾಸ್ತ್ರ, ಧರ್ಮ ದೇವತಾರಾಧನೆ ಹಾಗೂ ಸಾಂಸ್ಕೃತಿಕ, ರಾಜಕೀಯ, ಐತಿಹಾಸಿಕ ವಿಶ್ಲೇಷಣೆ,* ಅರಿವು ಬರಹ, ಸಂ-೨, ಭಾಗ-೧, ಪು.೩೫, ೩೬, ೧೯೯೨

೧೧. ಮರಿಶಾಮಚಾರ್, ಭಾರತೀಯ ಶಿಲ್ಪಕಲೆ, ಬೆಂಗಳೂರು, ೨೦೦೦ ಪು.೫

೧೨. ಡಾ. ಶಿವರಾಮ ಕಾರಂತ, ಭಾರತೀಯ ಶಿಲ್ಪ, ೧೯೭೫, ಪು.೧

೧೩. ಡಾ. ದೇವರಕೊಂಡರೆಡ್ಡಿ, ಗಂಗರ ಶಿಲ್ಪಕಲೆ, ೧೯೯೩, ಪು.೧

೧೪. ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪ ನೆಲೆ-ಹಿನ್ನೆಲೆ, ೧೯೭೩, ಪು.೧೭೨

೧೫. ಇತಿಹಾಸ ದರ್ಶನ ಸಂ.೭,

ಅಧ್ಯಾಯ ೬

ನೀರಿನ ತಾಣಗಳು

೬

ನೀರಿನ ತಾಣಗಳು

ಪ್ರಪಂಚದ ಸಕಲ ಜೀವರಾಶಿಗೂ ನೀರು ಅತ್ಯಂತ ಅವಶ್ಯಕವಾಗಿದೆ. ನೀರಿನಿಂದಲೇ ಕೆಲವು ಜೀವರಾಶಿಗಳಾದ ಜಲಚರಪ್ರಾಣಿಗಳು ಮತ್ತು ಸಸ್ಯವರ್ಗ ಉಗಮ ಹೊಂದಿವೆ. ನೀರು ಮಾನವನ ದೈನಂದಿನ ಜೀವನಕ್ಕೆ ಅಗತ್ಯವಾಗಿದೆ. ಭೂಮಿಯ ಮೇಲೆ ಮಾನವ ಉಗಮವಾದ ಕಾಲದಿಂದಲೂ ನೀರು ಮಹತ್ತರವಾದ ಪಾತ್ರವಹಿಸಿದೆ. ಅಲೆಮಾರಿಯಾಗಿದ್ದ ಮಾನವನು ತನ್ನ ಹಸಿವನ್ನು ನೀಗಿಸಿಕೊಳ್ಳಲು ಕಲ್ಲಿನಿಂದ ಆಯುಧಗಳನ್ನು ತಯಾರಿಸಿಕೊಂಡು ಬೇಟೆಯಾಡುವುದರ ಮೂಲಕ ಜೀವನ ಪ್ರಾರಂಭಿಸಿದ ನಂತರ ಒಂದೆಡೆ ನೆಲೆನಿಂತು ಸಂಘ ಜೀವನವನ್ನು ಮಾಡಲು ಆರಂಭಿಸಿದ ಈ ಹಂತವನ್ನು ಪ್ರಾಕ್ತನ ಶಾಸ್ತ್ರಜ್ಞರು ನೂತನ ಶಿಲಾಯುಗದ ಕಾಲವೆಂದು ಕರೆದಿದ್ದಾರೆ.

ಮಾನವನ ಚುಟವಟಿಕೆಗಳ ಕಾರ್ಯಕ್ಷೇತ್ರವು ನದಿ, ಸರೋವರ, ಕೆರೆ, ಸಮೀಪದಲ್ಲಿಯೇ ಸ್ಥಿರವಾಗಿತ್ತು. ಇದರಿಂದ ಮಾನವನಿಗೆ ನೀರು ಎಷ್ಟು ಅನಿವಾರ್ಯ ಎನ್ನುವುದು ವೇದ್ಯವಾಗುತ್ತದೆ. ಈ ಕಾರಣದಿಂದಲೇ ನಾಗರೀಕತೆಗಳ ಹುಟ್ಟು ನದಿಯ ಬಯಲು ಪ್ರದೇಶದಲ್ಲಿ ಬೆಳವಣಿಗೆ ಹೊಂದುವುದನ್ನು ಕಾಣಬಹುದು.[೧] ಈ ಪ್ರಕ್ರಿಯೆಯ ಪರಿಣಾಮವಾಗಿ ಮಾನವ ಒಂದೆಡೆ ನಿರಂತರವಾಗಿ ವಾಸಿಸಲು ಪ್ರಾರಂಭಿಸಿದ ತದನಂತರ ತನ್ನ ಜೀವನ ಕ್ರಮದಲ್ಲಿ ಸಾಕಷ್ಟು ಬದಲಾವಣೆಯನ್ನು ಕಂಡುಕೊಂಡನು.

ಮೊದಲಿಗೆ ಮಾನವನು ಬೇಟೆಯಾಡುವುದನ್ನು ತನ್ನ ಜೀವನ ನಿರ್ವಹಣೆಗೆ ಅವಲಂಬಿಸಿದ್ದು ನಂತರದಲ್ಲಿ ಅದನ್ನು ಒಂದು ಹವ್ಯಾಸವಾಗಿ ಪರಿಗಣಿಸಿ ಕೃಷಿ ಜೀವನವನ್ನು ಪ್ರಾರಂಭಿಸಿದ. ಈ ಕೃಷಿ ಜೀವನವು ಸುಧಾರಣೆ ಗೊಳ್ಳುತ್ತಾ ಪ್ರಾಣಿಗಳನ್ನು ಸಾಕಲಾರಂಭಿಸಿ ಅವುಗಳ ಸಹಾಯದಿಂದ ವ್ಯವಸಾಯ ಮಾಡಲು ತೊಡಗಿಸಿಕೊಂಡನು. ಕೃಷಿ ಜೀವನಕ್ಕೆ ಪೂರಕವಾಗಿ ಪಶುಪಾಲನೆ ರೂಢಿಗೆ ಬಂದಿತು. ಮಾನವನು ಸ್ಥಿರವಾಗಿ ನೆಲೆನಿಲ್ಲಲು ಈ ಕೃಷಿ ಜೀವನ ನಾಂದಿಯಾಯಿತೆಂದು ಹೇಳಬಹುದಾಗಿದೆ.

ನದಿ

ಜಿಲ್ಲೆಯ ಮುಖ್ಯ ಜಲಸಂಪನ್ಮೂಲವು ಈಶಾನ್ಯದಲ್ಲಿರುವ ನಂದಿದುರ್ಗದ ಆಸುಪಾಸಿನಲ್ಲಿ ಪ್ರಾರಂಭವಾಗುತ್ತದೆ. ನಂದಿದುರ್ಗದಿಂದ ಸುಮಾರು ೫ ನದಿಗಳು ಉಗಮವಾಗಿ ವಿವಿಧ ದಿಕ್ಕುಗಳೆಡೆಗೆ

ಹರಿಯುವುದೆಂದು ಹೇಳಲಾಗುತ್ತದೆ. ಆರ್ಕಾವತಿ ಮತ್ತು ಉತ್ತರ ಪಿನಾಕಿ ನದಿಗಳು ನಂದಿದುರ್ಗದ ಪಶ್ಚಿಮದಲ್ಲಿ ಉಗಮಗೊಂಡು ಒಂದು ದಕ್ಷಿಣದ ಕಡೆಗೆ ಮತ್ತು ಇನ್ನೊಂದು ಉತ್ತರದೆಡೆ ಪ್ರವಹಿಸುತ್ತದೆ. ಚಿತ್ರಾವತಿ ಮತ್ತು ಪಾಪಾಘ್ನಿ ನದಿಗಳು ನಂದಿದುರ್ಗದ ಉತ್ತರದಲ್ಲಿ ಹುಟ್ಟಿ ಈಶಾನ್ಯದ ಕಡೆ ಹರಿಯುತ್ತದೆ.[೨] ನಂದಿದುರ್ಗದ ಪೂರ್ವದಲ್ಲಿ ಉಗಮಿಸುವ ಪಾಲಾರ್ ಮತ್ತು ದಕ್ಷಿಣ ಪಿನಾಕಿನಿ ನದಿಗಳು ಪೂರ್ವ ಮತ್ತು ದಕ್ಷಿಣದಿಕ್ಕಿನೆಡೆಗೆ ಹರಿಯುತ್ತವೆ.

ಪಾಲಾರ್ ನದಿ

ಹಳಗನ್ನಡದಲ್ಲಿ 'ಪಾಲ್' ಎಂದರೆ 'ಹಾಲು' ಪಾಲಾರ್ ಎಂದರೆ ಹಾಲಿನ ನದಿ ಎಂದು ಅರ್ಥವಿದೆ. ಪುರಾಣಗಳಲ್ಲಿ ಇದನ್ನು ಕ್ಷೀರನದಿ ಎಂದು ಕರೆಯಲಾಗುತ್ತದೆ. ಈ ನದಿಯು ನಂದಿಬೆಟ್ಟದ ಮೇಲಿನ ಒಂದು ಬಾವಿಯಲ್ಲಿ ಚಿಲುಮೆಯ ರೀತಿ ಉಗಮವಾಗಿ ನಂತರ ಗುಪ್ತಗಾಮಿನಿಯಾಗಿ ದಕ್ಷಿಣ ಪಿನಾಕಿಯನ್ನು ದಾಟುತ್ತದೆ ಎಂಬುದು ಸ್ಥಳೀಯರ ನಂಬಿಕೆ. ಪಾಲಾರ್ ನದಿಯು ಕೈವಾರದ ದಕ್ಷಿಣಕ್ಕಿರುವ ಸಣ್ಣಗುಡ್ಡವಾದ ಗೌತಮಗುಡ್ಡದ್ದಲ್ಲಿ ಮೊದಲು ಕಾಣಿಸಿಕೊಳ್ಳುತ್ತದೆ. ಜಂಗಮಕೋಟೆ ಹಾಗೂ ಕೋಲಾರದ ಮೂಲಕ ೧೬ ಕಿ.ಮೀ. ದೂರದವರೆಗೆ ಪಶ್ಚಿಮಾಭಿಮುಖವಾಗಿ ಹರಿಯುತ್ತದೆ. ಮುದುವಾಡಿ, ಹೊಳಲಿ, ಚಲ್ಲಪಲ್ಲಿ, ರಾಮಸಾಗರ ಬೇತಮಂಗಲ ಮುಂತಾದ ಗ್ರಾಮಗಳು ಈ ನದಿಯ ದಂಡೆಯಲ್ಲಿವೆ. ಉಗಮಸ್ಥಾನದಿಂದ ಜಿಲ್ಲೆಯನ್ನು ಬಿಡುವವರೆಗೆ ಈ ನದಿಯು ೧೦೮ ಕಿ.ಮೀ. ದೂರ ಪ್ರವಹಿಸುತ್ತದೆ.[೩] ಈ ನದಿಯ ಜಲಾನಯನ ಪ್ರದೇಶದ ವಿಸ್ತೀರ್ಣ ೨೭೧೨ ಚ.ಕಿ.ಮೀ ಇದಕ್ಕೆ ಒಂದು ಉಪನದಿ ಸೇರಿಕೊಳ್ಳುತ್ತದೆ.

ಉತ್ತರ ಪಿನಾಕಿನಿ ಅಥವಾ ಪೆನ್ನಾರ್

ಚಿಕ್ಕಬಳ್ಳಾಪುರ ತಾಲೂಕಿನ ನಂದಿಬೆಟ್ಟದ ವಾಯುವ್ಯದಲ್ಲಿರುವ ಚನ್ನಕೇಶವ ಬೆಟ್ಟದಲ್ಲಿ ಉಗಮಿಸಿ ಮಂಚೇನಳ್ಳಿ ಮತ್ತು ಗೌರಿಬಿದನೂರು ಮೂಲಕ ಆಂಧ್ರ ಪ್ರದೇಶವನ್ನು ಪ್ರವೇಶಿಸಿ ಹಿಂದೂಪುರ, ಕಡಪ ಮತ್ತು ನೆಲ್ಲೂರು ಜಿಲ್ಲೆಗಳ ಮೂಲಕ ಹರಿದು ನೆಲ್ಲೂರು ಬಳಿಯ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಕುಮುದವತಿ, ಚಿತ್ರಾವತಿ ಮತ್ತು ಕುಶಾವತಿ ಇದರ ಉಪನದಿಗಳು ಈ ನದಿಯು ಜಿಲ್ಲೆಯಲ್ಲಿ ೫೪ ಕಿ.ಮೀ ದೂರ ಹರಿಯುತ್ತದೆ.[೪] ಇದರ ಜಲಾನಯ ಪ್ರದೇಶದ ವಿಸ್ತೀರ್ಣ ೮೪೨ ಚ.ಕಿ.ಮೀ. ಜಕ್ಕಲ ಮಡುಗು ಮತ್ತು ಶ್ರೀನಿವಾಸ ಸಾಗರ ಎಂಬ ಎರಡು ಪ್ರಮುಖ ಕೆರೆಗಳಿವೆ.

ಆರ್ಕಾವತಿ

ಅರ್ಕಾವತಿ ನದಿಯನ್ನು ವಿವರಿಸಲು ಹಾಗೂ ಮೂಲವನ್ನು ಹೇಳಲು ೫ ಭಾಗ ಅಥವಾ ಕೆರೆಗಳ ಸರಣಿಯನ್ನು ರೂಪಿಸಿಕೊಳ್ಳಲಾಗಿದೆ. ಈ ಸರಣಿಗಳಿಗೆ ನಂದಿಗಿರಿ ಚನ್ನಗಿರಿ, ಹುಲುಕುಡಿ ಬೆಟ್ಟ,

ನಾಗದೇವನಹಳ್ಳಿ, ಮಧುರೈ ಎಂದು ಹೆಸರಿಸಲಾಗಿದೆ. ಇದರ ಪ್ರಥಮಸರಣಿ ನಂದಿಗಿರಿ ಬಗ್ಗೆ ಮಾಹಿತಿ ಇಲ್ಲಿಂದ ಅನಾವರಣಗೊಳ್ಳುತ್ತದೆ. ನಂದಿಗಿರಿ ಎಂದರೆ ನಂದಿಬೆಟ್ಟ, ಐದು ಬೆಟ್ಟಗಳ ಸರಣಿಯಲ್ಲಿದೆ. ದಿಬ್ಬಗಿರಿ, ಬ್ರಹ್ಮಗಿರಿ, ಚನ್ನಗಿರಿ, ಕನ್ನಗಿರಿಗಳ ನಡುವೆ ಇರುವುದೇ ನಂದಿಗಿರಿ. ನಂದಿಬೆಟ್ಟದ ಟಿಪ್ಪುಡ್ರಾಪ್ ನ ಪಕ್ಕವೇ ಅರ್ಕಾವತಿ ಉಗಮಸ್ಥಾನವಿದೆ. ಇಲ್ಲಿಂದ ನದಿಯಾಗಿ ಕನಕಪುರದ ಸಂಗಮದವರೆಗೆ ಹರಿಯುತ್ತದೆ. ಜೂನ್‌ನಲ್ಲಿ ಆರಂಭವಾಗುವ ಮಳೆ ಫೆಬ್ರವರಿವರೆಗೂ ತನ್ನ ಪ್ರಭಾವವನ್ನು ನಂದಿಬೆಟ್ಟದಲ್ಲಿ ಬೀರುತ್ತದೆ. ಇದರಿಂದ ಬೆಟ್ಟ ಸಂಪೂರ್ಣ ತಂಪಾಗಿರುತ್ತದೆ. ಆದರೆ ಏಪ್ರಿಲ್ -ಮೇ ಎಲ್ಲ ತನುವನ್ನೂ ಹೀರಿಕೊಂಡು ಸೂರ್ಯನ ಶಾಖಕ್ಕೆ ಬಳಲಿ ಹೋಗಿರುತ್ತದೆ. ಕಾವೇರಿ ನದಿಯ ಉಪನದಿಯಾದ ಅರ್ಕಾವತಿಯು ನಂದಿದುರ್ಗದಲ್ಲಿ ಉಗಮಿಸುವುದು.[೫] ಇದು ಜಿಲ್ಲೆಯನ್ನು ದಾಟಿ, ಬೆಂಗಳೂರು ಗ್ರಾಮಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಸೇರುತ್ತದೆ. ಈ ನದಿಯು ಕೇವಲ ೧ ಕಿ.ಮೀ. ದೂರ ಮಾತ್ರ ಜಿಲ್ಲೆಯಲ್ಲಿ ಹರಿಯುತ್ತದೆ.

ಚಿತ್ರಾವತಿ

ಚಿತ್ರಾವತಿ ನದಿಯು ನಂದಿಬೆಟ್ಟದ ಉತ್ತರಕ್ಕೆ ೧೪ ಕಿ.ಮೀ. ದೂರದಲ್ಲಿರುವ ಕಲಗನ ಪಾಳ್ಯ - ಕೊಂಡಬೆಟ್ಟಗಳ ಬಳಿ ಉಗಮವಾಗಿ ವರಲಕೊಂಡ ಬೆಟ್ಟ ಮತ್ತು ಬಾಗೇಪಲ್ಲಿ ಮಧ್ಯ ಇರುವ ಪ್ರದೇಶದಲ್ಲಿ ಈಶಾನ್ಯಭಿಮುಖವಾಗಿ ಹರಿಯುತ್ತದೆ. ಕಡಪ ಜಿಲ್ಲೆಯ ಗೌಡಲೂರಿನ ಬಳಿ ಉತ್ತರ ಪಿನಾಕಿಯನ್ನು ಸೇರುತ್ತದೆ.[೬] ಈ ನದಿಯು ಜಿಲ್ಲೆಯಲ್ಲಿ ಸುಮಾರು ೫೫ ಕಿ.ಮೀ. ದೂರ ಹರಿಯುತ್ತದೆ. ನದಿಯ ಜಲಾಯನ ಕ್ಷೇತ್ರವು ೫೩೯ ಚ.ಕಿ.ಮೀ.ಗಳಾಗಿದ್ದು ೩೦೬ ಕೆರೆಗಳನ್ನು ಒಳಗೊಂಡಿದೆ.

ದಕ್ಷಿಣ ಪಿನಾಕಿನಿ

ದಕ್ಷಿಣ ಪಿನಾಕಿನಿ ಅಥವಾ ದಕ್ಷಿಣ ಪೆನ್ನಾರ್ ನದಿಯು ನಂದಿಬೆಟ್ಟದ ವಾಯುವ್ಯಕ್ಕೆ ಇರುವ ಚೆನ್ನರಾಯನ ಬೆಟ್ಟದಲ್ಲಿ ಉಗಮಿಸುತ್ತದೆ. ಪೂರ್ವಾಭಿಮುಖವಾಗಿ ಶಿಡ್ಲಘಟ್ಟದವರೆಗೂ ಹರಿದು ಅನಂತರ ದಕ್ಷಿಣಾಭಿಮುಖವಾಗಿ ತಿರುಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ, ವಿಜಯಪುರದ ದಕ್ಷಿಣದ ಕಡೆ ಪ್ರವೇಶಿಸುತ್ತಿದೆ. ಹಲವಾರು ಪ್ರದೇಶಗಳ ಮೂಲಕ ಹರಿದು ಅಂತಿಮವಾಗಿ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಇದರ ಉಗಮ ಸ್ಥಾನದಿಂದ ಸುಮಾರು ೮೦ ಕಿ.ಮೀ. ರಾಜ್ಯದಲ್ಲಿ ಹಾಗೂ ಸುಮಾರು ೩೯ ಕಿ.ಮೀ. ದೂರ ಜಿಲ್ಲೆಯಲ್ಲಿ ಹರಿಯುತ್ತದೆ.[೭] ನದಿಯ ಜಲಾನಯನ ಪ್ರದೇಶ ೫೦ ಚ.ಕಿ.ಮೀ. ಆಗಿರುತ್ತದೆ.

ಪಾಪಾಘ್ನಿ

ಚಿಕ್ಕಬಳ್ಳಾಪುರ ತಾಲೂಕಿನ ಕಳವರ ದುರ್ಗದಲ್ಲಿ ಹುಟ್ಟಿ ಈಶಾನ್ಯಭಿಮುಖವಾಗಿ ಶಿಡ್ಲಘಟ್ಟ ತಾಲೂಕಿನ ಕಣಿವೆಗಳಲ್ಲಿ ಹರಿದು ಬಾಗೇಪಲ್ಲಿ ತಾಲೂಕಿನ ಮೂಲಕ ಚಿತ್ತೂರು ಜಿಲ್ಲೆಯಲ್ಲಿ ಪ್ರವಹಿಸಿ

ಮುಂದೆ ಉತ್ತರ ಪಿನಾಕಿಯನ್ನು ಸೇರುತ್ತದೆ.[೮] ಜಿಲ್ಲೆಯಲ್ಲಿ ಈ ನದಿ ಹರಿಯುವ ದೂರ ಸುಮಾರು ೬೮ ಕಿ.ಮೀ.ಗಳಾಗಿದ್ದು ಸುಮಾರು ೮೬೦ ಚ.ಕಿ.ಮೀ. ಜಲಾನಯನ ಪ್ರದೇಶವನ್ನು ಹೊಂದಿದೆ.

ಕೆರೆಗಳು

ಅಲೆಮಾರಿ ಜೀವನ ಬಿಟ್ಟ ಮಾನವ ಸ್ಥಿರವಾಗಿ ಒಂದೆಡೆ ನೆಲೆನಿಂತ ಮೇಲೆ ವ್ಯವಸಾಯವನ್ನು ಪ್ರಾರಂಭಿಸಿದ ಅವನು ಮೊದಲಿಗೆ ಮಳೆಯನ್ನೇ ನಂಬಿದ್ದ ವಿಫುಲವಾಗಿ ನೀರು ಸಿಗುವ ಸ್ಥಳವಾಗಿದ್ದ ನದಿಯನ್ನು ಆಶ್ರಯಿಸಿದ್ದನು. ವಾತಾವರಣದಲ್ಲಿ ಆಗುತ್ತಿದ್ದ ಬದಲಾವಣೆಗಳು ಮತ್ತೆ ಮಳೆಯ ವೈಫಲ್ಯತೆಯು ಅವನನ್ನು ಆಗಿಂದ್ದಾಗ್ಗೆ ಕಷ್ಟಕ್ಕೆ ಒಳಪಡಿಸುತ್ತಿತ್ತು. ಇದರಿಂದ ಅವನು ನೀರನ್ನು ಸಂಗ್ರಹ ಮಾಡಿ ತನ್ನ ಅಗತ್ಯಗಳಿಗೆ ಬಳಸಲು ಪ್ರಯತ್ನಿಸಿದನು. ಮಳೆಗಾಲವು ವರ್ಷದಲ್ಲಿ ಕೆಲವು ಋತು ಅಥವಾ ಮಾಸ ಮಾತ್ರ ಇರುತ್ತಿತ್ತು. ಉಳಿದ ಸಮಯದಲ್ಲಿ ನೀರಿನ ಅಗತ್ಯತೆಗೆ ತಕ್ಕಂತೆ ಸಂಗ್ರಹಣೆ ಅನಿವಾರ್ಯವಾಗಿ ನೀರನ್ನು ಕೂಡಿಡುವ ತಂತ್ರವನ್ನು ರೂಢಿಸಿಕೊಂಡ. ಮಳೆಯ ನೀರು ತಗ್ಗಾದ ಪ್ರದೇಶದಲ್ಲಿ ಸಂಗ್ರಹಗೊಳ್ಳುತ್ತಿತ್ತು. ಅಂತಹ ಜಾಗಗಳಲ್ಲಿ ನೀರು ಹರಿದು ಹೋಗದಂತೆ ಸಣ್ಣ ಕಟ್ಟೆಗಳನ್ನು ನಿರ್ಮಿಸುತ್ತಿದ್ದ ಆರಂಭದಲ್ಲಿ ಪ್ರಕೃತಿದತ್ತವಾಗಿ ದೊರೆಯುತ್ತಿದ್ದ ಮರದ ರಂಬೆ, ಎಲೆ, ಮಣ್ಣನ್ನು ಬಳಸಿ ಒಡ್ಡುಗಳನ್ನು ಕಟ್ಟಿದ ಆದರೆ ಇದು ಶಾಶ್ವತವಾಗಿ ನಿಲ್ಲುತ್ತಿರಲಿಲ್ಲ ಕಾಲ ಕಳೆದಂತೆ ಜೀವನದಲ್ಲಿ ಸುಧಾರಣೆ ಅಥವಾ ಬದಲಾವಣೆ ಬೆಳೆದಂತೆ ಕಲ್ಲು ಮತ್ತು ಮಣ್ಣನ್ನು ಬಳಸಿ ಭದ್ರವಾಗಿ ಇರುವಂತಹ ಕಟ್ಟೆಗಳನ್ನು ಕಟ್ಟಿದ. ಇವೇ ಮುಂದೆ ಕೆರೆಗಳಾಗಿ ಮಾರ್ಪಾಡಾದವು. ಹೀಗೆ ಸಂಗ್ರಹವಾದ ನೀರನ್ನು ಸಣ್ಣ ಸಣ್ಣ ಕಾಲುವೆಗಳನ್ನು ತೋಡಿ ಕೃಷಿ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಪ್ರಾರಂಭಿಸಿದ.

ಈ ನಿಟ್ಟಿನಲ್ಲಿ ಪ್ರಪಂಚದಾದ್ಯಂತ ಅನೇಕ ಸಂಶೋಧನೆಗಳು ನಡೆದಿವೆ ಹಾಗೂ ನಡೆಯುತ್ತಲಿವೆ. ಕೆಲವು ಪ್ರಾಕ್ತನಾನ್ವೇಷಣೆಯಿಂದ ದೊರಕಿರುವ ಮಾಹಿತಿಗಳು ನಿಜಕ್ಕೂ ರೋಚಕವಾಗಿವೆ. ಈಜಿಪ್ಟ್ ದೇಶದಲ್ಲಿ ದೊರೆತಿರುವ ರೇಖಾಚಿತ್ರಗಳಲ್ಲಿ ಮಾನವನು ನೀರನ್ನು ಸಂಗ್ರಹಿಸಿ ಬಳಸಿಕೊಂಡಿರುವುದನ್ನು ಚಿತ್ರಿಸಲಾಗಿದೆ. ಇದರಿಂದಾಗಿ ಆ ದೇಶದಲ್ಲಿಯೇ ಮೊಟ್ಟಮೊದಲಿಗೆ ಕೆರೆ-ನೀರಾವರಿ ಪದ್ಧತಿಯನ್ನು ಬಳಕೆಗೆ ತಂದರೆಂದು ಪುರಾತತ್ವಜ್ಞರು ಅಭಿಪ್ರಾಯಪಡುತ್ತಾರೆ. ಭಾರತವು ಸಹ ಈಜಿಪ್ಟ್ ನಷ್ಟೇ ಪ್ರಾಚೀನತೆಯನ್ನು ಹೊಂದಿರುವ ದೇಶ ಭಾರತದಲ್ಲಿಯೂ ಸುಮಾರು ಆರು ಸಾವಿರ ವರ್ಷಗಳಷ್ಟು ಹಿಂದೆಯೇ ಅಂದರೆ ಈಜಿಪ್ಟ್‌ಗೆ ಸಮಕಾಲೀನವಾಗಿ ಕೃಷಿಕ ಜೀವನ ಕುರುಹುಗಳನ್ನು ನೋಡಬಹುದು. ಇಲ್ಲಿ ಇನ್ನೂ ಪೂರ್ಣ ಪ್ರಮಾಣದಲ್ಲಿ ಅಧ್ಯಯನವಾಗದ ಕಾರಣ ಖಚಿತತೆಯಿಂದ ಹೇಳಲು ಸಾಧ್ಯವಾಗದಿದ್ದರೂ, ಅಲ್ಲಲ್ಲಿ ದೊರೆತಿರುವ ಪುರಾವೆಗಳ ಆಧಾರದಿಂದ ಭಾರತದಲ್ಲಿ ಆರು ಸಾವಿರ ವರ್ಷಗಳ ಹಿಂದೆಯೇ ಕೃಷಿ ಜೀವನ ಪ್ರಾರಂಭವಾಯಿತು ಎಂದು ಹೇಳಬಹುದು.[೯] ಸಿಂಧು ಸಂಸ್ಕೃತಿಯ ಜನರು ನೀರಿನ ವ್ಯವಸ್ಥೆಯನ್ನು ವೈಜ್ಞಾನಿಕ ಮಾದರಿಯಲ್ಲಿ ಮಾಡಿಕೊಂಡಿದ್ದರು. ಹೀಗಾಗಿ ಸಿಂಧೂನದಿ

ಸಂಸ್ಕೃತಿಯ ಅನೇಕ ನೆಲೆಗಳಲ್ಲಿ ಇಂತಹ ನೀರಾವರಿ ವ್ಯವಸ್ಥೆಯ ಪುರಾವೆಗಳು ದೊರಕಿವೆ. ರಾಜಸ್ಥಾನದ ಗಂಗಾನಗರ್ ಜಿಲ್ಲೆಯಲ್ಲಿರುವ ಕಾಳಿಬಂಗನ್ ಎಂಬ ಸಿಂಧೂನದಿಕೊಳ್ಳ ಸಂಸ್ಕೃತಿಯ ನೆಲೆಯಲ್ಲಿ ನಡೆಸಿದ ಉತ್ಖನನದಲ್ಲಿ ಉತ್ತಿರುವ ಜಮೀನು ದೊರೆತಿದೆ.[೧೦] ಅತ್ಯಂತ ಸಮರ್ಪಕವಾದ ನೀರು ಸರಬರಾಜು ಪದ್ಧತಿಯು ಇತ್ತೆಂದು ಗುಜರಾತಿನಲ್ಲಿರುವ ದೊಲವೀರಾ ಎಂಬ ಗ್ರಾಮದಲ್ಲಿ ಕೈಗೊಂಡ ಉತ್ಖನನದಿಂದ ತಿಳಿದುಬಂದಿದೆ.

ಕರಿಕಾಳ ಚೋಳನೇ ಚೋಳವಂಶದ ಪ್ರಥಮ ಅರಸ. ಇವನು ಸಂಗಮಯುಗದಲ್ಲಿ ಪ್ರಮುಖ ಅರಸನಾಗಿದ್ದು, ಊರೈಯೂರು ಇವನ ರಾಜಧಾನಿಯಾಗಿತ್ತು. ಕಾವೇರಿಯ ಮುಖಜಭೂಮಿಯಲ್ಲಿ ಒಂದು ಕಾವೇರಿ ಪಟ್ಟಣವನ್ನು ನಿರ್ಮಿಸಿದ. ಕಾವೇರಿ ನದಿಗೆ ಸಣ್ಣದೊಂದು ಏರಿ ನಿರ್ಮಿಸಿ ವ್ಯವಸಾಯಕ್ಕೆ ಯೋಗ್ಯ ವ್ಯವಸ್ಥೆ ಮಾಡಿದ್ದು ೧೦೮೦ ಅಡಿ ಉದ್ದ ಇರುವ ಇದರ ಅಣೆಕಟ್ಟೆ ಕಲ್ಲಿನಿಂದ ನಿರ್ಮಿತವಾಗಿದೆ. 'ಕಲ್ಲಣೆ ಅಣೆಕಟ್ಟು' ಎಂದು ಕರೆಯಲಾಗುವ ಇದು ಪ್ರಾಯಶಃ ದಕ್ಷಿಣ ಭಾರತದಲ್ಲಿ ನಿರ್ಮಿಸಲಾದ ಪ್ರಥಮ ನೀರಾವರಿ ಅಣೆಕಟ್ಟಾಗಿದೆ.[೧೧]

ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ಮುಖ್ಯವಾಗಿ ದಕ್ಷಿಣಭಾರತದಲ್ಲಿ ವಾಸಿಸುತ್ತಿದ್ದರು. ಇವರ ಕಾಲಮಾನ ಕ್ರಿ.ಪೂ.೮೦೦ ರಿಂದ ಕ್ರಿ.ಶ.೨ನೇ ಶತಮಾನ. ಉತ್ತರ ತಮಿಳುನಾಡಿನಲ್ಲಿ ಸ್ವಾಭಾವಿಕವಾಗಿಯೆ ಅನೇಕ ತಗ್ಗು ಪ್ರದೇಶಗಳು ಕಂಡುಬರುತ್ತವೆ. ಈ ಪ್ರದೇಶದಲ್ಲಿ ಮಳೆಯ ನೀರು ಸಂಗ್ರಹಗೊಳ್ಳುತ್ತದೆ.[೧೨] ಈ ಸಂಸ್ಕೃತಿಯ ಜನರು ಅಂತಹ ಸ್ವಾಭಾವಿಕವಾಗಿ ಉಂಟಾದಂತಹ ಕೆರೆಯ ನೀರನ್ನು ಬಳಸಿಕೊಂಡು ಮೊಟ್ಟಮೊದಲಿಗೆ ದಕ್ಷಿಣ ಭಾರತದಲ್ಲಿ ನೀರಾವರಿ ಕೃಷಿ ಪದ್ಧತಿಯನ್ನು ಪ್ರಾರಂಭಿಸಿದರೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಪ್ರಾಚೀನ ಭಾರತದ ಸಾಹಿತ್ಯ ಕೃತಿಗಳಾದ ರಾಮಾಯಣ, ಮಹಾಭಾರತ, ಕೌಟಿಲ್ಯನ ಅರ್ಥಶಾಸ್ತ್ರ, ಮನುವಿನ ಧರ್ಮಶಾಸ್ತ್ರ, ಪದ್ಮಪುರಾಣ, ಜಾತಕ ಕಥೆಗಳು, ಶುಕ್ರನೀತಿಸಾರ, ಅಮರಕೋಶ, ನಾಮಲಿಂಗಾನುಶಾಸನ, ಗಾಥಾಸಪ್ತಶತಿ ಮತ್ತು ತಮಿಳು ಸಂಗಮ್ ಸಾಹಿತ್ಯವು ಕೆರೆ ನೀರಾವರಿ, ಕೃತಕ ಸಂಗ್ರಹಗಳು ನಾಲೆಗಳು, ಸಾಗುವಳಿಯ ಪ್ರದೇಶ ಮತ್ತು ಕೃಷಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಪ್ರಸ್ತಾಪಿಸುತ್ತದೆ. ಶಾಸನಗಳು ಕೆರೆಗಳು ಮತ್ತು ಕೃಷಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ತಿಳಿಸುತ್ತವೆ. ಅವುಗಳಲ್ಲಿ ಗುಜರಾತ್ ರಾಜ್ಯದಲ್ಲಿರುವ ಜುನಾಗಡ್‌ನಲ್ಲಿ ದೊರೆತಿರುವ ಮಹಾಕ್ಷತ್ರಪ ರುದ್ರಧಾಮನ್ (ಕ್ರಿ.ಶ.೧೫೦) ಶಾಸನವು ಸುದರ್ಶನ ಕೆರೆಯನ್ನು ಉಲ್ಲೇಖಿಸುತ್ತದೆ.[೧೩] ಒಂದು ಕೆರೆಯ ಬಗ್ಗೆ ಪೂರ್ಣ ಇತಿಹಾಸವನ್ನು ನೀಡುವುದು. ಈ ಶಾಸನ ವಾಶಿಷ್ಟ ಪುಲುಮಾಯಿಯ ಮೇಕೆ ದೋಣಿ ಶಾಸನವು ಮೊಟ್ಟ ಮೊದಲ ಬಾರಿಗೆ ಕರ್ನಾಟಕದ ಕೆರೆಯ ಬಗೆಗೆ ಉಲ್ಲೇಖಿಸುತ್ತದೆ. ಕರ್ನಾಟಕದ ಅತ್ಯಂತ ಪ್ರಾಚೀನ ಕೆರೆಗಳಲ್ಲಿ ಚಂದ್ರವಳ್ಳಿಯ ಸಮೀಪವಿರುವ ಚಂದ್ರವಳ್ಳಿಯ ಕೆರೆಯು ಒಂದಾಗಿದೆ. ಈ ಕೆರೆಯನ್ನು

ಕದಂಬರ ರಾಜನಾದ ಮಯೂರವರ್ಮನು ಈ ಕೆರೆಯನ್ನು ನಿರ್ಮಿಸಿದನೆಂದು ಈ ಶಾಸನವು ತಿಳಿಸುತ್ತದೆ. ಕರ್ನಾಟಕದಲ್ಲಿ ಶಾತವಾಹನರು, ಕದಂಬರು, ಗಂಗರು, ಬಾದಾಮಿಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಚೋಳರು, ಹೊಯ್ಸಳರು, ಸೇವುಣರು ಮತ್ತು ವಿಜಯನಗರ ಕಾಲದವರೆಗೆ ಕೆರೆ ನೀರಾವರಿ ಕಾಮಗಾರಿಗಳು ಸುಮಾರು ೧ ಸಾವಿರ ವರ್ಷಕ್ಕೂ ಹೆಚ್ಚು ಕಾಲ ಅವ್ಯಾಹಕವಾಗಿ ನಡೆಯಿತು. ಕಲ್ಯಾಣ ಚಾಲುಕ್ಯರ ಕಾಲವನ್ನು ಕೆರೆಗಳ ನಿರ್ಮಾಣದ ಸುವರ್ಣಯುಗವೆಂದು ಸಹ ಕರೆಯಲಾಗಿದೆ.[೧೪] ಇವರ ಕಾಲದಲ್ಲಿ ಅಸಂಖ್ಯಾತ ಹೊಸ ಹಳ್ಳಿಗಳು ಅಗ್ರಹಾರ, ಕೆರೆಗಳು, ಛತ್ರ ದೇವಾಲಯ ಮುಂತಾದವುಗಳನ್ನು ನಿರ್ಮಿಸಲಾಯಿತು.

ವಿಜಯನಗರ ಕಾಲದಲ್ಲಿ ದಕ್ಷಿಣ ಭಾರತದ ಹಲವು ಭಾಗಗಳಲ್ಲಿ ಬೃಹತ್ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು. ಇವರ ಕಾಲದ ಮದಗ ಮಾಸೂರು, ಆಂಧ್ರಪ್ರದೇಶದಲ್ಲಿ ಪೊರುಮಾಮಿಲ್ಲ, ಕಂಬಂ, ವ್ಯಾಸ ಮುದ್ರ ಹಾಗೂ ರಾಯಕೆರೆ ಮುಂತಾದ ಹಲವಾರು ಬೃಹತ್ ಕೆರೆ ಗಳನ್ನು ನಿರ್ಮಿಸಿದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ. ವಿಜಯನಗರ ತರುವಾಯ ಒಡೆಯರು, ಕೆಳದಿ ನಾಯಕರು ಕೆರೆ ನಿರ್ಮಾಣ ಕೆಲಸಗಳನ್ನು ಮುಂದುವರೆಸಿದರು. ಒಟ್ಟಾರೆ ಪ್ರಾಚೀನ ಕಾಲದಿಂದಲೂ ಕೆರೆಗಳು ನೀರಾವರಿ ವ್ಯವಸ್ಥೆಯಲ್ಲಿ ಪ್ರಮುಖಪಾತ್ರವಹಿಸಿರುವುದು ಕಂಡುಬರುತ್ತದೆ.

ನಂದಿಬೆಟ್ಟ ಪರಿಸರದ ಕೆರೆಗಳು

ಈ ಪರಿಸರದಲ್ಲಿ ನಿರ್ಮಿಸಿರುವ ಕೆರೆಗಳ ಏರಿಯು ವಿವಿಧ ದಿಕ್ಕುಗಳನ್ನು ಹೊಂದಿವೆ. ಆದರೂ ಬಹುತೇಕ ಕೆರೆಗಳಿಗೆ ಪೂರ್ವದಿಕ್ಕಿನಲ್ಲಿ ಏರಿಯನ್ನು ನಿರ್ಮಿಸಲಾಗಿದೆ. ಈ ಪ್ರದೇಶದಲ್ಲಿ ಬೀಳುವ ಮಳೆಯು ಸಣ್ಣ ತೊರೆ, ಹಳ್ಳಗಳಾಗಿ ಪೂರ್ವಭಾಗಕ್ಕೆ ಹರಿಯುತ್ತವೆ. ಆದುದರಿಂದ ಕೆರೆ ನೀರು ಸಂಗ್ರಹಿಸಲು ಏರಿಯನ್ನು ಪೂರ್ವದಿಕ್ಕಿಗೆ ಕಟ್ಟಲಾಗಿದೆ. ಇಲ್ಲಿನ ಕೆರೆಗಳಿಗೆ ಪ್ರಾಚೀನ ಕಾಲದಿಂದಲೂ ಹಲವು ಹೆಸರುಗಳಿಂದ ಕಟ್ಟೆ, ಕುಂಟೆ, ಕೊಳ ಇವೆ ಮುಂತಾದ ಪದಗಳು ರೂಢಿಯಲ್ಲಿರುವುದು ಕಂಡುಬರುತ್ತದೆ. ಇವುಗಳಲ್ಲದೆ ಅರಸರ, ರಾಣಿಯರ, ದಾನಿಗಳ, ಕೆರೆ ಕಟ್ಟಿಸಿದವರ ಹೆಸರುಗಳಿಂದಲೂ ಕರೆಯುತ್ತಾರೆ. ಒಂದು ಕೆರೆಯ ವಿಸ್ತೀರ್ಣ ಅಳತೆ, ಅಗಾಧತೆ ಮತ್ತು ಆಳವನ್ನು ಗಮನದಲ್ಲಿರಿಸಿಕೊಂಡು ಅವುಗಳನ್ನು ವರ್ಗೀಕರಿಸಿದ್ದಾರೆ. ಕೆರೆಯ ಆಯಕಟ್ಟು, ಪ್ರದೇಶಗಳಿಗೆ ನೀರುಣಿಸುವ ಸಾಮರ್ಥ್ಯವನ್ನು ಅಳತೆ ಗೋಲಾಗಿಸಿಕೊಂಡು ಕೆರೆಗೆ ಹಿರಿಯ, ಪಿರಿಯ ಚಿಕ್ಕ ಇವೇ ಮುಂತಾದ ಗುಣವಾಚಕಗಳನ್ನು ಜೋಡಿಸಿರುವುದನ್ನು ಕಂಡುಕೊಳ್ಳಬಹುದಾಗಿದೆ.

ಕೆರೆಯು ನಿರ್ಮಾಣ ಹಂತದಲ್ಲಿಯೇ ಅನೇಕ ಕಾರ್ಯಚರಣೆಗಳಿಂದ ಕೂಡಿರುತ್ತದೆ. ಅವುಗಳೆಂದರೆ ಭೌಗೋಳಿಕ ಪರಿಸ್ಥಿತಿಯ ಅಧ್ಯಯನ, ಜಲಾನಯನ ಪ್ರದೇಶ, ಸೂಕ್ತ ಸ್ಥಳದ ಆಯ್ಕೆ, ಅಡವಿಯನ್ನು

ತೆಗೆದು ಹಾಕುವುದು. ಕೆರೆಕಟ್ಟೆ ನಿರ್ಮಿಸುವುದು ಇತ್ಯಾದಿ. ಒಂದು ಕೆರೆಯ ನಿರ್ಮಾಣ ಮಳೆಯ ಪ್ರಮಾಣವನ್ನು ಹಾಗೂ ಕೆರೆಯ ಜಲಾನಯನ ಪ್ರದೇಶವನ್ನೂ ಅವಲಂಬಿಸಿರುತ್ತದೆ. ಈ ಪ್ರದೇಶವು ಸಾಮಾನ್ಯವಾಗಿ ಕೆರೆಯ ಭಾಗಕ್ಕಿಂತ ಎತ್ತರದಲ್ಲಿರುತ್ತದೆ. ಜಲಾನಯನ ಪ್ರದೇಶದಲ್ಲಿ ಅಧಿಕ ಮಳೆಯಾಗುತ್ತದೆ. ಮತ್ತು ಇಲ್ಲಿ ಬೀಳುವ ಮಳೆಯ ನೀರು ಹರಿದು ಬಂದು ಕೆರೆಯನ್ನು ಸೇರುತ್ತದೆ. ಹೀಗೆ ಹರಿದು ಬರುವ ನೀರನ್ನು ತಡೆಯಲು ಕರೆಯ ಏರಿಯು ಪ್ರಮುಖ ಪಾತ್ರವಹಿಸುತ್ತದೆ. ಆದ್ದರಿಂದ ಈ ಭಾಗವು ಅತ್ಯಂತ ಗಟ್ಟಿಯಾಗಿರಬೇಕಾಗುತ್ತದೆ.[೧೫] ಸಾಮಾನ್ಯವಾಗಿ ಈ ಪರಿಸರದಲ್ಲಿ ಕಂಡುಬರುವ ಕೆರೆಯ ಏರಿಗಳು ಒರಟಾದ ಗುಂಡುಬಂಡೆ ಮತ್ತು ಆಯತಾಕಾರದ ದಪ್ಪ ಕಲ್ಲುಗಳಿಂದ ನಿರ್ಮಿಸಲಾಗಿದೆ.

ತುಂಬುಗಳು ಕೆರೆಯ ರಚನೆಯಲ್ಲಿ ಒಂದು ಮುಖ್ಯ ಅವಿಭಾಜ್ಯ ಅಂಗವಾಗಿದೆ. ತೂಬುಗಳೇ ಕೆರೆಯ ನೀರನ್ನು ಹೊರಗೆ ಹೋಗದಂತೆ ತಡೆ ಹಿಡಿಯುವ ಸಾಧನಗಳು ತೂಬುಗಳನ್ನು ಎರಡು ಅಥವಾ ನಾಲ್ಕು ಕಂಬಗಳಿಂದ ರಚಿಸಿದ್ದು, ಎರಡು ಕಂಬಗಳ ನಡುವಿನಲ್ಲಿ ಒಂದು ಅಡ್ಡಕಲ್ಲನ್ನು ಇರಿಸಲಾಗುತ್ತದೆ. ನಂತರ ಉದ್ದವಾದ ಕಲ್ಲುಗಳ ಮೇಲ್ಭಾಗದಲ್ಲಿ ಅಡ್ಡಗಲ್ಲನ್ನು ಹಾಸಲಾಗುತ್ತದೆ. ಈ ಎರಡು ಅಡ್ಡಗಲ್ಲುಗಳ ನಡುವೆ ಸುಮಾರು ೨೫ ರಿಂದ ೩೦ ಸೆಂ.ಮೀ. ವ್ಯಾಸದ ರಂಧ್ರವಿರುತ್ತದೆ. ಈ ರಂಧ್ರದ ಅಳತೆಗೆ ತಕ್ಕಂತೆ ವ್ಯಾಸವುಳ್ಳ ಮರದ ತುಂಡನ್ನು ಇಟ್ಟು ರಂಧ್ರವನ್ನು ಮುಚ್ಚಲಾಗುತ್ತದೆ. ಆ ಮರದ ದಿಮ್ಮಿಯನ್ನು ಮೇಲೆತ್ತಿದಾಗ ನೀರು ಹೊರ ಹೋಗುತ್ತದೆ. ಈ ಮರದ ದಿಮ್ಮಿಯು ನೀರಿನಲ್ಲಿದ್ದಾಗ ನೆನೆದು ಹಿಗ್ಗುತ್ತದೆ. ಈ ಹಿಗ್ಗಿದ ಮರದ ತುಂಡು ರಂಧ್ರದಲ್ಲಿ ಬಿಗಿಯಾಗಿ ಕೂತು ನೀರು ಹೊರಬರದಂತೆ ಆದಷ್ಟು ತಡೆಯುತ್ತದೆ. ತೂಬುಗಳು ಸಾಮಾನ್ಯವಾಗಿ ಕೆರೆ ಏರಿಯಿಂದ ಸುಮಾರು ಹತ್ತರಿಂದ ಹದಿನೈದು ಅಡಿ ದೂರದಲ್ಲಿ ಇರಿಸಿರುತ್ತಾರೆ. ಇದರಿಂದ ಕಾಲುವೆ, ತೂಬು ಮತ್ತು ಏರಿಗೆ ಯಾವುದೇ ವಿಧವಾದ ಅಪಾಯವಿರುವುದಿಲ್ಲ.[೧೬] ಕೆರೆಯ ಏರಿಯನ್ನು ಯಾವಾಗಲೂ ಲಂಬವಾಗಿ ಕಟ್ಟದೆ ಅಂಕುಡೊಂಕಾಗಿಯೇ ಕಟ್ಟುತ್ತಾರೆ. ಇದರಿಂದ ನೀರಿನಿಂದ ಏರಿಗೆ ಬೀಳು ಒತ್ತಡ ಸಮನಾಗಿ ಹಂಚಿ ಹೋಗುತ್ತದೆ ಮತ್ತು ಏರಿ ಒಡೆದಾಗ ಅದನ್ನು ಸರಿಪಡಿಸುವುದು ಸುಲಭವಾಗುತ್ತದೆ.

ಕೆರೆಯಲ್ಲಿ ಸಂಗ್ರಹವಾದ ನೀರು ತೂಬಿನ ಮೂಲಕ ಹಾದು ಕಾಲುವೆಯ ಮೂಲಕ ಹೊರ ಬರುತ್ತದೆ. ಕೆರೆಯ ನೀರನ್ನು ಸಂಗ್ರಹಿಸಿ ಆಯಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಮಾರ್ಗಕ್ಕೆ ಕಾಲುವೆ ಎಂದು ಹೆಸರು. ಕಾಲುವೆಯು ಕೆರೆ ಏರಿಯ ಕೆಳಗಡೆಯಿಂದ ಹಾದು ಬರುತ್ತದೆ. ಇವುಗಳನ್ನು ಕಲ್ಲುಗಳಿಂದ ಕಟ್ಟಲಾಗಿರುತ್ತದೆ. ಕಾಲುವೆಗಳ ಮೂಲಕ ನೀರನ್ನು ಬಳಸಿಕೊಂಡು ವ್ಯವಸಾಯ ಮಾಡುತ್ತಿದ್ದರು. ಈ ರೀತಿ ಕೆರೆ ನೀರಾವರಿಗೊಳಪಟ್ಟ ಕೃಷಿ ಭೂಮಿಯನ್ನು ಅಚ್ಚುಕಟ್ಟು ಪ್ರದೇಶವೆಂದು ಕರೆಯಲಾಗುತ್ತಿತ್ತು. ಈ ಕೆರೆಗಳ ನಿರ್ವಹಣೆಯನ್ನು ನಂದಿಬೆಟ್ಟ ಪರಿಸರದಲ್ಲಿ ನೀರುಗಂಟಿಗಳೆಂಬುವವರು ಮಾಡುತ್ತಿದ್ದರು. ಇವರು ಕೆರೆಯಿಂದ ನೀರನ್ನು ಆಯಕಟ್ಟು ಪ್ರದೇಶಗಳಿಗೆ, ತೂಬುಗಳನ್ನು ನಿಯಂತ್ರಿಸಿ, ಕಾಲುವೆಗಳ

ಮುಖಾಂತರ ಹಾಯಿಸುತ್ತಿದ್ದರು. ಇವರ ಈ ಸೇವೆಗೆ ಪ್ರತಿಫಲವಾಗಿ ಆ ಪ್ರದೇಶದ ಉಪಯೋಗಕಾರರು ನಿರ್ಧಿಷ್ಟ ವೇತನವನ್ನು ಹಣದ ರೂಪದಲ್ಲೋ ಅಥವಾ ಧಾನ್ಯದ ರೂಪದಲ್ಲೋ ನೀಡುತ್ತಿದ್ದರು.

ನಂದಿಬೆಟ್ಟ ಪರಿಸರದ ಕೆಲವು ಮುಖ್ಯ ಕೆರೆಗಳು

ನಂದಿಬೆಟ್ಟ ಪರಿಸರದಲ್ಲಿ ಪ್ರಾಚೀನ ಕಾಲದಿಂದಲೂ ಸುಮಾರು ೪೦೦ ಕೆರೆಗಳು ಇದ್ದದ್ದು ಕಂಡುಬರುತ್ತವೆ. ಆದರೆ ಇಂದು ಇಷ್ಟು ಸಂಖ್ಯೆಯ ಕೆರೆಗಳನ್ನು ಕಾಣಲು ಸಾಧ್ಯವಾಗುತ್ತಿಲ್ಲ. ಆಧುನಿಕ ಯುಗದಲ್ಲಿ ಮಾನವ ತನ್ನ ದುರಾಶೆಗೆ ಬಲಿಯಾಗಿ ಕೆರೆಕುಂಟೆಗಳನ್ನು ನಾಶಮಾಡಿ, ತನ್ನ ಸ್ವಾರ್ಥ ಸಾಧನೆಯಿಂದಾಗಿ ಇವೆಲ್ಲ ಕಣ್ಮಾರೆಯಾಗುತ್ತಿವೆ. ವ್ಯವಸಾಯದ ನೆಪದಿಂದಾಗಿ ಒತ್ತುವರಿ ಮಾಡಿಕೊಳ್ಳಲಾಗುತ್ತದೆ. ಅವುಗಳಲ್ಲಿ ಅಳಿದುಳಿದ ಕೆಲವು ಮುಖ್ಯ ಕೆರೆಗಳಾದ ಕಂದವಾರಕೆರೆ, ಕುಪ್ಪಳ್ಳಿ ಕೆರೆ, ನಂದಿ ಅಥವಾ ಲಕ್ಷ್ಮಿಸಾಗರ ಕೆರೆ, ದೊಡ್ಡ ಮರಳಿ ಅಮಾನಿಕೆರೆ ಮುಂತಾದವುಗಳನ್ನು ಕೆಳಕಂಡಂತೆ ಕಾಣಬಹುದು.

ದೊಡ್ಡಮರಳಿ ಅಮಾನಿಕೆರೆ

ಇದು ನಂದಿಬೆಟ್ಟದಿಂದ ಪೂರ್ವಕ್ಕೆ ೬ ಕಿ.ಮೀ. ದೂರದಲ್ಲಿದೆ. ಇಲ್ಲಿ ಎರಡು ಕೆರೆಗಳಿದ್ದು, ದೊಡ್ಡ ಮತ್ತು ಚಿಕ್ಕಮರಳಿ ಅಮಾನಿಕೆರೆ ಎಂದು ಕರೆಯುವರು. ಈ ಕೆರೆಯನ್ನು ಯಾರು ಮತ್ತು ಯಾವಾಗ ಕಟ್ಟಿಸಿದರೆಂದು ತಿಳಿದುಬಂದಿಲ್ಲ. ಬಹುಶಃ ಇಲ್ಲಿ ಪಾಳೆಯಗಾರರ ಆಡಳಿತ ಇದ್ದುದ್ದರಿಂದ ಅವರ ಕಾಲದಲ್ಲಿ ನಿರ್ಮಾಣವಾಗಿರಬಹುದೆಂದು ಸ್ಥಳೀಯರ ಅಭಿಪ್ರಾಯ. ದೊಡ್ಡಮರಳಿ ಅಮಾನಿಕೆರೆ ಏರಿಯ ಉದ್ದವು ಸುಮಾರು ೨ ಕಿ.ಮೀ ಇದ್ದು ಎತ್ತರ ೯ ಮೀ. ಮತ್ತು ಏರಿಯ ಮೇಲ್ಭಾಗದಲ್ಲಿ ೮ ಮೀ. ಮತ್ತು ೫ ಮೀ. ಇದೆ. ಈ ಕೆರೆಗೆ ಎರಡು ಕಾಲುವೆಗಳಿವೆ. ಇದಕ್ಕೆ ವೃತ್ತಾಕಾರ ಮಾದರಿಯ ಒಂದು ತೂಬುಗಳು ಇವೆ. ತೂಬಿನ ಮುಂಭಾಗದಲ್ಲಿ ಸುಮಾರು ೧೫ ಮೀಟರ್‌ನ ಎರಡು ಕಂಬಗಳು ಅದರ ಮೇಲೆ ಅಡ್ಡ ತೊಲೆಯಾಗಿ ಕಂಬವನ್ನು ನಿಲ್ಲಿಸಿದ್ದು, ಈ ಕಂಬಗಳ ಒಂದು ಭಾಗದಲ್ಲಿ ವಿವಿಧ ಅಲಂಕಾರಿಕ ಗೆರೆಗಳು ನಾಗರ ಹಾವಿನ ಅಲಂಕಾರಿಕ ಕೆತ್ತನೆ ಕಂಡುಬರುತ್ತದೆ. ತೂಬಿನ ಹತ್ತಿರ ಏರಿಯು ಭದ್ರವಾಗಿರಲೆಂದು ದೊಡ್ಡದಾದ ಮರದ ದಿಮ್ಮಿಯನ್ನು ಬಳಸಿರುವುದು ಕಂಡುಬರುತ್ತದೆ. ಇದರ ವಿಸ್ತೀರ್ಣ ೧೭೦ ಚ.ಮೀ. ವಿಸ್ತೀರ್ಣವನ್ನು ಹೊಂದಿದೆ.

ದೊಡ್ಡ ಮರಳಿ ಅಮಾನಿಕೆರೆ ಪಕ್ಕದಲ್ಲಿ ಮತ್ತೊಂದು ಕೆರೆ ಕಂಡುಬರುತ್ತದೆ. ಈ ಕೆರೆಯ ಏರಿಯು ಪೂರ್ವದಿಕ್ಕಿನಲ್ಲಿದೆ. ಇದರ ಏರಿಯ ಉದ್ದ ಸುಮಾರು ೨ ಕಿ.ಮೀ. ಇದೆ. ಎತ್ತರ ೫ ಮೀಟರನ್ನು ಒಳಗೊಂಡಿದೆ. ಇದಕ್ಕೆ ಒಂದು ತೂಬು ಇದೆ. ಈ ಕೆರೆಯ ಮೇಲೆ ಯಾವುದೇ ದೇವರ ಗುಡಿಗಳು ಹಾಗೂ ಶಾಸನಗಳು ಕಂಡುಬರುವುದಿಲ್ಲ. ಹೈದರಾಬಾದ್ ಮತ್ತು ಬೆಂಗಳೂರಿಗೆ ಹಾದು ಹೋಗುವ

ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೭ ಇದರ ಮೇಲ್ಭಾಗದಲ್ಲಿಯೇ ಹೋಗುತ್ತದೆ. ಏರಿಯ ಮೇಲ್ಭಾಗವು ಸುಮಾರು ೪೦ ಅಡಿಗಳಷ್ಟು ಅಗಲವಿದೆ. ಈ ಕೆರೆಯ ಒಳಭಾಗದ ಏರಿಗೆ ಅಗಲವಾದ ಕಲ್ಲುಗಳಿಂದ ನಿರ್ಮಿಸಿದ್ದಾರೆ. ಹೊರಭಾಗದಲ್ಲಿ ಇಳಿಜಾರಾಗಿದ್ದು, ಕೆಲವು ಜಾತಿಯ ಬೇಲಿ ಮತ್ತು ಮುಳ್ಳಿನ ಸಸಿಗಳ ಬೆಳೆದಿರುವುದನ್ನು ಕಾಣಬಹುದು. ೯೫.೦೦ ಹೆಕ್ಟೇರ್ ಇದ್ದು ೧.೫೫ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಒದಗಿಸುತ್ತದೆ. ಇದು ಪಾಲಾರ್ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಇದು ಸುಮಾರು ೩೦ ಅಡಿ ಆಳವಾಗಿದೆ.

ನಂದಿಕೆರೆ ಅಥವಾ ಲಕ್ಷ್ಮೀಸಾಗರ ಕೆರೆ

ಇದು ನಂದಿಗ್ರಾಮದಿಂದ ೨ ಫರ್ಲಾಗ್ ಪೂರ್ವಕ್ಕೆ ಬೆಟ್ಟದ ತಪ್ಪಲಿನಲ್ಲಿದೆ. ಬಸವನ ಕಣಿವೆಗೆ ಹೋಗುವ ದಾರಿಯ ಬಲಗಡೆಗೆ ಬರುತ್ತದೆ. ಈ ಕೆರೆಯು ೮೦ ಚ.ಕಿ.ಮೀ. ವಿಸ್ತೀರ್ಣವನ್ನು ಒಳಗೊಂಡಿದೆ. ಏರಿಯ ಉದ್ದ ೨ ಕಿ.ಮೀ ಇದ್ದು ಎತ್ತರ ೬ ಮೀ ಮತ್ತು ಏರಿಯ ಮೇಲ್ಭಾಗ ೫ ಮೀ ಮತ್ತು ೬ ಮೀ ಇದೆ. ಈ ಕೆರೆಗೆ ಎರಡು ಕಾಲುವೆಗಳಿವೆ. ಇದಕ್ಕೆ ವೃತ್ತಾಕಾರ ಮಾದರಿಯ ಒಂದು ತೂಬುಗಳು ಇವೆ. ತೂಬಿನ ಮುಂಭಾಗದಲ್ಲಿ ಸುಮಾರು ೧೧ ಮೀಟರ್‌ನ ಎರಡು ಕಂಬಗಳು ಅವರ ಮೇಲೆ ಅಡ್ಡ ತೊಲೆಯಾಗಿ ಕಂಬವನ್ನು ನಿಲ್ಲಿಸಿದ್ದು ಈ ಕಂಬಗಳ ಎರಡೂ ಭಾಗದಲ್ಲಿ ಇರುವ ಚಿತ್ರಗಳನ್ನು ಗಮನಿಸಲಾಗಲಿಲ್ಲ ಕೆರೆಯಲ್ಲಿ ನೀರಿದ್ದ ಕಾರಣ ಸಮೀಪಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಈ ಕೆರೆಯ ಎದುರಿನಲ್ಲಿ ಆಂಜನೇಯ ಗುಡಿ ಇದ್ದು ಇಲ್ಲಿಗೆ ಭಕ್ತಾದಿಗಳು ಹಬ್ಬದ ದಿನಗಳಲ್ಲಿ ಒಂದು ಪೂಜೆ ಸಲ್ಲಿಸುತ್ತಾರೆ. ಕೆರೆಯ ಒಳಗೆ ಸಮ ಆಯತಾಕಾರದ ಕಲ್ಲುಗಳನ್ನು ಬಳಸಿ ಕಟ್ಟಲಾಗಿದೆ.

ಕೆರೆಯ ಬಗ್ಗೆ ಸ್ಥಳೀಯರಾಗಲಿ ಅಥವಾ ಸರ್ಕಾರದವರಾಗಲಿ ಯಾವುದೇ ರೀತಿಯ ಕಾಳಜಿ ವಹಿಸಿಲ್ಲ. ಕೆರೆಯ ಒತ್ತುವರಿ ಕೆಲಸ ನಿರಂತರವಾಗಿ ನಡೆದಿದೆ ಹಾಗೂ ಕೆರೆಯಲ್ಲಿ ಸಾಕಷ್ಟು ವಿವಿಧ ರೀತಿಯ ಸಸಿಗಳು ಬೆಳೆದಿರುವುದರಿಂದ, ಕೆರೆ ಸಂಪೂರ್ಣವಾಗಿ ಬೇಲಿ ಮತ್ತು ಇತರೆ ಗಿಡಗಳಿಂದ ಮುಚ್ಚಿಕೊಂಡು ಗುರುತು ಸಿಗದ ಹಾಗಾಗಿದೆ. ಕೆರೆಯಲ್ಲಿ ಕೊಳವೆ ಬಾವಿಗಳನ್ನು ಹಾಕಲಾಗಿದ್ದು ಒತ್ತುವರಿ ನಡೆಯುತ್ತದೆ. ಯಾರಿಗೂ ಇದರ ಬಗ್ಗೆ ಕಾಳಜಿ ಇಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಕೆರೆಯಲ್ಲಿ ಹೂಳಿನ ಪ್ರಮಾಣ ಹೆಚ್ಚಿ ನೀರು ನಿಲ್ಲಲು ಸ್ಥಳ ಕಡಿಮೆಯಾಗಿದೆ.

ಕುಪ್ಪಳ್ಳಿ ಕೆರೆ

ಇದು ನಂದಿಬೆಟ್ಟದ ಪೂರ್ವಕ್ಕೆ ೪ ಕಿ.ಮೀ. ದೂರದಲ್ಲಿದೆ. ಈ ಕೆರೆಯು ೧೬ ಹೆಕ್ಟೇರ್ ವಿಸ್ತೀರ್ಣವನ್ನು ಒಳಗೊಂಡಿದೆ. ಏರಿಯ ಉದ್ದ ೫ ಕಿ.ಮೀ. ಇದ್ದು ಎತ್ತರ ೭ ಮೀಟರ್ ಮತ್ತು ಏರಿಯ ಮೇಲ್ಭಾಗ ೪ ಮೀ ಮತ್ತು ೫ ಮೀ. ಇದೆ. ಈ ಕೆರೆಗೆ ಮೂರು ಕಾಲುವೆಗಳಿವೆ. ಇದಕ್ಕೆ

ಆಯತಾಕಾರದ ಮಾದರಿಯ ಒಂದು ತೂಬು ಇದೆ. ತೂಬಿನ ಮುಂಭಾಗದಲ್ಲಿ ೯ ಮೀಟರ್ ನ ಎರಡು ಕಂಬಗಳು ಅದರ ಮೇಲೆ ಅಡ್ಡ ತೊಲೆಯಾಗಿ ಕಂಬವನ್ನು ನಿಲ್ಲಿಸಿದ್ದು ಈ ಕಂಬಗಳ ಎರಡೂ ಭಾಗದಲ್ಲಿ ವಿವಿಧ ರೀತಿಯ ಅಲಂಕಾರಿಕ ಗೆರೆಗಳು ನಾಗರಹಾವಿನ ರೀತಿಯ ಅಲಂಕಾರಿಕ ಕೆತ್ತನೆ ಕಂಡುಬರುತ್ತದೆ. ಮಧ್ಯದ ಕೆಳಭಾಗದಲ್ಲಿ ಅರಳಿದ ಕಮಲದ ಕೆತ್ತನೆ ಇದೆ. ಈ ಕೆರೆಯ ಏರಿಯ ಮೇಲೆ ಯಾವುದೇ ದೇವರ ಗುಡಿ ಕಂಡುಬರುವುದಿಲ್ಲ. ಆಯತಾಕಾರದ ಕಲ್ಲುಗಳನ್ನು ಬಳಸಿ ಏರಿಯನ್ನು ನಿರ್ಮಾಣ ಮಾಡಲಾಗಿದೆ.

ಕಂದವಾರ ಕೆರೆ

ಇದು ನಂದಿಬೆಟ್ಟ ಪರಿಸರದಲ್ಲಿ ಕಂಡುಬರುವ ಅತ್ಯಂತ ವಿಶಾಲವಾದ ಕೆರೆ. ಈ ಕೆರೆಯು ನಂದಿಬೆಟ್ಟದ ದಕ್ಷಿಣಕ್ಕಿದೆ. ನಂದಿಬೆಟ್ಟದಿಂದ ಸುಮಾರು ೮ ಕಿ.ಮೀ. ದೂರದಲ್ಲಿದೆ. ಏರಿಯ ಉದ್ದ ೭ ಕಿ.ಮೀ ಇದ್ದು, ಎತ್ತರ ೮ ಮೀಟರ್ ಮತ್ತು ಏರಿಯ ಮೇಲ್ಭಾಗ ೫ ಮೀ ಮತ್ತು ೬ ಮೀ ಇದೆ. ದಕ್ಷಿಣ ಪಿನಾಕಿನಿ ನದಿಗೆ ಅಡ್ಡಲಾಗಿ ಕೆರೆಯನ್ನು ನಿರ್ಮಿಸಲಾಗಿದೆ. ಈ ಕೆರೆಯು ೨೫೨ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುತ್ತದೆ. ಈ ಕೆರೆಗೆ ಎರಡು ತೂಬುಗಳನ್ನು ಇರಿಸಲಾಗಿದ್ದು, ತೂಬುಗಳು ೧೨ ಮೀಟರ್ ಎತ್ತರವಾಗಿದ್ದು, ಇದರ ಮೇಲೆ ಆನೆ ಮತ್ತು ಸಿಂಹಗಳ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಚಿಕ್ಕಬಳ್ಳಾಪುರ ತಾಲೂಕಿನಲ್ಲಿರುವ ಈ ಕೆರೆಯ ಎದುರುಗಡೆ ಷಣ್ಮುಖ ದೇವರ ದೇವಾಲಯವಿದೆ. ಇದು ಸುಮಾರು ೨೦೦ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ಈ ಕೆರೆಯ ಏರಿಯ ನಿರ್ಮಾಣದಲ್ಲಿ ಗುಂಡಾಕಾರದ ಮತ್ತು ಆಯತಕಾರದ ದೊಡ್ಡ ಗಾತ್ರದ ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಈ ಕೆರೆಯನ್ನು ಚಿಕ್ಕಬಳ್ಳಾಪುರದ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾಗಿದೆ.

ಅದೇ ರೀತಿಯಾಗಿ ಇಲ್ಲಿ ಕಂಡುಬರುವ ಗೋಪಾಲಕೃಷ್ಣ ಕೆರೆಯು ಇದರಂತೆ ವಿಶಾಲವಾಗಿದೆ. ಈ ಕೆರೆಯಿಂದ ೨೯೦ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಇದೇ ತಾಲೂಕಿನ ಕಾಟಮಾಚನ ಹಳ್ಳಿ ಕೆರೆಯು ೨೧೯ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುತ್ತದೆ.

ಪ್ರಾಕೃತಿಕ ದೊಣೆಗಳು

ದೊಡ್ಡಮ್ಮನ ದೊಣೆ ಅಥವಾ ಪುಷ್ಕರಣೆ

ಇದು ನಂದಿಬೆಟ್ಟದ ಮೇಲಿರುವ ದೊಣೆಯಾಗಿದೆ. ಇದು ವಿಸ್ತೀರ್ಣದಲ್ಲಿ ಚಿಕ್ಕದಾಗಿದೆ. ಇದು ಬೆಟ್ಟದ ಮೇಲೆ ಇರುವ ಯೋಗನಂದೀಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ದೊಣೆಯಾಗಿದೆ. ಇದನ್ನು ಪುಷ್ಕರಣಿ ಎಂತಲೂ ಕರೆಯುತ್ತಾರೆ. ಇದು ಪಾರ್ವತಿ ಅಥವಾ ಮುಕ್ತಾಂಬ ದೇವಾಲಯದ ಬಲಭಾಗದಲ್ಲಿದೆ. ಈ ಕೊಳದ ನೀರು ಕುಡಿಯಲು ಯೋಗ್ಯವಾಗಿಲ್ಲ. ಇಲ್ಲಿ ಬೇಸಿಗೆ ಕಾಲದಲ್ಲಿಯೂ

ಸಹ ನೀರು ಇದ್ದು, ಹಸಿರುಬಣ್ಣದಿಂದ ಕೂಡಿರುತ್ತದೆ. ಇದು ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಾಣವಾಗಿದೆ. ಇದರ ಮೇಲ್ಭಾಗದ ಸುತ್ತಾ ತ್ರಿಕೋನಾಕಾರದಲ್ಲಿ ಕಲ್ಲಿನಿಂದ ನಿರ್ಮಿಸಿದ ಸುಮಾರು ೨೦ ಮೆಟ್ಟಿಲುಗಳಿವೆ. ಈ ದೊಡ್ಡಮ್ಮನ ದೋಣಿಯ ಉದ್ದ ಉತ್ತರ-ದಕ್ಷಿಣವಾಗಿ ೨೫ ಮೀಟರ್ ಮತ್ತು ಪೂರ್ವ-ಪಶ್ಚಿಮಾಭಿಮುಖವಾಗಿ ೨೦ ಮೀಟರ್ ಉದ್ದವಾಗಿದೆ.

ಅಮೃತ ಸರೋವರ ಅಥವಾ ಕೊಳ

ಇದು ನಂದಿಬೆಟ್ಟದ ಮಧ್ಯಭಾಗದಲ್ಲಿದೆ. ತುಂಬಾ ವಿಶಾಲವಾಗಿದ್ದು ಸುಂದರವಾಗಿದೆ. ವಿಶಾಲವಾಡ ಕಲ್ಲುಗಳಿಂದ ನಿರ್ಮಿತವಾಗಿದ್ದು ನೋಡಲು ಪುಷ್ಕರಣಿ ರೀತಿಯಲ್ಲಿದೆ. ಇದು ಸುಮಾರು ೨೦೦ ಚದುರ ಅಡಿಗಳ ವಿಸ್ತೀರ್ಣ ಹೊಂದಿದ್ದು ಕೊಳದ ಸುತ್ತಲೂ ಹಾಸುಕಲ್ಲುಗಳಿಂದ ಕೂಡಿದೆ. ಇಲ್ಲಿಂದಲೇ ಇಡೀ ನಂದಿಬೆಟ್ಟಕ್ಕೆ ನೀರಿನ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ಕೊಳದಿಂದ ನೀರನ್ನು ಪಂಪ್ ಸೆಟ್‌ನ್ನು ಅಳವಡಿಸುವುದರ ಮೂಲಕ ನೀರನ್ನು ವಿವಿಧ ಕೆಲಸಗಳಿಗೆ ಬಳಸಲಾಗುತ್ತದೆ. ಕೊಳದ ಸುತ್ತಲು ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ಸುಮಾರು ೩ ಅಡಿ ಎತ್ತರದ ಗೋಡೆಯನ್ನು ನಿರ್ಮಾಣ ಮಾಡಲಾಗಿದೆ. ಈ ಸರೋವರದ ಸುತ್ತ ತ್ರಿಕೋನಾಕಾರದಲ್ಲಿ ಕಲ್ಲಿನಿಂದ ನಿರ್ಮಿಸಿದ ಸುಮಾರು ೧೫೦ ಕ್ಕೂ ಹೆಚ್ಚು ಮೆಟ್ಟಿಲುಗಳನ್ನು ಹೊಂದಿದೆ. ಇದರ ಸಮೀಪದಲ್ಲಿ ಕರ್ನಲ್ ಕಪ್ಪೆಜ್ ಎಂಬುವನಿಂದ ಮೊದಲನೆಯ ಉದ್ಯಾನವು ಬೆಳೆಸಲ್ಪಟ್ಟಿತ್ತೆಂದು ಹೇಳಲಾಗುತ್ತದೆ. ಬ್ರಿಟಿಷ್ ಅಧಿಕಾರಿಗಳ ಕಾಲದಲ್ಲಿ ವಸತಿ ಗೃಹಗಳನ್ನು ನಿರ್ಮಿಸಿಕೊಂಡಿದ್ದರು. ಕನ್ನಿಂಗ್ ಹ್ಯಾಂ ಲಾಡ್ಜ್‌ಗೆ 'ಗಾಂಧಿನಿಲಯ' ಎಂಬ ಹೆಸರನ್ನು ಕೊಡಲಾಯಿತು. ಇದರ ಪಶ್ಚಿಮಕ್ಕೆ ಇಳಿಜಾರಾಗಿರುವ ಪ್ರಸ್ಥಭೂಮಿಯ ಮಧ್ಯದಲ್ಲಿ ಈ ಕೊಳವಿದೆ. ಇಲ್ಲಿಂದ ಸುಮಾರು ೫೦ ಗಜ ದೂರದಲ್ಲಿರುವ ಜಗುಲಿಯ ಮೇಲೆ ಟಿಪ್ಪುಸುಲ್ತಾನನು ನಮಾಜ್ ಮಾಡುತ್ತಿದ್ದನೆಂದು ಹೇಳಲಾಗುತ್ತದೆ. ಇದರ ಉದ್ದ ಪೂರ್ವ-ಪಶ್ಚಿಮಭಿಮುಖವಾಗಿ ೧೫೦ ಮೀಟರ್ ಉತ್ತರ-ದಕ್ಷಿಣವಾಗಿ ೨೦೦ ಮೀಟರ್ ಗಿಂತಲೂ ಉದ್ದವಾಗಿದೆ. ತೋಟಗಾರಿಕೆ ಇಲಾಖೆಯು ಇಲ್ಲಿ ವಿವಿಧ ರೀತಿಯ ಸಸ್ಯಗಳನ್ನು ಬೆಳೆಸಲು ನೀರನ್ನು ಇಲ್ಲಿಂದ ಪೂರೈಸಿಕೊಳ್ಳಲಾಗುತ್ತದೆ.

ಅಂತರಗಂಗೆ

ನಂದಿಬೆಟ್ಟದ ಮಧ್ಯಭಾಗದಲ್ಲಿ ಕಂಡುಬರುತ್ತದೆ. ಅಂದರೆ ಪಾತಾಳಗಂಗೆಯಿಂದ ೨೦ ಗಜ ದೂರದಲ್ಲಿ ಬಲಭಾಗಕ್ಕೆ ಬರುತ್ತದೆ. ಇದು ನೈಸರ್ಗಿಕವಾಗಿ ದೊಡ್ಡ ಬಂಡೆಯ ತಳಭಾಗದಲ್ಲಿ ಕಂಡುಬಂದಿದ್ದು, ಸುಮಾರು ೨೦ ಅಡಿ ಅಳವನ್ನು ಹೊಂದಿದೆ. ಈ ದೋಣಿಗೆ ಮುಂಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ಅಡ್ಡಲಾಗಿ ತಡೆಗೋಡೆ ನಿರ್ಮಿಸಿದ್ದು, ನೀರುನಿಲ್ಲಲು ಸಹಾಯಕವಾಗಿದೆ. ಈ ದೋಣೆಯಲ್ಲಿ ಎಲ್ಲಾ ಕಾಲದಲ್ಲಿಯೂ ನೀರುದೊರೆಯುತ್ತದೆ. ಇಲ್ಲಿಯ ನೀರು ತುಂಬಾ ತಿಳಿ ಹಾಗೂ

ತಣ್ಣಗೆ ಇರುತ್ತದೆ. ಬೆಟ್ಟದಿಂದ ಆವೃತ್ತವಾಗಿರುವುದರಿಂದ ನೀರು ಶುಭ್ರವಾಗಿರುತ್ತದೆ. ಇದು ಪಾಳೆಯಗಾರರ ಕಾಲದಲ್ಲಿ ನಿರ್ಮಿಸಿದಂತಹ ದೋಣೆಯಾಗಿದೆ. ಈ ದೋಣೆಯ ಒಳಗಡೆ ಇಳಿದು ಹೋಗಲು ಕಲ್ಲುಗಳಿಂದ ಕೂಡಿದ ಮೆಟ್ಟಿಲುಗಳನ್ನು ಮಾಡಲಾಗಿದೆ. ಈ ದೋಣೆಯು ಬೃಹತ್ತಾದಂತಹ ಸುಮಾರು ೭೦ ಅಡಿ ಎತ್ತರದ ಕಡಿದಾದ ಬಂಡೆಗಳನ್ನು ಹೊಂದಿದ್ದು, ಅದರ ತಳಭಾಗದಲ್ಲಿ ಈ ದೋಣೆ ಕಂಡುಬರುತ್ತದೆ.

ಪಾತಾಳ ಗಂಗೆ

ನಂದಿಬೆಟ್ಟದಲ್ಲಿ ಬರುವ ದೋಣೆಗಳಲ್ಲಿ ಪಾತಾಳಗಂಗೆ ಪ್ರಮುಖವಾದ ದೋಣೆಯಾಗಿದೆ. ಈ ಕೊಳವು ಅಮೃತ ಸರೋವರದ ಪಕ್ಕದಲ್ಲಿ ಕಂಡುಬರುತ್ತದೆ. ವಿಶಾಲವಾದ ಮತ್ತು ಸುಂದರವಾದ ಕೊಳವಾಗಿದೆ. ಇದನ್ನು ಪ್ರಾರಂಭದಲ್ಲಿ ಮಣ್ಣಿನಿಂದ ಕೂಡಿದ ಕೊಳವಾಗಿದ್ದು, ನಂತರ ಇದಕ್ಕೆ ಸುತ್ತಲೂ ಅಂದರೆ ಒಳಭಾಗದಲ್ಲಿ ಕಲ್ಲುಗಳನ್ನು ಕಟ್ಟಲಾಗಿದೆ. ನೀರನ್ನು ಸಂಗ್ರಹಿಸಿಡುವ ಸಲುವಾಗಿ ಈ ರೀತಿ ಮಾಡಲಾಗಿದೆ. ಇದರ ಸುತ್ತಲೂ ಗಿಡಮರಗಳಿಂದ ಕೂಡಿದ್ದು ಪತ್ತೆ ಹಚ್ಚುವುದೇ ಕಷ್ಟವೆನಿಸುತ್ತದೆ. ಇದರಲ್ಲಿ ಯಾವಾಗಲೂ ನೀರುತ್ತದೆ. ವೃತ್ತಾಕಾರವಾಗಿದ್ದು ಒಂದು ಹಂತದವರೆಗೆ ಒಳಭಾಗದಲ್ಲಿ ಕಲ್ಲು ಬಳಸಲಾಗಿದೆ. ಇದರ ಮೇಲ್ಭಾಗವೆಲ್ಲಾ ಮಣ್ಣಿನಿಂದ ಕೂಡಿದೆ. ಇದು ಪಾಳೆಯಗಾರರ ಕಾಲದಲ್ಲಿ ಜನರಿಗೆ ಸೈನಿಕರಿಗೆ ನೀರೊದಗಿಸುವ ಒಂದು ಪ್ರಮುಖ ದೋಣಿಯಾಗಿದೆ. ಇದರ ಆಳ ಸುಮಾರು ೧೫ ಅಡಿಗಳಿವೆ.

ನರಸಪ್ಪನ ಕುಂಟಿ

ನರಸಪ್ಪನ ಕುಂಟೆ ನಂದಿಬೆಟ್ಟದ ಯೋಗನಂದೀಶ್ವರ ದೇವಾಲಯದ ಹಿಂಭಾಗದಲ್ಲಿ ಕಂಡುಬರುತ್ತದೆ. ಕಲ್ಯಾಣ ಮಂಟಪಕ್ಕೆ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಎರಡು ದ್ವಾರಗಳಿದ್ದು, ಉತ್ತರದ ದ್ವಾರ ಅಮ್ಮನವರ ಗುಡಿ(ಮುಕ್ತಾಂಬೆ) ಬರುತ್ತದೆ. ಈ ದೇವಾಲಯದ ಆವರಣದಲ್ಲಿ ಒಂದು ಕಲ್ಯಾಣಿಯಿದ್ದು ಅದನ್ನು 'ದೊಡ್ಡಮ್ಮನ ದೋಣೆ' ಎಂದು ಕರೆಯುತ್ತಾರೆ. ದೇವಾಲಯದ ಹಿಂಭಾಗದಲ್ಲಿ ಮತ್ತೊಂದು ಕಲ್ಯಾಣಿಯಿದ್ದು ಇದನ್ನು ನರಸಪ್ಪನ ಕುಂಟೆ ಎಂದು ಕರೆಯುತ್ತಾರೆ. ಈ ಕಲ್ಯಾಣಿಗೆ ನರಸಪ್ಪನ ಕುಂಟೆ ಎಂದು ಕರೆಯಲು ಕಾರಣ ತಿಳಿದುಬಂದಿಲ್ಲ. ಬಹುಷಃ ದೇವಾಲಯಕ್ಕೆ ಸಂಬಂಧಿಸಿದ ವ್ಯಕ್ತಿಗಳು ಅಥವಾ ಭಕ್ತರು ನಮ್ಮ ಇಷ್ಟಾರ್ಥಗಳನ್ನು ಪೂರೈಸಿದ ನೆನಪಿಗಾಗಿ ದೇವರ ಸನ್ನಿಧಿಯಲ್ಲಿ ದೇವಾಲಯದ ಉಪಯೋಗಕ್ಕೆ ಈ ಕಲ್ಯಾಣಿಯನ್ನು ನಿರ್ಮಿಸಿರಬಹುದು.

ಇದು ನೋಡಲು ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಾಣವಾಗಿದ್ದು, ಚೌಕಾಕಾರವಾಗಿದೆ. ಕಲ್ಲುಗಳಿಂದ ಮಾಡಿದ ಮೆಟ್ಟಿಲುಗಳನ್ನು ಹೊಂದಿದೆ. ಇದು ಉತ್ತರ-ದಕ್ಷಿಣವಾಗಿ ಸುಮಾರು ೨೦ ಮೀ. ಉದ್ದ, ಪೂರ್ವ-ಪಶ್ಚಿಮವಾಗಿ ೨೫ ಮೀ. ಅಗಲ ಹಾಗೂ ೧೫ ಮೀ. ಆಳವಾಗಿದೆ. ನೋಡಲು ಸುಂದರವಾದ ಕಲ್ಯಾಣಿಯಾಗಿದೆ. ಇದು ಬೆಟ್ಟದ ಮೇಲಿದ್ದರೂ ಯಾವಾಗಲೂ ತಿಳಿನೀರಿನಿಂದ ಕೂಡಿರುತ್ತದೆ.

ಬೆಟ್ಟಕ್ಕೆಂದು ಬರುವ ಜನರು ಇದರ ನೀರನ್ನು ಬಳಸುತ್ತಾರೆ. ಬೇಸಿಗೆಯಲ್ಲಿಯೂ ಸಹ ಇಲ್ಲಿ ನೀರುತ್ತದೆ. ಈ ಕುಂಟೆಯ ಸುತ್ತ ಯಾವುದೇ ಗೋಡೆ ನಿರ್ಮಾಣವಾಗಿಲ್ಲದಿರುವುದು ಕಂಡುಬರುತ್ತದೆ.

ಶೃಂಗತೀರ್ಥ ಅಥವಾ ಶ್ರವಣತೀರ್ಥ

ಈ ಪರ್ವತದ ಅಥವಾ ನಂದಿಬೆಟ್ಟದ ಈಶಾನ್ಯ ದಿಕ್ಕಿನಲ್ಲಿ ಕಂಡುಬರುತ್ತದೆ. ನೋಡಲು ಸುಂದರವಾಗಿದ್ದು ಇದನ್ನು ಬಾವಿ ಎಂತಲೂ ಕರೆಯುತ್ತಾರೆ. ಈ ಶೃಂಗತೀರ್ಥ ತನ್ನದೇ ಆದ ಪೌರಾಣಿಕ ಸ್ಥಳ ಮಹತ್ವವನ್ನು ಪಡೆದುಕೊಂಡಿದೆ. ನಂದಿಯು ತನ್ನ ದೋಷ ನಿವಾರಣೆಗಾಗಿ ಕುಂಷ್ಮಾಂಡ ಋಷಿಯ ಆಜ್ಞೆಯಂತೆ ತಪಸ್ಸು ಮಾಡಲು ನಿರ್ಧರಿಸಿ ನಂದಿಬೆಟ್ಟಕ್ಕೆ ಬರುತ್ತಾನೆ. ಇಲ್ಲಿಗೆ ಬಂದ ಕೂಡಲೇ ಅವರು ಒಂದು ದೊಡ್ಡ ಗೂಳಿಯಾಗಿ ಬದಲಾವಣೆ ಹೊಂದಿ ತನ್ನ ಶೃಂಗಗಳಿಂದ ಬಗೆದು ತೀರ್ಥವನ್ನು ನಿರ್ಮಿಸಿ ಅದರಲ್ಲಿ ಮಿಂದು ತಪಸ್ಸಿಗೆ ಕುಳಿತನು. ಈ ಸರಸ್ಸೆ ಮುಂದೆ ಶೃಂಗತೀರ್ಥವೆಂದು ಹೆಸರು ಪಡೆಯಿತು. ಈಗ ಇದು ನೋಡಲು ಪಾಳುಬಿದ್ದ ಬಾವಿಯಂತೆ ಕಾಣಿಸುತ್ತದೆ. ಇದರಲ್ಲಿ ನೀರಿದ್ದರೂ ಉಪಯೋಗಿಸುವುದಿಲ್ಲ.

ಬಾವಿ

ನಂದಿಬೆಟ್ಟ ಪರಿಸರದ ಭೂಪ್ರದೇಶವು ಅಲ್ಪಾವಧಿಯ ಮುಂಗಾರು ಮಾನ್ ಸೂನ್ ಮಳೆಯ ಮೇಲೆ ಅವಲಂಬಿತವಾಗಿದೆ. ಈ ಬೆಟ್ಟದಲ್ಲಿ ಪಂಚ ನದಿಗಳಾದ ಪಿನಾಕಿನಿ, ಪಾಪಾಘ್ನಿ ಪಾಲಾರ್, ಸ್ವರ್ಣಮುಖಿ ಮತ್ತು ಅರ್ಕಾವತಿ ನದಿಗಳು ಹುಟ್ಟಿದರೂ, ವರ್ಷಪೂರ್ತಿ ಹರಿಯುವ ಜೀವನ ನದಿಗಳಲ್ಲ. ಮಳೆಗಾಲದಲ್ಲಿ ಮಳೆಯ ನೀರಿನಿಂದ ಕೆಲವು ನದಿಗಳು ಹರಿಯುತ್ತವೆ. ಉಳಿದ ಕೆಲವು ನದಿಗಳು ಇಲ್ಲಿ ಹುಟ್ಟಿ ಗುಪ್ತಗಾಮಿನಿಯಾಗಿ ಹರಿಯುತ್ತವೆ. ಆದ್ದರಿಂದ ಈ ಪ್ರದೇಶದಲ್ಲಿ ಕೆರೆಗಳೇ ನೀರಿಗೆ ಆಧಾರವಾದ್ದರಿಂದ ಅವುಗಳು ಕೂಡ ಮಳೆ ಸರಿಯಾಗಿ ಆದಲ್ಲಿ ಮಾತ್ರ ತುಂಬುತ್ತಿದ್ದವು. ಆದ ಕಾರಣ ಈ ಪ್ರದೇಶದ ಕೃಷಿಕರು ಅನಿವಾರ್ಯವಾಗಿ ಅಂತರ್ಜಲ ಮೂಲಗಳನ್ನು ಅವಲಂಬಿಸಬೇಕಾಯಿತು. ಇದರಿಂದಾಗಿ ಬಾವಿಗಳನ್ನು ಅಗಿದು ವ್ಯವಸಾಯಕ್ಕೆ ಬಳಸಿಕೊಂಡರು. ಹೀಗೆ ತೆಗೆಯಲಾದ ಬಾವಿಗಳಿಂದ ಅಂತರ್ಜಲ ನೀರು ಸದಾ ದೊರಕುತ್ತಿತ್ತು. ಈ ರೀತಿಯ ಬಾವಿ ನೀರಾವರಿಯಿಂದ ಸುಮಾರು ಎಕರೆ ಕೃಷಿಭೂಮಿಗೆ ನೀರೊದಗಿಸಬಹುದಿತ್ತು. ಬಾವಿ ನೀರಾವರಿಯ ಕಾರ್ಯಸ್ಥಳೀಯ ಮತ್ತು ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಸಾಧ್ಯವಾಗುತ್ತಿತ್ತು. ನೀರಾವರಿ ಬಾವಿಗಳಲ್ಲದೆ ಸೇದೋಬಾವಿಗಳು ಇರುತ್ತಿದ್ದವು. ಇದರ ನೀರನ್ನು ಜನ ಕುಡಿಯಲು ಬಳಸುತ್ತಿದ್ದರು. ಈ ನೀರನ್ನು ಹಗ್ಗವನ್ನು ಬಿಂದಿಗೆಗೆ ಕಟ್ಟಿ ಅದರ ಮೂಲಕ ನೀರು ಪಡೆಯುತ್ತಿದ್ದರು. ಇನ್ನೂ ಕೆಲವು ಬಾವಿಗಳಿಗೆ ಕಲ್ಲಿನಿಂದ ನಿರ್ಮಿಸಿದ ಮೆಟ್ಟಿಲುಗಳಿದ್ದು, ಅದರ ಮೂಲಕ ಬಾವಿ ಒಳಗಡೆ ಹೋಗಿ ನೀರನ್ನು ತರುತ್ತಿದ್ದರು. ಈ ರೀತಿಯ ಬಾವಿಯನ್ನು ಮೆಟ್ಟಿಲು ಬಾವಿಗಳೆಂದು ಕರೆಯುತ್ತಾರೆ.

ಅಧಿಕ ಭೂಪ್ರದೇಶಕ್ಕೆ ನೀರು ನೀಡುವ(ಒದಗಿಸುವ) ಸಾಮರ್ಥ್ಯ ಬಾವಿಗಳು ಹೊಂದಿರುತ್ತಿರಲಿಲ್ಲ. ಬಾವಿಯ ನೀರನ್ನು ಬೇಸಾಯಕಲ್ಲದೆ ಸಾಮಾಜಿಕ ಮತ್ತು ಧಾರ್ಮಿಕ ಕೆಲಸದಲ್ಲಿ ಬಳಕೆಯಾಗುವುದರೊಂದಿಗೆ, ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಕೆಲವು ಬಾವಿಗಳನ್ನು ದೇವಾಲಯದ ಹಾಗೂ ದೇವರುಗಳ ವಿವಿಧ ಕಾರ್ಯಗಳಿಗೆಂದೇ ನಿರ್ಮಿಸಲಾಗಿದ್ದವು. ಅನೇಕ ಶುಭ ಕಾರ್ಯಗಳಿಗೆಂದೇ ಜನರು ಇಂದಿಗೂ ಬಾವಿಗಳನ್ನು ಅವಲಂಬಿಸಿದ್ದಾರೆ. ಬಾವಿಯ ನೀರು ಶ್ರೇಷ್ಠವಾಗಿದ್ದು ಪರಿಶುದ್ಧವಾಗಿದೆ ಎಂಬುದು ಜನರ ನಂಬಿಕೆಯಾಗಿತ್ತು. ಸಿಂಧು ಜನರ ಕಾಲದಿಂದಲೂ ಬಾವಿಗಳು ತಮ್ಮ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿವೆ. ಬಾವಿಗಳನ್ನು ಕಟ್ಟಿಸುವುದು ಜನೋಪಯೋಗಿ ಕಾರ್ಯಗಳಿಗೆ ಬಳಸುವುದು ಒಂದು ಪುಣ್ಯದ ಕೆಲಸವೆಂದು ವಿಜಯನಗರ ಕಾಲದ ಒಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಈ ದಿಸೆಯಲ್ಲಿ ರಾಜ್ಯದ ಮಂತ್ರಿಯಾಗಿದ್ದ ಲಕ್ಷಣ ಅಮಾತ್ಯನಿಗೆ ಅವನ ತಾಯಿಯ ಉಪದೇಶ "ಕೆರೆಯಂ ನಿರ್ಮಿಸು ಬಾವಿಯಂ ಸವೆಯಿಸು" ಎಂಬುದನ್ನು ಸ್ಮರಿಸಬಹುದು. ಸಾಮಾನ್ಯವಾಗಿ ನೀರಾವರಿಗೆಂದೇ ನಿರ್ಮಿಸಿದ ಬಾವಿಗಳು ಊರಿನಿಂದ ಹೊರಗಡೆಯ ಪ್ರದೇಶಗಳಿಂದ ಹೊಲ, ಗದ್ದೆ, ತೋಟಗಳಲ್ಲಿರುತ್ತಿದ್ದವು. ಕುಡಿಯಲು ಮತ್ತು ದೇವಸ್ಥಾನದ ಧಾರ್ಮಿಕ ಕಾರ್ಯಗಳಿಗೆಂದೇ ತೆಗೆಸಿದ ಬಾವಿಗಳು ಜನವಸತಿ ವಲಯದಲ್ಲಿರುತ್ತಿದ್ದವು. ದೇವಸ್ಥಾನದ ಪ್ರದೇಶದಲ್ಲಿ ಹಲವು ಪುಷ್ಕರಣಿ ಹಾಗೂ ಬಾವಿಗಳನ್ನು ನೋಡಬಹುದು. ಇದಕ್ಕೆ ಉದಾಹರಣೆಯಾಗಿ ನಂದಿಯ ಭೋಗನಂದೀಶ್ವರ ದೇವಾಲಯದ ಆವರಣದಲ್ಲಿ ಮೂರು ಪುಷ್ಕರಣಿಗಳಾದ ಶೃಂಗೀತೀರ್ಥ, ಪಂಚಕಲ್ಯಾಣಿ, ಕಲ್ಯಾಣಿ ಮತ್ತು ಎರಡು ಬಾವಿಗಳು ಕಂಡುಬರುತ್ತದೆ. ಅದೇ ರೀತಿ ಬೆಟ್ಟದ ಮೇಲಿರುವ ಯೋಗನಂದೀಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ದೊಡ್ಡಮ್ಮನ ದೋಣಿ ಅಥವಾ ಪುಷ್ಕರಣಿ ಇರುವುದನ್ನು ಗಮನಿಸಬಹುದು. ಬಾವಿಗಳನ್ನು ತೋಡಿಸಿರುವುದು ಹಾಗೂ ಪುಷ್ಕರಣಿಗಳನ್ನು ನಿರ್ಮಿಸಿರುವುದು ವಿಜಯನಗರ ಕಾಲದಲ್ಲಿ ಕಂಡುಬರುತ್ತದೆ. ಅದೇ ರೀತಿ ನಂದಿಯ ಚಿಕ್ಕಬಳ್ಳಾಪುರ ಮತ್ತು ಆವತಿಯ ಪಾಳೆಗಾರರ ಕಾಲದಲ್ಲೂ ಬಾವಿಗಳು ನಿರ್ಮಾಣವಾಗಿರುವುದು ಕಂಡುಬರುತ್ತದೆ.

ನಂದಿಬೆಟ್ಟ ಪರಿಸರದಲ್ಲಿ ಕಂಡುಬರುವ ಬಹುಪಾಲು ಬಾವಿಗಳು ದೇವಾಲಯದ ಪಕ್ಕದಲ್ಲಿ ಮತ್ತು ಆವರಣದಲ್ಲಿ ಹೆಚ್ಚಾಗ ನಿರ್ಮಾಣವಾಗಿರುವುದು ಕಂಡುಬರುತ್ತದೆ. ಕಂದವಾರ ಕೆರೆಯ ಮುಂಭಾಗದಲ್ಲಿ ಷಣ್ಮುಖ ದೇವರ ದೇವಾಲಯವಿದ್ದು, ಅದರ ಪಕ್ಕದಲ್ಲಿ ಬಾವಿಯಿದೆ. ಇದರ ಮೇಲ್ಭಾಗ ವೃತ್ತಾಕಾರವಾಗಿದ್ದು ಒಳಭಾಗ ಆಯತಕಾರವಾಗಿರುವ ಬಹಳ ಚಿಕ್ಕದಾದ ವಿಸ್ತೀರ್ಣವನ್ನು ಹೊಂದಿದೆ. ಇದಕ್ಕೆ ಮೇಲ್ಭಾಗದಲ್ಲಿ ನೀರನ್ನು ಸೇದಲು ಎರಡು ಪಕ್ಕದಲ್ಲಿ ಸುಮಾರು ೮ ಅಡಿ ಎತ್ತರದ ಕಲ್ಲುಗಳನ್ನು ನಿಲ್ಲಿಸಿ ಅದಕ್ಕೆ ನೀರು ಸೇದಲು ಅನುಕೂಲವಾಗುವಂತೆ ಗಾಲಿಯನ್ನು ಅಳವಡಿಸಲಾಗಿದೆ.

ಅದೇ ರೀತಿ ಈ ದೇವಾಲಯದಿಂದ ಒಂದು ಫರ್ಲಾಗ ದೂರದಲ್ಲಿ ಈಶ್ವರ ಮತ್ತು ಚಾಮುಂಡೇಶ್ವರಿ ದೇವಾಲಯವಿದ್ದು, ದೇವಾಲಯದ ಆವರಣದಲ್ಲಿ ಒಂದು ಬಾವಿ ಕಂಡುಬರುತ್ತದೆ. ಇದರ ಮೇಲ್ಭಾಗ ವೃತ್ತಾಕಾರವಾಗಿದ್ದ, ಬಾವಿಯ ಒಳಗಡೆ ಹೋಗಲು ಚಿಕ್ಕ ಚಪ್ಪಡಿ ಕಲ್ಲುಗಳಿಂದ ಮಾಡಿದ ಮೆಟ್ಟಿಲುಗಳನ್ನು ಮಾಡಲಾಗಿದ್ದು, ಅದು ದೇವಸ್ಥಾನಕ್ಕೆ ಮೀಸಲಾದ ಬಾವಿ ಎಂದು ಗ್ರಹಿಸಬಹುದಾಗಿದೆ. ನಂದಿಬೆಟ್ಟ ಪರಿಸರದಲ್ಲಿ ಕಂಡುಬರುವ ಇತರೆ ಬಾವಿಗಳೆಂದರೆ ನೀರಾವರಿಗಾಗಿ ನಿರ್ಮಿಸಿಕೊಂಡ ನಾಗರಬಾವಿ, ಏತವನ್ನು ಕಟ್ಟಿ ಅದರ ಮೂಲಕ ನೀರನ್ನು ವ್ಯವಸಾಯಕ್ಕೆ ಬಳಸಿರುವುದು ಕಂಡುಬರುತ್ತದೆ. ಈ ಬಾವಿ ವೃತ್ತಾಕಾರವಾಗಿದ್ದು ಅದಕ್ಕೆ ಒಂದು ಭಾಗದಲ್ಲಿ ಎರಡು ಎತ್ತರವಾದ ಸುಮಾರು ೨ ೧/೨ ಅಡಿ ಅಗಲದ ಮತ್ತು ೧೦ ಅಡಿ ಉದ್ದದ ಕಲ್ಲುಗಳನ್ನು ಒರೆಯಾಗಿ ನಿಲ್ಲಿಸಲಾಗಿದ್ದು ಆ ಕಲ್ಲುಗಳಿಗೆ ತೂತುಗಳನ್ನು ಮಾಡಿರುತ್ತಾರೆ. ಅದಕ್ಕೆ ಸರಿಹೊಂದಿಕೊಳ್ಳುವಂತೆ ಮರವನ್ನು ಅಡ್ಡಲಾಗಿ ನಿರ್ಮಿಸಿರುತ್ತಾರೆ. ಮತ್ತು ನೀರನ್ನು ಬಾವಿಯಿಂದ ಎತ್ತಲು ಒಂದು ಮರ, ಅದಕ್ಕೆ ಪಾತ್ರೆಯ ರೀತಿ ಇರುವ ಬಾನೆಯನ್ನು ಅಳವಡಿಸಿದ್ದು ನಿಂತುಕೊಳ್ಳಲು ಮರಗಳನ್ನು ಯಾತದ ಕೆಳಭಾಗದಲ್ಲಿ ನಿರ್ಮಿಸಿರುತ್ತಾರೆ. ಈ ರೀತಿಯ ಬಾವಿಯಿಂದ ವ್ಯವಸಾಯದ ಬೆಳಗೆ ನೀರನ್ನು ಕಾಲುವೆಗಳ ಮೂಲಕ ಹಾಯಿಸಲಾಗುತ್ತದೆ. ಈ ರೀತಿಯ ಬಾವಿಗಳು ಇಲ್ಲಿ ಕಂಡುಬರುತ್ತವೆ.

ಒಟ್ಟಾರೆ ಹೇಳುವುದಾದರೆ ನಂದಿಬೆಟ್ಟ ಪರಿಸರದಲ್ಲಿ ಕಂಡುಬರುವ ಬಾವಿಗಳು ಬಹುಮುಖ ಉಪಯೋಗವನ್ನು ಜನರಿಗೆ ಒದಗಿಸುತ್ತಿದ್ದುದ್ದು ಕಂಡುಬರುತ್ತದೆ. ಪ್ರಸ್ತುತ ಈ ಬಾವಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತದೆ. ಕಾರಣ ಅವುಗಳಿಂದ ನೀರಿನ ಪೂರೈಕೆಯ ಸಾಮರ್ಥ ಕಡಿಮೆಯಾಗಿರುವುದು ಮತ್ತು ಹೆಚ್ಚುತ್ತಿರುವ ಕೊಳವೆ ಬಾವಿಗಳಿಂದಾಗಿ ಅಂತರ್ಜಲಮಟ್ಟ ಕಡಿಮೆಯಾಗಿರುವುದರಿಂದ ಬಾವಿಗಳ ಸಂಖ್ಯೆ ವಿರಳವಾಗಿರುವುದು ಈ ಪರಿಸರದಲ್ಲಿ ಕಂಡುಬರುತ್ತದೆ.

ಅಡಿಟಿಪ್ಪಣಿಗಳು

೧. ವಾಸುದೇವನ್ ಸಿ.ಎಸ್., **ಹಂಪಿ ಪರಿಸರದ ಕೆರೆಗಳು**, ಪು.೬

೨. ಥಾಪರ್ ಬಿ.ಕೆ., **ರೀಸೆಂಟ್ ಆರ್ಕಿಯಾಜಿಕಲ್ ಡಿಸ್ಕವರಿ ಇನ್ ಇಂಡಿಯಾ**, ಪು.೧೭೧

೩. ವಾಸುದೇವನ್ ಪಿ.ಎಸ್., **ಪೂರ್ವೋಕ್ತ**, ಪು.೭

೪. ಅದೇ, ಪು.೭,೧೧

೫. ರಮೇಶ್ ನಾಯರ್, **ಪೂರ್ವೋಕ್ತ**, ಪು.೧೨೬

೬. ದೀಕ್ಷಿತ್ ಜಿ.ಎಸ್., ಕುಪ್ಪುಸ್ವಾಮಿ ಜಿ.ಆರ್. ಮತ್ತು ಮೋಹನ್ ಎಸ್.ಕೆ., **ಕರ್ನಾಟಕದಲ್ಲಿ ಕೆರೆ ನೀರಾವರಿ (ಕನ್ನಡ ಅನುವಾದ ನೀಲತ್ತಹಳ್ಳಿ ಕಸ್ತೂರಿ)**, ಪು.೨೬, ೪೯

೭. ರಾವ್ ಸಿ.ಹೆಚ್., ಮೈಸೂರು ಗೆಜೆಟಿಯರ್, ಸಂ.೧, ಪು.೧೦

೮. ಮೈಸೂರು ಆರ್ಕಿಯಾಲಾಜಿಲ್ ರಿಪೋರ್ಟ್ ೧೯೨೯, ಪು.೫೦, ಪು.೨೧೧

೯. ನೀರಾವರಿ ಇಲಾಖಾ ವರದಿ, ೨೦೦೧, ಪು.೨೧, ಕೋಲಾರ

೧೦.ನೀರಾವರಿ ಇಲಾಖಾ ವರದಿ ಚಿಕ್ಕಬಳ್ಳಾಪುರ, ೨೦೦೮

೧೧. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು.೧೭

೧೨. ಕೋಲಾರ ಜಿಲ್ಲಾ ಶಾಸನಗಳು

೧೩. ದೀಕ್ಷಿತ್ ಜಿ.ಎಸ್., ಕುಪ್ಪುಸ್ವಾಮಿ ಜಿ.ಆರ್., ಮೋಹನ್ ಎಸ್.ಕೆ., ಪೂರ್ವೋಕ್ತ, ಪು.೨೦೨

೧೪. ಕೋಲಾರ ಜಿಲ್ಲಾ ಗೆಜೆಟಿಯರ್, ಎಚ್. ಚಿತ್ತರಂಜನ್ (ಸಂ), ೨೦೦೫, ಪು.೨೦

೧೫. ನಾಗರಾಜ್ ರಾವ್ ಎಂ.ಎಸ್., ಪ್ರೋಟೋ ಹಿಸ್ಟಾರಿಕ್ ಕಲ್ಚರ್ಸ್ ಆಫ್ ತುಂಗಭದ್ರಾ ವ್ಯಾಲಿ (ಎ ರಿಪೋರ್ಟ್ ಆನ್ ಹಳ್ಳೂರು ಎಕ್ಸರವೇಶನ್) ಪು.೨೩ ಮತ್ತು ೧೩೪, ೧೪೨

೧೬. ರಮೇಶ್ ನಾಯಕ್(ಸಂ), ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಕ್ಕೆ ಮರುಚಿಂತನೆ, ಲೇ. ವಾಸುದೇವನ್ ಸಿ.ಎಸ್., ಪು.೧೨೬

ಅಧ್ಯಾಯ ೭

ಸಮಾರೋಪ

೭

ಸಮಾರೋಪ

ಪ್ರಾಚೀನ ಕಾಲದಿಂದಲೂ ಕರ್ನಾಟಕವು ಪುರಾತನ ಸಂಸ್ಕೃತಿ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಇತಿಹಾಸ ಕಾಲದಿಂದ ಮಾತ್ರವಲ್ಲದೆ, ಇತಿಹಾಸ ಪೂರ್ವಕಾಲದಿಂದಲೂ ಮಾನವ ಸಂಸ್ಕೃತಿಯ ಆಕಾರಗಳನ್ನು ನೀಡುತ್ತಾ ಬಂದಿದೆ. ಈ ಪ್ರದೇಶವು ಅನೇಕ ವೈಶಿಷ್ಟ್ಯತೆಗಳಿಂದ ಕೂಡಿದೆ. ಅಂತಹ ವೈಶಿಷ್ಟ್ಯತೆಯು ಪ್ರಾಗಿತಿಹಾಸಿಕವಾಗಿಯೂ, ಐತಿಹಾಸಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಅಥವಾ ರಾಜಕೀಯವಾಗಿಯೂ ಮಹತ್ವವನ್ನು ಹೊಂದಿರುತ್ತದೆ. ಚರಿತ್ರೆಯ ಕಾಲದಿಂದ ಹಲವಾರು ಸಾಮ್ರಾಜ್ಯಗಳು, ಸಾಮಂತ ರಾಜಮನೆತನಗಳು ಆಳ್ವಿಕೆಯನ್ನು ಮಾಡಿವೆ. ಇದಕ್ಕೆ ಅನುಗುಣವಾಗಿ ಇತಿಹಾಸ ಮತ್ತು ಪುರಾತತ್ವ ಅವಶೇಷಗಳನ್ನು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಮಾಹಿತಿಯನ್ನು ನೀಡುವಲ್ಲಿ ಸಫಲವಾಗಿದೆ. ಹಿಂದಿನಿಂದಲೂ ಕರ್ನಾಟಕವು ಸರ್ವಧರ್ಮ ಸಮನ್ವಯ ಸಾಧಿಸಿದ ಭೂಮಿಯಾಗಿದೆ.

ಪ್ರಸ್ತುತ ಅಧ್ಯಯನದ ವಿಷಯವಾದ ನಂದಿಬೆಟ್ಟ ಪರಿಸರದ ಐತಿಹಾಸ ಮತ್ತು ಪುರಾತತ್ವ ವಿಷಯದ ಕುರಿತು ವಿವರವಾದ ಅಧ್ಯಯನಗಳು ನಡೆದಿರುವುದು ವಿರಳ. ನಂದಿಬೆಟ್ಟ ಪರಿಸರದ ಇತಿಹಾಸವನ್ನು ವಿಶ್ಲೇಷಣಾತ್ಮಕ ಹಾಗೂ ವಿವರಣಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನದ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಆ ಮೂಲಕ ಪರಿಸರದಲ್ಲಿನ ನವ ಶಿಲಾಯುಗ, ಬೃಹತ್ ಶಿಲಾಯುಗ ಕಾಲದ ನೆಲೆಗಳು, ಚಾರಿತ್ರಿಕ ಕಾಲಘಟ್ಟದ ದೇವಾಲಯಗಳು, ಮೂರ್ತಿಶಿಲ್ಪಗಳು ಹಾಗೂ ಪ್ರಾಚೀನ ಕಾಲದ ಕೆರೆಕಟ್ಟೆಗಳನ್ನು ಅಧ್ಯಯನ ನಡೆಸಲಾಯಿತು. ಒಟ್ಟಾರೆಯಾಗಿ ಈ ಪರಿಸರದ ಚರಿತ್ರೆಯನ್ನು ಸಮಗ್ರವಾಗಿ ರಚಿಸುವ ಸಲುವಾಗಿ ಸೂಕ್ಷ್ಮ ಸಂಗತಿಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ನೂತನ ಶಿಲಾಯುಗದ ಕಾಲದಿಂದ ಇತ್ತೀಚಿನ ಕಾಲದವರೆಗೆ ಈ ಪ್ರದೇಶದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಮಾನವ ತನ್ನ ಪ್ರಭಾವ ಬೀರಿರುವುದನ್ನು ಈ ಪರಿಸರದ ಅಧ್ಯಯನದಿಂದ ತಿಳಿಯಬಹುದಾಗಿದೆ.

ನಂದಿಬೆಟ್ಟ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಷಯವನ್ನು ಆಯ್ದುಕೊಂಡು ವಿವರವಾದ ಕ್ಷೇತ್ರಕಾರ್ಯ ಕೈಗೊಳ್ಳಲಾಯಿತು. ಈ ಪ್ರದೇಶದಲ್ಲಿ ನವಶಿಲಾಯುಗದಿಂದ ಇತಿಹಾಸ ಆರಂಭಕಾಲದವರೆಗಿನ ನೆಲೆಗಳಿದ್ದು, ಅವುಗಳನ್ನು ಈಗಾಗಲೇ ಪತ್ತೆಹಚ್ಚುವ ಕಾರ್ಯ ನಡೆದಿದೆ. ನನ್ನ

ಅಧ್ಯಯನದ ಸಂದರ್ಭದಲ್ಲಿ ಒಂದು ಬೃಹತ್ ಶಿಲಾಯುಗ ನೆಲೆಯನ್ನು ಹುಡುಕುವ ಪ್ರಯತ್ನ ಮಾಡಲಾಗಿದೆ. ಈ ನೆಲೆಗಳು ಬಹುತೇಕ ಹಾಳಾಗಿದ್ದು, ಆಧುನಿಕ ಮಾನವನ ಹೆಚ್ಚಿದ ಕೃಷಿ ಚಟುವಟಿಕೆಗಳ ಕಾರಣದಿಂದ ತಮ್ಮ ಮೂಲ ಸ್ವರೂಪ ಕಳೆದುಕೊಂಡಿವೆ.

ಇತಿಹಾಸ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಈ ಭಾಗದಲ್ಲಿ ಪಲ್ಲವ ಗಂಗ, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು, ಹೈದರ್, ಟಿಪ್ಪುಸುಲ್ತಾನ್, ಚಿಕ್ಕಬಳ್ಳಾಪುರ ಮತ್ತು ಆವತಿಯ ಪಾಳೆಗಾರರು ಈ ಪರಿಸರದಲ್ಲಿ ಆಳ್ವಿಕೆ ಮಾಡಿರುವುದನ್ನು ಕಾಣಬಹುದು. ಹಾಗೂ ಇವರ ಕಾಲದಲ್ಲಿ ನಿರ್ಮಿಸಲ್ಪಟ್ಟ ದೇವಾಲಯಗಳು, ಕೋಟೆಕೊತ್ತಲುಗಳು, ಶಾಸನಗಳ ಸಹಾಯದಿಂದ ತಿಳಿಯಬಹುದಾಗಿದೆ. ಈ ಅಧ್ಯಯನದಲ್ಲಿ ಬರುವ ಪರಿಸರದ ಚರಿತ್ರೆಯನ್ನು ವಿವರಣಾತ್ಮಕವಾಗಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಈ ಪರಿಸರದಲ್ಲಿ ಶೈವ, ವೈಷ್ಣವ ಹಾಗೂ ಜೈನಪಂಥಾಚರಣೆಗಳು ಅಸ್ತಿತ್ವದಲ್ಲಿರುವುದು ಅಲ್ಲಿರುವ ಶಾಸನಗಳು, ದೇವಾಲಯಗಳು ಹಾಗೂ ಮೂರ್ತಿಶಿಲ್ಪಗಳಲ್ಲಿ ಅಭಿವ್ಯಕ್ತವಾಗಿದೆ. ಇವುಗಳ ಅಧ್ಯಯನದಿಂದ ಆರಂಭದಲ್ಲಿ ಜೈನಧರ್ಮ ಪ್ರಭಾವವಿದ್ದರೂ, ಅನಂತರ ಚೋಳರ ಕಾಲದಲ್ಲಿ ಶೈವಧರ್ಮ ಹಾಗೂ ತದನಂತರ ಕಾಲದಲ್ಲಿ ವೈಷ್ಣವಧರ್ಮ ಹೆಚ್ಚು ಪ್ರಭಾವಶಾಲಿಯಾಗಿದ್ದಿತೆಂದು ತಿಳಿಯುವುದರ ಜೊತೆಗೆ ಹೈದರ್ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಇಸ್ಲಾಂ ಧರ್ಮವೂ ಸಹ ಪ್ರಚಲಿತದಲ್ಲಿ ಇತ್ತು ಎನ್ನುವುದಕ್ಕೆ ಸಾಕ್ಷಿಯಾಗಿ ಧರ್ಮಪುರಿ ಎಂದು ಕರೆಯುತ್ತಿದ್ದ ಇಂದಿನ ಸುಲ್ತಾನ್‌ಪೇಟೆಯನ್ನು ಟಿಪ್ಪುಸುಲ್ತಾನ ಬಂದ ಮೇಲೆ ಪರ್ಷಿಯನ್ ಭಾಷೆಯ ಪರಿಣಾಮವಾಗಿ ಈ ಹೆಸರು ಬಂದಿದೆ ಹಾಗೂ ಇದಕ್ಕೆ ಸಾಕ್ಷಿಯಾಗಿ ಇಲ್ಲಿ ಮಸೀದಿಗಳನ್ನು ಕಾಣಬಹುದು.

ಇಲ್ಲಿ ಆಳ್ವಿಕೆ ಮಾಡಿದಂತಹ ಅರಸರು ದೇವಾಲಯಗಳನ್ನು ನಿರ್ಮಿಸುವಲ್ಲಿ ನಿರ್ಲಕ್ಷ್ಯ ತೋರಿಸುವುದು ಕಂಡುಬರುತ್ತದೆ. ಇಲ್ಲಿನ ದೇವಾಲಯಗಳು ಪಲ್ಲವ, ಗಂಗರು, ಚೋಳರು, ವಿಜಯನಗರ ಅರಸರ ಕಾಲದಲ್ಲಿ ದ್ರಾವಿಡ ವಾಸ್ತುಶೈಲಿಯಲ್ಲಿ ನಿರ್ಮಾಣಗೊಂಡಿವೆ. ಈ ಅಧ್ಯಯನದಲ್ಲಿ ಇಲ್ಲಿನ ದೇವಾಲಯಗಳ ರಚನೆ, ವಾಸ್ತುಶಿಲ್ಪ ಶೈಲಿ ಮುಂತಾದ ಸೂಕ್ಷ್ಮ ವಿಷಯಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಒಂದು ರಾಜ್ಯದ ರಕ್ಷಣೆಗೆ ಕೋಟೆ ಪ್ರಮುಖ ಪಾತ್ರವಹಿಸುತ್ತದೆ. ಅಂತಹ ಸುಭದ್ರ ಕೋಟೆಯನ್ನು ಇಂದಿಗೂ ಬೆಟ್ಟದಲ್ಲಿ ಕಾಣಬಹುದಾಗಿದೆ. ಕೋಟೆಯ ರಚನೆ, ಬೃಹತ್ತಾದ ಬಾಗಿಲುಗಳು, ತೆನೆಯ ಅಲಂಕಾರ, ಬುರುಜು-ಬತೇರಿಗಳು ಹಾಗೂ ಕೋಟೆಯೊಳಗಿನ ಸ್ಮಾರಕಗಳಾದ ಮದ್ದಿನಮನೆ, ಕಟ್ಟಡಗಳು, ನೀರಿನ ತಾಣಗಳು, ದೇವಾಲಯಗಳು ಮುಂತಾದವುಗಳನ್ನು ಕುರಿತು ಸಮಗ್ರವಾಗಿ ವಿವರಿಸಲಾಗಿದೆ. ಪ್ರಸ್ತುತ ಸ್ಮಾರಕಗಳ ರಕ್ಷಣಾ ಕಾರ್ಯ ಮಾಡಿ ಪೂರ್ವಜರ ಸಂಸ್ಕೃತಿಯ ಕುರುಹುಗಳಾಗಿರುವ ಕೋಟೆ-ಕೊತ್ತಲುಗಳನ್ನು ಉಳಿಸುವುದು ಅವಶ್ಯಕವಾಗಿದೆ.

ಈ ಪ್ರದೇಶದಲ್ಲಿ ಮೂರ್ತಿಶಿಲ್ಪಗಳು ಅಂದರೆ ಗಾರೆ, ಲೋಹ, ಮರದ ಪ್ರತಿಮೆಗಳು ಲಭ್ಯವಾದ ಪ್ರಮಾಣ ಕಡಿಮೆ ಎನ್ನಬಹುದು. ಇವುಗಳು ಪಲ್ಲವ, ಗಂಗ, ಚೋಳ ಕಾಲದಿಂದ ವಿಜಯನಗರದ ಕಾಲದಲ್ಲಿ ನಿರ್ಮಿಸಲ್ಪಟ್ಟ ಶಿಲ್ಪಾವಶೇಷಗಳಾಗಿವೆ. ಇವುಗಳು ರಚನೆಯ ವಿಧಾನದಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಗುರ್ತಿಸುವ ಪ್ರಯತ್ನ ಮಾಡಲಾಗಿದೆ. ಈ ಪ್ರದೇಶವು ಬಯಲು ಸೀಮೆಯಾದ್ದರಿಂದ ಜೀವಂತ ನದಿಗಳಿಲ್ಲ. ಆದರೆ ನಂದಿಬೆಟ್ಟ ಪಂಚನದಿಗಳ ಉಗಮಸ್ಥಾನವಾಗಿದ್ದರೂ, ನದಿಗಳು ಹುಟ್ಟುತ್ತವೆ. ಆದರೆ ಅವು ಗುಪ್ತಗಾಮಿನಿಯಾಗಿ ಹರಿಯುತ್ತವೆ. ಇದರಿಂದ ಸುತ್ತಲಿನ ಜನರಿಗೆ ಯಾವುದೇ ರೀತಿಯ ಪ್ರಯೋಜನವಿಲ್ಲ. ಈ ಭಾಗದಲ್ಲಿ ಕೃಷಿ ಚಟುವಟಿಕೆಗಳು ಹೆಚ್ಚಾಗಿದ್ದು, ಮಳೆಯನ್ನು ಅವಲಂಬಿಸಲಾಗಿದೆ. ಕೆರೆ-ಕಟ್ಟೆಗಳನ್ನು ಆಕ್ರಮಿಸಿಕೊಂಡಿರುವುದರಿಂದ ಅಥವಾ ಒತ್ತುವರಿ ಮಾಡಿಕೊಂಡಿರುವುದರಿಂದ, ಅವುಗಳ ಅಸ್ತಿತ್ವವು ಕಡಿಮೆಯಾಗಿದೆ. ಇತ್ತೀಚೆಗಂತೂ ಬೆಟ್ಟದ ತಪ್ಪಲು ಪ್ರದೇಶವನ್ನು ಕೃಷಿಗಾಗಿ ಕಬಳಿಸುತ್ತಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಫಲಿತಗಳು ಅಧ್ಯಯನ ಸಂದರ್ಭದಲ್ಲಿ ಕಂಡುಬಂದವು. ವಿಶೇಷವಾಗಿ ಹೊಸ ಪ್ರಾಚೀನ ನೆಲೆಗಳನ್ನು ಗುರುತಿಸುವ ಹಾಗೂ ಇಲ್ಲಿರುವ ದೇವಾಲಯಗಳು, ಮೂರ್ತಿಶಿಲ್ಪ ಕೋಟೆ ಹಾಗೂ ಕೆರೆ-ಕಟ್ಟೆಗಳನ್ನು ಸಮಗ್ರವಾಗಿ ಅಧ್ಯಯನಕ್ಕೆ ಒಳಪಡಿಸಲಾಯಿತು. ಈ ಹಿಂದಿನ ಅಧ್ಯಯನಗಳು ಹೆಚ್ಚಿನ ಸಮಗ್ರತೆಯನ್ನು ಪಡೆದಿರುವುದಿಲ್ಲ ಎಂಬ ಹಿನ್ನೆಲೆಯಲ್ಲಿ ಇಂತಹ ಕೊರತೆಯನ್ನು ನೀಗಿಸುವ ಪ್ರಯತ್ನವನ್ನು ಕೈಗೊಳ್ಳಲಾಯಿತು. ಕ್ಷೇತ್ರಕಾರ್ಯದ ಮೂಲಕ ಪುರಾತತ್ವ ಆಕರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಇತಿಹಾಸ ನಿರ್ಮಿಸುವ ಪ್ರಯತ್ನವನ್ನು ಮಾಡಲಾಗಿದೆ. ಇದೂವರೆವಿಗೂ ಪ್ರಕಟಣೆಯಾಗಿರದ ಹೊಸ ನೆಲೆಗಳನ್ನು ಪತ್ತೇಹಚ್ಚುವ ಹಾಗೂ ಅರ್ಥೈಸುವ ಪ್ರಯತ್ನ ಇಲ್ಲಿದೆ. ಹಾಗೆಯೇ ಚಾರಿತ್ರಿಕ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಈ ಪ್ರದೇಶದಲ್ಲಿ ಹಲವಾರು ಶಾಸನಗಳು ಪ್ರಕಟವಾಗಿದ್ದರೂ, ಅವುಗಳನ್ನು ಕ್ರಮಬದ್ಧವಾದ ಹಾಗೂ ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಲಾಯಿತು. ಹಾಗೂ ಇಲ್ಲಿನ ಕೆಲವು ದೇವಾಲಯಗಳನ್ನು ಮಾತ್ರ ಕುರಿತು ಅಧ್ಯಯನ ನಡೆಸಲಾಗಿದ್ದು, ಪರಿಸರದಲ್ಲಿ ಕಂಡುಬರುವ ಇನ್ನಿತರ ದೇವಾಲಯಗಳ ಸಮಗ್ರ ಅಧ್ಯಯನ ನಡೆದಿಲ್ಲ. ಈ ಕೊರತೆಯನ್ನು ತುಂಬಿ ಕೊಡುವ ಪ್ರಯತ್ನ ಮಾಡಲಾಗಿದೆ. ಕೋಟೆಯ ಬಗ್ಗೆ ಸಮಗ್ರ ಹಾಗೂ ವಿಶ್ಲೇಷಣಾತ್ಮಕವಾದ ಅಧ್ಯಯನ ಮಾಡಲಾಗಿದೆ. ಪ್ರಾಚೀನ ಕಾಲದಿಂದಲೂ ಈ ಪರಿಸರದ ನೀರಾವರಿ ವ್ಯವಸ್ಥೆಯನ್ನು ಕುರಿತು ಸಮಗ್ರವಾಗಿ ಅಧ್ಯಯನ ಕೈಗೊಳ್ಳಲಾಗಿದೆ.

ಇಲ್ಲಿನ ಪರಿಸರದಲ್ಲಿ ಕಂಡುಬರುವ ವಿವಿಧ ಬಗೆಯ ಸಸ್ಯವರ್ಗ, ವನ್ಯಸಂಪತ್ತು, ಮಣ್ಣಿನ ಪ್ರಭೇದಗಳು, ನೀರಿನ ಮೂಲಗಳು, ಹವಾಗುಣ ಮುಂತಾದ ವಿಷಯಗಳ ಬಗ್ಗೆ ಸಮಗ್ರವಾದ ಮಾಹಿತಿಯನ್ನು ಕಲೆಹಾಕಲಾಗಿದೆ. ಇಲ್ಲಿನ ಪ್ರದೇಶದಲ್ಲಿ ಸಿಕ್ಕಿರುವ ಶಾಸನಗಳು ಮಾತ್ರ ವಿರಳವೆನ್ನಬಹುದು.

ಆದರೂ ಶಾಸನಗಳಿಂದ ಈ ಭಾಗದ ಆಡಳಿತ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ದೇವಾಲಯಗಳ ನಿರ್ಮಾಣ ಮತ್ತು ನಿರ್ಮಾತೃಗಳ ಬಗ್ಗೆ ಮತ್ತು ಇನ್ನಿತರ ಚಟುವಟಿಕೆಯನ್ನು ತಿಳಿಯಬಹುದಾಗಿದೆ. ಇಲ್ಲಿನ ಶಾಸನಗಳು ಕನ್ನಡ, ತೆಲುಗು, ಸಂಸ್ಕೃತ ಭಾಷೆಯಲ್ಲಿ ದೊರೆತಿದ್ದು ಅಂದಿನಿಂದಲೇ ಈ ಪ್ರದೇಶದಲ್ಲಿ ತೆಲುಗು ಭಾಷೆಯ ಪ್ರಭಾವ ಕಂಡುಬರುತ್ತದೆ. ಪ್ರಬಂಧದ ಪ್ರಮುಖ ಸಾರವೆಂದರೆ ನಂದಿಬೆಟ್ಟದ ಪ್ರಾಚೀನ ಗತವೈಭವದ ಬದುಕಿನ ಮೇಲೆ ಬೆಳಕು ಚೆಲ್ಲುವುದಾಗಿದೆ. ಪ್ರಸ್ತುತ ಅಧ್ಯಯನದ ಇತಿಮಿತಿಗಳಲ್ಲಿ ಆಕಾರಗಳನ್ನು ಸಂಗ್ರಹಿಸಿ ವಿಷಯವನ್ನು ವಿಶ್ಲೇಷಿಸಿ, ಸಂಯೋಜಿಸಿಕೊಂಡು, ನಂದಿಬೆಟ್ಟ ಪರಿಸರದ ಪುರಾತತ್ವ ಅಧ್ಯಯನದ ಹಿನ್ನೆಲೆಯಲ್ಲಿ ಈ ದೇವಾಲಯಗಳೊಂದಿಗೆ ಕಂಡುಬರುವ ಐತಿಹಾಸಿಕ ವಿಚಾರಗಳನ್ನು ಕ್ಷೇತ್ರಕಾರ್ಯ ಮಾಡಿ ಅಧ್ಯಯನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ವಿವರಿಸಲಾಗಿದೆ. ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮಹತ್ವ ಪಡೆದ ನಂದಿಬೆಟ್ಟದ ದೇವಾಲಯ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದೆ. ಈ ಪರಿಸರದ ದೇವಾಲಯಗಳು ಮತ್ತು ಸ್ಮಾರಕಗಳನ್ನು ರಕ್ಷಿಸುವ ಹೊಣೆ ಪುರಾತತ್ವ ಇಲಾಖೆ ಮತ್ತು ಗ್ರಾಮಸ್ಥರದ್ದಾಗಿದೆ. ಅಲ್ಲಿ ಪಾಳು ಬಿದ್ದಿರುವ ಸ್ಮಾರಕಗಳನ್ನು ಮತ್ತೆ ಜೀರ್ಣೋದ್ಧಾರ ಮಾಡಿ ಸಾಂಸ್ಕೃತಿಕ ಕಾರ್ಯಗಳಿಗೆ ಮತ್ತೆ ಚಾಲನೆ ನೀಡಬಹುದು. ನಶಿಸುತ್ತಿರುವ ಅವುಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯಬಹುದು.

ಸಂಶೋಧನೆ ಎಂಬುದು ನಿಂತ ನೀರಲ್ಲ. ನಿರಂತರವಾಗಿ ಬದಲಾವಣೆಗೊಳ್ಳುವುದಾಗಿದೆ. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಕ್ಷೇತ್ರವು ಸಾಗರದಷ್ಟು ವಿಸ್ತಾರವಾದುದು. ಎಲ್ಲಾ ದಾಖಲೆಗಳು ಮತ್ತು ಪುರಾತತ್ವ ಆಕಾರಗಳನ್ನು ಒಂದೆಡೆ ಕಲೆ ಹಾಕಿ ಅಧ್ಯಯನ ಮಾಡಿದ್ದೇವೆಂದು ಹೇಳಿಕೊಳ್ಳಲು ಯಾರಿಗೂ ಸಾಧ್ಯವಾಗುವುದಿಲ್ಲ. ಏಕೆಂದರೆ ಪ್ರತಿದಿನವೂ ಹೊಸಹೊಸ ವಿಷಯಗಳು ಬೆಳಕಿಗೆ ಬರುತ್ತಲೇ ಇವೆ. ಇದಕ್ಕೆ ಕಾರಣ ನಿರಂತರವಾಗಿ ಬದಲಾವಣೆಗೊಳ್ಳಗಾಗುವ ಪ್ರಕೃತಿ, ಭೂಮಿಯಲ್ಲೊ, ಬಾವಿಗಳಲ್ಲೊ ಹೂತು ಹೋಗಿರುವ ಶಾಸನಗಳು ಅನೇಕ ಕಾರಣಗಳಿಂದ ಬೆಳಕು ಕಾಣುತ್ತಲೇ ಇರುತ್ತವೆ. ಒಟ್ಟಾರೆ ಅಧ್ಯಯನದ ಮುಖ್ಯ ಉದ್ದೇಶವೆಂದರೆ ನಂದಿಬೆಟ್ಟ ಪರಿಸರದ ಚರಿತ್ರೆ ಮತ್ತು ಪುರಾತತ್ವವನ್ನು ಮರೆತು ಹೋಗಿರುವ ಚಾರಿತ್ರಿಕ ವಿಷಯಗಳನ್ನು ಪುನರ್ ಪರಿಶೀಲಿಸಿ ಈ ಪ್ರದೇಶದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಈ ಸಂಪ್ರಬಂಧದ ರಚನೆಯ ಮೂಲಕ ಮಾಡಲಾಗಿದೆ.

ಅನುಬಂಧಗಳು

೧. ನಕ್ಷೆಗಳು


೨. ಗ್ರಂಥಋಣ

೩. ಛಾಯಾಚಿತ್ರಗಳು


೧

ನಕ್ಷೆಗಳು


ಚಿಕ್ಕಬಳ್ಳಾಪುರ ತಾಲೂಕು



ಚಿಕ್ಕಬಳ್ಳಾಪುರ ಜಿಲ್ಲೆ



ನಂದಿಬೆಟ್ಟ



ಗ್ರಂಥ ಋಣ

೧. ಅಪರ್ಣ ಕೂ.ಸ., ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೧೯೯೯

೨. ಬಾಲಸುಬ್ರಮಣ್ಯ, ವಾಸುದೇನ್ ಸಿ.ಎಸ್., ರಮೇಶ್ ನಾಯಕ್, ಕರ್ನಾಟಕ ದೇವಾಲಯ ಕೋಶ, ಗದಗ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೭

೩. ಚೆನ್ನಬಸಪ್ಪ ಎಸ್. ಪಾಟೀಲ್, ಕರ್ನಾಟಕದ ಕೋಟೆಗಳು ಸಂ.೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೧೯೯೯

೪. ಚಂದ್ರಶೇಖರಯ್ಯ ಬಿ.ಎಂ., ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಪರಂಪರೆ, ಸಿ.ವಿ.ಜಿ ಪ್ರಕಾಶನ, ಬೆಂಗಳೂರು, ೨೦೦೫

೫. ಚಿತ್ತರಂಜನ್ ಹೆಚ್.(ಸಂ), ಕೋಲಾರ ಜಿಲ್ಲಾ ಗೆಜೆಟಿಯರ್, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೨೦೦೫

೬. ಚಿದಾನಂದ ಮೂರ್ತಿ ಎಂ., ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಪ್ರಸಾರಾಂಗ, ಮೈಸೂರು, ೧೯೭೯

೭. ದೀಕ್ಷಿತ್ ಜಿ.ಎಸ್., ಕುಪ್ಪಸ್ವಾಮಿ ಜಿ.ಆರ್., ಮೋಹನ್ ಎಸ್.ಕೆ., ಕರ್ನಾಟಕದಲ್ಲಿ ಕೆರೆ ನೀರಾವರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೦

೮. ದೇವರಕೊಂಡಾರೆಡ್ಡಿ, ಗಂಗರ ಶಿಲ್ಪಕಲೆ, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು, ೧೯೯೩

೯. ದೇವರಕೊಂಡಾರೆಡ್ಡಿ, ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೦. ಗೋಪಾಲ್ ಆರ್.(ಸಂ), ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಹೊಸಪೇಟೆ, ೨೦೦೪

೧೧. ಗುರುರಾಜ್ ರಾವ್ ಬಿ.ಕೆ., ಕರ್ನಾಟಕ ಶಿಲಾಯುಗ ಸಂಸ್ಕೃತಿಗಳು, ಮೈಸೂರು ೧೯೭೦

೧೨. ಗೋಪಾಲ್ ಆರ್.ಬಿ., ಕರ್ನಾಟಕದಲ್ಲಿ ನವಶಿಲಾಯುಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧

೧೩. ಹಯವದನ್ ರಾವ್, ಮೈಸೂರು ಗೆಜೆಟಿಯರ್, ಸಂಪುಟ-೫, ಮೈಸೂರು

೧೪. ಜ್ಞಾನಾನಂದ ಜಿ., ಶಿಲ್ಪದರ್ಶನ ಸಂಪುಟ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೨

೧೫. ಕಾಮತ್ ಎಸ್.ಯು.(ಸಂ), ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-೨, ಕರ್ನಾಟಕ ರಾಜ್ಯಸರ್ಕಾರ, ಬೆಂಗಳೂರು, ೧೯೮೬

೧೬. ಕಲ್ಬುರ್ಗಿ ಎಂ.ಎಂ., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೧೯೯೯

೧೭. ಕೊಟ್ರಯ್ಯ ಸಿ.ಟಿ.ಎಂ., ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೧

೧೮. ಕೃಷ್ಣ ಎಂ.ಎಚ್.(ಸಂ), ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್, ೧೯೩೨-೧೯೪೦

೧೯. ಕಲ್ಬುರ್ಗಿ ಎಂ.ಎಂ., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು (ಸಂ-೧), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೧೯೯೯

೨೦. ಕಪಟರಾಳ ಕೃಷ್ಣರಾಯರು, ಕರ್ನಾಟಕ ಸಂಸ್ಕೃತಿ ಶೋಧನೆ, ಧಾರವಾಡ, ೧೯೭೦

೨೧. ಕೃಷ್ಣರಾವ್ ಎಂ.ವಿ., ಕೇಶವಭಟ್ ಎಂ., ಕರ್ನಾಟಕ ಇತಿಹಾಸ ಸಂದರ್ಶನ, ಬೆಂಗಳೂರು ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ೧೯೭೦

೨೨. ಮಹದೇವ ಸಿ., ವಿಜಯನಗರದ ಗಾರೆಶಿಲ್ಪ, ಪುರಾತತ್ವ ವಿಭಾಗದ ಪ್ರಕಟಣೆ-೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೨

೨೩. ಮಹದೇವ ಸಿ., ಕರ್ನಾಟಕ ಪುರಾತತ್ವ ಶೋಧ, ಶ್ರೀಲಕ್ಷ್ಮಿ ಪ್ರಕಾಶನ, ಶ್ರೀರಂಗಪಟ್ಟಣ, ೨೦೦೧

೨೪. ಮೂರ್ತಿ ಕೆ.ಎಸ್.ಎನ್., ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ, ತುಮಕೂರು, ರಂಜಿತಾ ಪ್ರಕಾಶನ, ೧೯೯೮

೨೫. ಮುಗಳಿ ರಂ.ಶ್ರೀ.(ಅನು), ಕರ್ನಾಟಕ ಸಾಂಸ್ಕೃತಿಕ ಪರಂಪರೆ, ಶಾಸ್ತ್ರಿ ಕೆ.ಜಿ. ಮತ್ತು ಪಾಟೀಲ್, ಧಾರವಾಡ

೨೬. ನರಸಿಂಹಮೂರ್ತಿ, ಕರ್ನಾಟಕದಲ್ಲಿ ಪುರಾತತ್ವ ಶೋಧನೆ, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, ೧೯೮೩

೨೭. ನೀಲತ್ತ ಹಳ್ಳಿ ಕಸ್ತೂರಿ (ಅನು), ಕರ್ನಾಟಕ ಕೆರೆ ನೀರಾವರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೦

೨೮. ಪ್ರಭಾಕರ್ ಎಂ.ಎನ್., ದೇವಾಲಯಗಳ ವಾಸ್ತು ಚಂದ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೨

೨೯. ಪಾಟೀಲ ಸಿ.ಎಸ್., ಕರ್ನಾಟಕದ ಕೋಟೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೦

೩೦. ಪಂಚಮುಖಿ ಆರ್.ಎಸ್., ಕರ್ನಾಟಕ ಅರಸುಮನೆತನಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ

೩೧. ರೈಸ್ ಬಿ.ಎಲ್., ಮೈಸೂರು ಗೆಜೆಟಿಯರ್ ಸಂಪುಟ ೧೧, ಮೈಸೂರು ಸರ್ಕಾರ, ಮೈಸೂರು ೧೮೯೭

೩೨. ರಮೇಶ್ ನಾಯ್ಕ, ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೭

೩೩. ರಂಗಸ್ವಾಮಿ ಎಸ್.ಎನ್., ಕರ್ನಾಟಕ ಪ್ರೌಢ ಇತಿಹಾಸ, ಮೈಸೂರು, ೨೦೦೪

೩೪. ರಾಮಚಂದ್ರ ರಾವ್ ಎಸ್.ಕೆ., ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫

೩೫. ರಾಜಶೇಖರ್ ಎಸ್ ., ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ್ ಪಬ್ಲಿಕೇಷನ್ಸ್ , ಧಾರವಾಡ, ೧೯೭೫

೩೬. ಷೇಕ್ ಅಲಿ ಬಿ.(ಪ್ರ.ಸಂ), ಸುಂದರ (ಸಂಪುಟ ಸಂಪಾದಕರು), ಕರ್ನಾಟಕ ಚರಿತ್ರೆ ಸಂಪುಟ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೧೯೯೭

೩೭. ಸುರೇಶ್ ಕೆ.ಎಂ., ವಾಸುದೇವಬಡಿಗೇರ, ಮಡಲಗೇರಿ ಕೊಟ್ರೇಶ್, ಸೋಮಶೇಖರ್ ಎಸ್ .ವೈ., ಕರ್ನಾಟಕ ದೇವಾಲಯಗಳ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೧೯೯೯

೩೮. ಶಿವರಾಮ ಕಾರಂತ ಭಾರತೀಯ ಶಿಲ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫

೩೯. ಸದಾಸಶಿವ ಕೆ., ಕರ್ನಾಟಕ ಸಂಕ್ಷಿಪ್ತ ಚರಿತ್ರೆ, ಮೈಸೂರು, ಚೇತನ್ ಬುಕ್ ಹೌಸ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೨೦೦೧

೪೦. ಶ್ರೀಕಂಠಶಾಸ್ತ್ರಿ ಎಸ್., ಪುರಾತತ್ವಶೋಧನೆ, ಮೈಸೂರು, ೧೯೬೦

೪೧. ಶಿವರುದ್ರಸ್ವಾಮಿ ಎಸ್.ಎನ್., ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ತಿಪಟೂರು ಮತ್ತು ಮೈಸೂರು, ಪೌರಸ್ತ್ಯ ಪ್ರಕಾಶನ, ೨೦೦೪

೪೨. ಶ್ರೀನಿವಾಸ ಮೂರ್ತಿ ಎಚ್.ವಿ. ಮತ್ತು ರಾಮಕೃಷ್ಣ ಆರ್., ಸಮಗ್ರ ಕರ್ನಾಟಕ ಚರಿತ್ರೆ ಬೆಂಗಳೂರು, ೧೯೯೫

೪೩. ಶಿವತಾರಕ್ ಕೆ.ಬಿ., ಕರ್ನಾಟಕ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೧

೪೪. ತಿಪ್ಪೇಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, ೧೯೯೭

೪೫. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, ೧೯೯೨

೪೬. ತಂಬಂಡ ವಿಜಯ್ ಪೂಣಚ್ಚ(ಸಂ), ಚರಿತ್ರೆ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೧

೪೭. ವಸು ಎಂ.ವಿ., ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೧

೪೮. ವಸು ಎಂ.ವಿ., ಮೌಖಿಕ ಇತಿಹಾಸ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೪

೪೯. ವಾಸುದೇವನ್ ಸಿ.ಎಸ್., ಹಂಪಿ ಪರಿಸರದ ಕೆರೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೧

ಪತ್ರಿಕೆ, ಗೆಜೆಟಿಯರ್ ಮತ್ತು ವರದಿಗಳು

ವಿಜಯ ಕರ್ನಾಟಕ

ಹೊಸದಿಗಂತ ಪತ್ರಿಕೆ

ಇತಿಹಾಸ ದರ್ಶನ ಬೆಂಗಳೂರು



ನಂದಿಬೆಟ್ಟ



ಅಮೃತಕೊಳ ಅಥವಾ ಸರೋವರ



ಪಾತಾಳ ಗಂಗೆ



ಅರ್ಕಾವತಿ ಉಗಮಸ್ಥಾನ




ಕ್ಷೀರನದಿ ಹುಟ್ಟುವ ಸ್ಥಳ



ನಂದಿಬೆಟ್ಟ ಮತ್ತು ಅದಕ್ಕೆ ಹೊಂದಿಕೊಂಡ ಬೆಟ್ಟಗಳಸಾಲು



ಯಲುವಳ್ಳಿಯ ವೀರಗಲ್ಲು



ಯಲುವಳ್ಳಿಯ ಮಹಾಸತಿಗಲ್ಲು



ಭಿತ್ತಿ ಚಿತ್ರಗಳು



ಭೋಗನಂದೀಶ್ವರ ದೇವಾಲಯದ ಜಾಲಂಧ್ರದ ವಿಷ್ಣುದುರ್ಗಿ



ರಾಮನುಜಾ ಚಾರ್ಯ



ರಂಗಸ್ಥಳದ ರಂಗನಾಥಸ್ವಾಮಿ



ಜಾಲಂಧ್ರ



ವಸಂತ ಮಂಟಪ



ಭೋಗನಂದೀಶ್ವರ ದೇವಾಲಯದ ಮುಖ್ಯದ್ವಾರ



ಭೋಗನಂದೀಶ್ವರ ದೇವಾಲಯದ ಪಾರ್ಶ್ವನೋಟ



ಕುಪ್ಪಳ್ಳಿ ಕೆರೆ



ನಂದಿಬೆಟ್ಟದ ಸುತ್ತಲಿನ ವಿಹಂಗಮ ನೋಟ



ರಾಜಘಟ್ಟದ ವೀರಗಲ್ಲು



ಕಂದವಾರದ ಕೆರೆ



ಭೋಗ ನಂದೀಶ್ವರ



ಗೋಪಿನಾಥ ಬೆಟ್ಟದ ದೇವಾಲಯ



ಭೋಗನಂದೀಶ್ವರ ದೇವಾಲಯ



ಶೃಂಗೀತೀರ್ಥ (ಭೋಗನಂದೀಶ್ವರ ದೇವಾಲಯದ ಆವರಣದಲ್ಲಿದೆ)



ಉಮಾಮಹೇಶ್ವರ



ಅರುಣಾಚಲೇಶ್ವರ ದೇವಾಲಯ



ಉಮಾಮಹೇಶ್ವರ ದೇವಾಲಯದ ಕಲ್ಯಾಣಮಂಟಪದ ಕಂಬ



ಬೆಟ್ಟದ ಮೇಲಿನ ಯೋಗ ನಂದೀಶ್ವರ ದೇವಾಲಯ



ನಂದಿಬೆಟ್ಟದ ಕೋಟೆ



ಧ್ಯಾನ ಮುದ್ರೆಯಲ್ಲಿರುವ ಚೋಳರಾಜ



ಅರುಣಾಚಲೇಶ್ವರ ದೇವಾಲಯದ ಜಾಲಂಧ್ರದ ಮಹಿಷಾಸುರಮರ್ಧಿನಿ



ಭೋಗನಂದೀಶ್ವರ ದೇವಾಲಯದ ಕಲ್ಲಿನ ಛತ್ರಿ